ಹಂಪಿ ಕನ್ನಡ ವಿಶ್ವವಿದ್ಯಾಲಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ

ಸಂಪ್ರಬಂಧದ ವಿಷಯ

# ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತಗಳು'- ಮೂಲ ಆಂಗ್ಲಕವನಗಳು : ಒಂದು ತೌಲನಿಕ ಅಧ್ಯಯನ

ಮಾರ್ಗದರ್ಶಕರು

ಪ್ರೊ॥ ಎಚ್.ಎಸ್.ಹರಿಶಂಕರ್,

ಮೈಸೂರು.

ಸಂಶೋಧನಾ ವಿಧ್ಯಾರ್ಥಿನಿ

ಗಂಗಾಂಬಿಕೆ. ಎಸ್

ಬೆಂಗಳೂರು.

ವರ್ಷ: 2007-2008

ಅಧ್ಯಯನ ಕೇಂದ್ರ

ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,

3ನೇ ಮುಖ್ಯ ರಸ್ತೆ, ನರಸಿಂಹ ರಾಜ ಕಾಲೋನಿ

ಬೆಂಗಳೂರು - 560019

ಹಂಪಿ ಕನ್ನಡ ವಿಶ್ವವಿದ್ಯಾಲಕ್ಕೆ ಸಲ್ಲಿಸಿದ ಎಂ.ಫಿಲ್ ಸಂಪ್ರಬಂಧ

ಸಂಪ್ರಬಂಧದ ವಿಷಯ

# ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತಗಳು'- ಮೂಲ ಆಂಗ್ಲಕವನಗಳು : ಒಂದು ತೌಲನಿಕ ಅಧ್ಯಯನ

ಮಾರ್ಗದರ್ಶಕರು
ಪ್ರೊ॥ ಎಚ್.ಎಸ್.ಹರಿಶಂಕರ್,
ಮೈಸೂರು.

ಸಂಶೋಧನಾ ವಿಧ್ಯಾರ್ಥಿನಿ
ಗಂಗಾಂಬಿಕೆ. ಎಸ್
ಬೆಂಗಳೂರು.

ವರ್ಷ: 2007–2008

ಅಧ್ಯಯನ ಕೇಂದ್ರ
ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,
3ನೇ ಮುಖ್ಯ ರಸ್ತೆ, ನರಸಿಂಹ ರಾಜ ಕಾಲೋನಿ
ಬೆಂಗಳೂರು – 560019

# ಮಾರ್ಗದರ್ಶಕರ ದೃಢೀಕರಣ ಪತ್ರ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007-08ನೇ ಸಾಲಿನ ಎಂ.ಫಿಲ್., ಪದವಿಗಾಗಿ **'ಇಂಗ್ಲಿಷ್ ಗೀತೆಗಳು - ಮೂಲ ಆಂಗ್ಲ ಕವನಗಳು - ಒಂದು ತೌಲನಿಕ ಅಧ್ಯಯನ'** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಕುಮಾರಿ ಗಂಗಾಂಬಿಕೆ.ಎಸ್ ಅವರು ನನ್ನ ನೇರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ಈ ವಿದ್ಯಾರ್ಥಿಯ ಸ್ವಂತ ಬರಬಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಪ್ರೊ॥ ಎಚ್.ಎಸ್.ಹರಿಶಂಕರ್,

ಎಚ್.ಎಸ್.ಹರಿಶಂಕರ್

ಸಹಿ/-

ಸ್ಥಳ : ಬೆಂಗಳೂರು

ದಿನಾಂಕ : 05.10.2008.

# ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಕ್ಕೆ 2007-08 ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ಬಿ.ಎಂ.ಶ್ರೀ ಅವರ ಇಂಗ್ಲಿಷ್ ಗೀತಗಳು – ಮೂಲ ಆಂಗ್ಲ ಕವನಗಳು : ಒಂದು ತೌಲನಿಕ ಅಧ್ಯಯನ" ಎಂಬ ಶ್ರೀರ್ಷಿಕೆಯ ಈ ಸಂಪ್ರಬಂಧವನ್ನು** ಪ್ರೊ.ಎಚ್.ಎಸ್.ಹರಿಶಂಕರ್, ರವರ ಮಾರ್ಗದರ್ಶನಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು. ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿನಿ
ಗಂಗಾಂಬಿಕೆ. ಎಸ್,

ಸ್ಥಳ: ಬೆಂಗಳೂರು.
ದಿನಾಂಕ: 5. 10. 2008

ಗಂಗಾಂಬಿಕೆ . ಎಸ್
ಸಹಿ/-

| ಕ್ರಮಸಂಖ್ಯೆ | | ಪರಿವಿಡಿ | ಪುಟ ಸಂಖ್ಯೆ |
|---|---|---|---|
| 1. | | ಪೀಠಿಕೆ | 1 |
| | | ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ | 3 |
| 2. | | ಭಾವಗೀತೆ | 6 |
| | ಅ | ಅರ್ಥ | 6 |
| | ಆ | ಉಗಮ ಮತ್ತು ಬೆಳವಣಿಗೆ | 8 |
| | ಇ | ಪ್ರಕಾರಗಳು | 12 |
| | ಈ | ಬಿ.ಎಂ.ಶ್ರೀ ಪೂರ್ವದಲ್ಲಿ ಭಾವಗೀತೆಯ ಅನುವಾದಗಳು(ಇಂಗ್ಲಿಷ್‌ಗೆ ಸಂಬಂಧಿಸಿದಂತೆ): | 16 |
| 3. | | "ಇಂಗ್ಲಿಷ್ ಗೀತಗಳು" – ಪ್ರಭಾವ, ಪ್ರೇರಣೆ, ಉದ್ದೇಶ, ಮಹತ್ತ್ವ | 19 |
| | ಅ | ಬಿ.ಎಂ.ಶ್ರೀ ಮತ್ತು ಮೂಲ ಆಂಗ್ಲ ಕವನಗಳ ಕರ್ತೃಗಳ ಪರಿಚಯ | 19 |
| | ಆ | ಪ್ರೇರಣೆ ಮತ್ತು ಪ್ರಭಾವ | 31 |
| | ಇ | ಉದ್ದೇಶ ಮತ್ತು ಚಾರಿತ್ರಿಕ ಮಹತ್ತ್ವ | 32 |
| 4. | | "ಇಂಗ್ಲಿಷ್ ಗೀತಗಳು" ಕೃತಿಯಲ್ಲಿನ ವಿಶ್ವಕವಿತಾ ವಿಷಯಗಳು: ಅನುವಾದಗಳ ಸ್ವರೂಪ–ತೌಲನಿಕವಾಗಿ. | 34 |
| | | ಪ್ರಕೃತಿ ಗೀತೆಗಳು | 34 |
| | ಅ | ಪ್ರೇಮಗೀತೆಗಳು | 44 |
| | ಆ | ದೇಶಭಕ್ತಿಗೀತೆಗಳು | 56 |
| | ಇ | ಶೋಕಗೀತೆಗಳು | 67 |
| | ಈ | ಕೌಟುಂಬಿಕ ಗೀತೆ | 82 |
| | ಉ | ವಿಡಂಬನ (ವ್ಯಂಗ್ಯ) ಕವನ | 85 |
| | ಊ | ಭಕ್ತಿಗೀತೆ | 86 |
| | ಋ | ಕಥನ ಕವನ | 87 |
| | ಎ | ತಾತ್ವಿಕ ಗೀತೆಗಳು | 90 |
| | | ಉಪಸಂಹಾರ | 94 |
| | | ಆಕರಗಳು | 96 |

# ಅಧ್ಯಾಯ – 1

## ಅ. ಪೀಠಿಕೆ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮ್ಯಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನತೆಯೂ, ಬುದ್ಧಿ-ಭಾವಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ಸಾಮಾನ್ಯ ಭಾವನೆಗಳಿಗೆ ಕಲ್ಪನೆಯ ಮೆರುಗು ಹಚ್ಚಿ ಸಾಧಾರಣ ಮಾತುಗಳಿಗೆ ಚಿನ್ನದ ಲೇಪವಿಟ್ಟು ಬಣ್ಣಕಟ್ಟಿ ಬಣ್ಣಿಸಿದಾಗ ಸಾಹಿತ್ಯ ಮೈದಳೆಯುತ್ತದೆ. ನಿತ್ಯ ಸಂವರ್ತನಾ ಶೀಲವಾದ ಜಗತ್ತಿನ ಜ್ಞಾನ-ವಿಜ್ಞಾನ, ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರಸರಣ ಮಾಡುತ್ತಾ ಮನುಷ್ಯರ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣ ದೆಸೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ.

ಸಾಹಿತ್ಯವಾದರೂ ಹಲವು ಹತ್ತು ಪ್ರೇರಣೆ, ಪ್ರಭಾವ, ಹಿನ್ನಲೆಗಳಿಂದ ಪ್ರಭಾವಿತವಾಗುವಂತಹುದು. ಅದು ಏಕಕಾಲಕ್ಕೆ ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ನಡುವೆ ತನ್ನ ಉಳಿವನ್ನು ಕುರಿತಂತೆ ಅನುಸಂಧಾನವನ್ನು ನಡೆಸುವಂತಹುದು. ಆದ್ದರಿಂದಲೇ ಇಷ್ಟೊಂದು ದೀರ್ಘವಾದ ಚರಿತ್ರೆಯೂ, ಸಾರ್ಥಕತೆಯೂ, ಹೊಸ ಬಗೆಯ ಅನ್ವೇಷಣೆಯು, ಜೀವಂತಿಕೆಯು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅನನ್ಯವೆನ್ನುವಂತೆ ಉಳಿದುಕೊಂಡಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ವಿಶಾಲವಾದ ಪರಂಪರೆಯಿದೆ. 2 ನೆಯ ಶತಮಾನದಿಂದ 20 ನೆಯ ಶತಮಾನದವರೆಗಿನ ಕನ್ನಡ ಬೆಳೆಯನ್ನು ಶಾಸನಗಳು, ಪೂರ್ವಸಾಹಿತ್ಯ, ನಾಡಪದಗಳು, ಇಂದಿನ ಹೊಸ ಕವಿತೆ– ಹೀಗೆ ಸ್ಥೂಲವಾಗಿ ನಿರೂಪಿಸಬಹುದು.

ಪ್ರಾಚೀನ ಸಾಹಿತ್ಯಕ್ಕೆ ಸಂಸ್ಕೃತದ ಪ್ರಭಾವ ದಟ್ಟವಾದಂತೆ ಹೊಸಗನ್ನಡ ಸಾಹಿತ್ಯದ ಮೇಲೆ ಪಾಶ್ಚಾತ್ಯ ಸಾಹಿತ್ಯದ ಅದರಲ್ಲಿಯೂ ಮುಖ್ಯವಾಗಿ ಇಂಗ್ಲಿಷ್ ಕಾವ್ಯದ ಪ್ರಭಾವ ದಟ್ಟವಾದುದು. ಅದನ್ನು ಕನ್ನಡ ಸಾಹಿತ್ಯ ಎದುರುಗೊಂಡು ಅರಗಿಸಿಕೊಂಡ ಬಗೆ ವಿಶಿಷ್ಟವಾದುದು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಸುಮಾರು ಎಂಟು ದಶಕಗಳಷ್ಟು ದೀರ್ಘವಾದ ಇತಿಹಾಸವಿದೆ. ಅದು ಕಾಲದ, ದೇಶದ, ಪರಿಸರದ ಪರಿಸ್ಥಿತಿ ಮತ್ತು ತುರ್ತಿಗೆ ಅನುಗುಣವಾಗಿ ಬದಲಾಗುತ್ತಾ ರೂಪುಕೊಳ್ಳುತ್ತಾ ಬೆಳೆಯುತ್ತ ಬಂದಿದೆ.

ಅಧಿಕೃತತೆಯ ಅರ್ಥ ಮತ್ತು ದಾಖಲೆಯ ಕಾರಣಕ್ಕೆ ಬಿ.ಎಂ.ಶ್ರೀ ಅವರ "ಇಂಗ್ಲಿಷ್ ಗೀತಗಳು" ಸಂಕಲನವನ್ನೇ ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯ ಮೊದಲ ಘಟ್ಟವಾದ ನವೋದಯದ ಮೊದಲ ಪ್ರಾತಿನಿಧಿಕ ಸಂಕಲನವೆಂದು ಪರಿಗಣಿಸಲಾಗಿದೆ. "ಇಂಗ್ಲಿಷ್ ಗೀತಗಳು" ಆಧುನಿಕ ಕನ್ನಡ ಸಾಹಿತ್ಯಕ್ಕೆ ಒಂದು ಸ್ಪಷ್ಟವಾದ ಮಾರ್ಗವನ್ನು ತೆರೆಯಿತೆನ್ನಬಹುದು. "ಇಂಗ್ಲಿಷ್ ಗೀತಗಳು" ಪ್ರಕಟವಾದದ್ದೇ ತಡ, ಕನ್ನಡ, ಕಾವ್ಯ ಪ್ರಪಂಚದಲ್ಲಿ ವಸಂತೋದಯವಾಯಿತು. ಈ ಸಂಕಲನದಲ್ಲಿ 'ಕಾಣಿಕೆ' ಎಂಬ ಕವನ ಸ್ವತಂತ್ರಕವನ. ಇದನ್ನು ಹೊರತು ಪಡಿಸಿದರೆ,

ಉಳಿದೆಲ್ಲವೂ ಇಂಗ್ಲಿಷ್ ಕಾವ್ಯಭಂಡಾರದಿಂದ ಆಯ್ದು ತೆಗೆದು, ಅನುವಾದ ಮಾಡಿದ ಕವನಗಳು. " 'ಇಂಗ್ಲಿಷ್ ಗೀತಗಳು' ಕವನ ಸಂಕಲದಲ್ಲಿ ಬಿ.ಎಂ.ಶ್ರೀಯವರೇ ಇಂಗ್ಲಿಷಿನಲ್ಲಿ 'TWO MOODS' ಎಂಬ ಕವನವನ್ನು ಬರೆದು, ಅದನ್ನೇ ಕನ್ನಡಿಸಿ 'ಎರಡು ಮನಸ್ಸು' ಎಂದು ಭಾಷಾಂತರಿಸಿದ್ದಾರೆ ಎಂಬ ಸಂಗತಿಯನ್ನು ದಿವಂಗತ ಶಾ(ಮರಾವ್) ಬಾಲೂರಾವ್(ಇವರು ಬಿ.ಎಂ.ಶ್ರೀ ಅವರ ಮೊಮ್ಮಗಳನ್ನು ಮದುವೆಯಾಗಿದ್ದರು) ತಿಳಿಸಿದ್ದರಲ್ಲದೆ, ಶ್ರೀ ಅವರು ಬರೆದಿದ್ದ ಆ ಕವನದ ಹಸ್ತಪ್ರತಿ ಅವರ ಬಳಿಯಲ್ಲಿತ್ತು. ಇಂಗ್ಲಿಷ್ ಕವನದ ಕರ್ತೃ 'ANON'(YMOUS = ಅಜ್ಞಾನ ಕರ್ತೃಕ) ಎಂದಿದೆ! ತಮ್ಮ ಹೆಸರನ್ನು ಬಿ.ಎಂ.ಶ್ರೀ ಹೇಳಿಕೊಂಡಿಲ್ಲ!"[1] ಶೈಲಿ, ಭಾವ, ರಸ ಇವೆಲ್ಲವುಗಳಲ್ಲಿ ಮೂಲ ಕವಿಯ ವ್ಯಕ್ತಿತ್ವವನ್ನು ಅನುಸರಿಸಿದರೂ ಕನ್ನಡದ ಜಾಯಮಾನವನ್ನು ಬಿಟ್ಟುಕೊಡದ ಈ ಕೃತಿಯನ್ನು ತೌಲನಿಕವಾಗಿ ಪ್ರಸ್ತುತ ಅಧ್ಯಯನದಲ್ಲಿ ವಿವೇಚಿಸಿದೆ.

---

[1] ಈ ವಿಚಾರವನ್ನು ಪ್ರೊ. ಎಚ್.ಎಸ್. ಹರಿಶಂಕರ್ ಅವರು ಪತ್ರದ ಮುಖೇನ ನನಗೆ ತಿಳಿಸಿದರು.

# ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

## ಅ. ಉದ್ದೇಶ:

ಬಿ.ಎಂ.ಶ್ರೀಯವರು 1920ರಿಂದಲೂ ಭಾಷಾಂತರಿಸುತ್ತ ಬಂದ ಒಟ್ಟು 63 ಕವನಗಳನ್ನು ಸಂಗ್ರಹಿಸಿ, 1926 ರಲ್ಲಿ "ಇಂಗ್ಲಿಷ್ ಗೀತಗಳು" ಎಂಬ ಹೆಸರಿನಿಂದ ಪ್ರಕಟಿಸಿದರು. ಇದು ವಸ್ತು, ಭಾಷೆ, ಛಂದಸ್ಸು, ಆಶಯಗಳ ದೃಷ್ಟಿಯಿಂದ ಒಂದು ಶ್ರೇಷ್ಠ ಅನುವಾದವೆಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿತು. ಅವರ ಈ ಪ್ರಯೋಗಶೀಲತೆಯು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅದುವರೆಗೆ ಯಾವುದೇ ಸ್ಥಾನಮಾನ ಪಡೆಯದೆ ಇದ್ದ ಸಾಮಾನ್ಯ ಸಂಗತಿಗೂ ಜೀವ ಸಿಕ್ಕಂತಾಯಿತು. ಈ ಆಂಗ್ಲ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದರಿಂದ ಕನ್ನಡ ಸಾಹಿತ್ಯದ ದಿಕ್ಕೇ ಬದಲಾಯಿತು.

"..... ಹಲವು ಇಂಗ್ಲೆಂಡ್ ಪರಗೀತೆಗಳನ್ನು 'ಅನಾಥೆ'ಯಂಥ ವಸ್ತುನಿಷ್ಠ ಕವಿತೆಯನ್ನು ಹೊರತುಪಡಿಸಿದರೆ, ಉಳಿದ ಎಲ್ಲವೂ ಸ್ವಂತ ರಚನೆ ಎನ್ನುವ ಮಟ್ಟಿಗೆ ಶ್ರೀಮುದ್ರಾಂಕಿತವಾಗಿದೆ; ಶ್ರೀಯವರ ಆತ್ಮನಿವೇದನವೋ ಎನ್ನುವ ಭ್ರಾಂತಿಯನ್ನು ಹುಟ್ಟಿಸುತ್ತವೆ" ಎಂಬ ಎಂ.ವಿ.ಸೀ ಅವರ ಅಭಿಪ್ರಾಯ ಗಮನಾರ್ಹ. ಅನುವಾದಿತ ಕೃತಿಯಾಗಿಯೂ ಇಡೀ ಕನ್ನಡ ಸಾಹಿತ್ಯದಲ್ಲಿ ಅನರ್ಘ್ಯ ರತ್ನದಂತೆ ಕಂಗೊಳಿಸುತ್ತಿರುವ ಈ ಕೃತಿಯ ವಿಶೇಷತೆ, ಸ್ವಂತಿಕೆಗಳನ್ನು ತೌಲನಿಕವಾಗಿ ವಿವೇಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

## ಇ. ಸ್ವರೂಪ

ಈ ಅಧ್ಯಯನದ ಸ್ವರೂಪವನ್ನು ಬಿಂಬಿಸುವ ಅಂಶಗಳು ಇಂತಿವೆ:

1. ಪ್ರಸ್ತುತ ಅಧ್ಯಯನವು ತೌಲನಿಕ ಸ್ವರೂಪದ್ದಾಗಿದೆ.
2. ಇಂಗ್ಲಿಷ್ ಕವಿತೆಗಳನ್ನು ಅನುವಾದಿಸಿದ್ದರೂ ಅನುವಾದದಲ್ಲಿ, ಶ್ರೀಯವರು ನಮ್ಮ ಭಾಷಾ ಸಾಹಿತ್ಯ ಪರಿಸರ, ಕನ್ನಡದ ಜಾಯಮಾನಕ್ಕೆ ಅನುಗುಣವಾಗಿ ಮಾಡಿಕೊಂಡಿರುವ ಬದಲಾವಣೆಗಳನ್ನು ವಿವೇಚಿಸಿಲಾಗುತ್ತದೆ.
3. ಅನುವಾದದಲ್ಲಿರುವ ಅನುಕರಣೆ, ಅಳವಡಿಕೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.
4. ಶಬ್ದಶಃ ಅನುವಾದ ಮಾಡದೆ, ಅನುವಾದದ ಮೂಲ ತತ್ತ್ವವಾದ 'ವಿಧೇಯತೆ'ಯನ್ನು ಇಲ್ಲಿನ ಕವನಗಳು ಎಷ್ಟಾರಮಟ್ಟಿಗೆ ಪಾಲಿಸಿವೆ ಎಂಬುದನ್ನು ಈ ಅಧ್ಯಯನ ಪ್ರಚುರಪಡಿಸುತ್ತದೆ.
5. ಪ್ರೇಮಗೀತೆ, ಶೋಕಗೀತೆ, ವ್ಯಂಗ್ಯಕವನ, ಲಾವಣಿ ಈ ಭಾವಗೀತೆಯ ಪ್ರಕಾರಗಳಲ್ಲಿ ಅನುವಾದವು ಮೂಡಿಬಂದಿರುವ ಬಗೆಯನ್ನು ಈ ಅಧ್ಯಯನ ವಿಶ್ಲೇಷಿಸುತ್ತದೆ.
6. ಮೂಲಕವನಗಳಲ್ಲಿನ ರಸ, ಧ್ವನಿ, ಔಚಿತ್ಯಗಳು ಅನುವಾದದಲ್ಲಿ ಯುಕ್ತವಾಗಿ ಬಂದಿವೆಯೇ? ಇಲ್ಲವೇ? ಎಂಬುದನ್ನು ಈ ಅಧ್ಯಯನದಲ್ಲಿ ವಿವೇಚಿಸಲಾಗುತ್ತದೆ.

## ಈ. ವ್ಯಾಪ್ತಿ

ಈ ಅಧ್ಯಯನದ ವ್ಯಾಪ್ತಿಯನ್ನು ಈ ಕೆಳಗಿನ ಅಂಶಗಳು ತಿಳಿಸುತ್ತವೆ.

1. ಈ ಅಧ್ಯಯನದ ವಿಷಯವು 'ಸಾಹಿತ್ಯ ಅಧ್ಯಯನ' ಕ್ಷೇತ್ರಕ್ಕೆ ಸಂಬಂಧಿಸಿದೆ.
2. ಬಿ.ಎಂ.ಶ್ರೀ ಅವರ "ಇಂಗ್ಲಿಷ್ ಗೀತಗಳು" ಕೃತಿಯನ್ನು ಈ ಕೃತಿಯಲ್ಲಿನ ಮೂಲ ಕವನಗಳೊಂದಿಗೆ ಮಾತ್ರ ತೌಲನಿಕವಾಗಿ ವಿಶ್ಲೇಷಿಸಲಾಗುತ್ತದೆ.
3. 'ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ'ದಿಂದ 2006 ರಲ್ಲಿ ದ್ವಿತೀಯ ಮುಂದ್ರಣಗೊಂಡು ಪ್ರಕಟವಾದ "ಇಂಗ್ಲಿಷ್ ಗೀತಗಳು" ಕೃತಿಯಲ್ಲಿನ ಒಟ್ಟು 60 ಕವನಗಳನ್ನು ಇಟ್ಟುಕೊಂಡು ತೌಲನಿಕವಾಗಿ ಅಧ್ಯಯನ ಮಾಡುವ ಪ್ರಯತ್ನ ಇಲ್ಲಿದೆ. 1926 ರಲ್ಲಿ ಪ್ರಕಟವಾದ "ಇಂಗ್ಲಿಷ್ ಗೀತಗಳ"ಲ್ಲಿನ 'ಕಾಣಿಕೆ', 'ಭರತಮಾತೆಯ ವಾಕ್ಯ', 'ಮೈಸೂರು ಮಕ್ಕಳು', ಈ ಸ್ವತಂತ್ರ ಕವನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಬಿಡಲಾಗಿದೆ.
4. ಶ್ರೀ ಅವರಿಗಿಂತಲೂ ಮುಂಚೆ ನಡೆದ ಭಾವಗೀತೆಗಳ ಅನುವಾದ ಕಾರ್ಯಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.
5. "ಇಂಗ್ಲಿಷ್ ಗೀತಗಳು" ಮುಂದೆ ಬೀರಿದ ಪ್ರಭಾವನ್ನು ಇಲ್ಲಿ ತಿಳಿಸಲಾಗುತ್ತದೆ.
6. ಶ್ರೀಯವರು "ಇಂಗ್ಲಿಷ್ ಗೀತಗಳು" ಕೃತಿಯ ಜೊತೆಗೆ ಇತರ ಕೃತಿಗಳನ್ನು ಬರೆದಿದ್ದರೂ ಈ ಅಧ್ಯಯನದಲ್ಲಿ ಅವುಗಳನ್ನು ವಿವೇಚಿಸ ಹೊರಟರೆ ಅತಿವ್ಯಾಪ್ತಿದೋಷ ಉಂಟಾಗುತ್ತದೆಂದು ತೀರ್ಮಾನಿಸಿ ಆ ಕೃತಿಗಳನ್ನು ಇಲ್ಲಿ ವಿವೇಚಿಸಲಾಗಿಲ್ಲ.

## ಉ. ಅಧ್ಯಾಯಗಳ ವಿವರಣೆ

ಪ್ರಸ್ತುತ ಅಧ್ಯಯನದಲ್ಲಿ ಪ್ರಧಾನವಾಗಿ ಮೂರು ಅಧ್ಯಾಯಗಳಿವೆ. ಈ ಅಧ್ಯಾಯಗಳ ಸಂಕ್ಷಿಪ್ತ ವಿವರಣೆ ಈ ಮುಂದಿನಂತಿದೆ.

**1. ಭಾವಗೀತೆ:**

ಈ ಅಧ್ಯಾಯದಲ್ಲಿನ ಮುಖ್ಯಾಂಶಗಳು ಇಂತಿವೆ:

- ಭಾವಗೀತೆಯ ಅರ್ಥವನ್ನು 'ಭಾವ' ಪದದಿಂದ ಪ್ರಾರಂಭಿಸಿ, ನಿಘಂಟು, ವಿದ್ವಾಂಸರ ಅಭಿಪ್ರಾಯದವರೆಗೂ ವಿವರಿಸಲಾಗುತ್ತದೆ.
- ಭಾವಗೀತೆಯ ಉಗಮ ಮತ್ತು ಬೆಳವಣಿಗೆಯನ್ನು ಗ್ರೀಕ್ ಯುಗ, ರೋಮ್ಯಾಂಟಿಕ್ ಯುಗ, ವಿಕ್ಟೋರಿಯನ್ ಯುಗ, ಪ್ರಿ–ರಾಫೆಲೈಟ್ ಚಳುವಳಿ– ಈ ಮಜಲುಗಳಲ್ಲಿ ವಿವರಿಸಲಾಗಿದೆ.
- ಭಾವಗೀತೆಯ ಪ್ರಕಾರಗಳನ್ನು ಉದಾಹರಣೆಯೊಂದಿಗೆ ಸಂಕ್ಷಿಪ್ತವಾಗಿ ವಿವರಿಸಲಾಗುತ್ತದೆ.
- ಬಿ.ಎಂ.ಶ್ರೀ ಯವರಿಗಿಂತ ಮುಂಚೆ ಭಾವಗೀತೆಗಳ ಅನುವಾದ ಕಾರ್ಯದಲ್ಲಿ ತೊಡಗಿದ ಕವಗಳ ಅನುವಾದವ

ಮೇಲೆ ಬೆಳಕು ಚೆಲ್ಲಿ ಈ ಅಧ್ಯಾಯವು ಮುಕ್ತಾಯವಾಗುತ್ತದೆ.

**2. "ಇಂಗ್ಲಿಷ್ ಗೀತಗಳು"- ಪ್ರೇರಣೆ–ಪ್ರಭಾವ, ಉದ್ದೇಶ, ಮಹತ್ತ್ವ:**

ಈ ಅಧ್ಯಾಯನದಲ್ಲಿನ ಮುಖ್ಯಾಂಶಗಳು ಇಂತಿವೆ:

- ಬಿ.ಎಂ.ಶ್ರೀ ಮತ್ತು ಈ ಕೃತಿಯಲ್ಲಿ ಮೂಲ ಆಂಗ್ಲ ಕವನಗಳನ್ನು ರಚಿಸಿದ ಕವಿಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗುವುದು.
- ಶ್ರೀಯವರ ಮೇಲೆ ಪ್ರಭಾವ ಬೀರಿದ ಸಾಹಿತ್ಯ, ವ್ಯಕ್ತಿಗಳು ಭಾವಗೀತೆಯ ಪ್ರಕಾರಗಳ ಮೇಲೆ ಬೆಳಕು ಚೆಲ್ಲಲಾಗುವುದು.
- ಶ್ರೇಷ್ಠ ಕವಿಗಳೆನಿಸಿದವರ ಕವನಗಳನ್ನು ಅನುವಾದಿಸುವ ಹಂಬಲ ಶ್ರೀ ಅವರಿಗಿತ್ತು. ಕನ್ನಡ ಕಾವ್ಯಕ್ಕೆ ಹೊಸ ಹಾದಿ ತೋರುವ ಉದ್ದೇಶ ಅವರದಾಗಿತ್ತು ಎಂಬುದನ್ನು ಇಲ್ಲಿ ವಿವರಿಸಲಾಗುತ್ತದೆ.
- ಹೊಸ ಪೀಳಿಗೆಯನ್ನು ಹುಟ್ಟು ಹಾಕಿ ಆಚಾರ್ಯ ಕೃತಿಯಿನಿಸಿದ ಇದರ ಚಾರಿತ್ರಿಕ ಮಹತ್ತ್ವವನ್ನು ವಿವರಿಸಲಾಗುತ್ತದೆ.

**3."ಇಂಗ್ಲಿಷ್ ಗೀತಗಳು" ಕೃತಿಯಲ್ಲಿನ 'ವಿಶ್ವಕವಿತಾ ವಿಷಯಗಳು'[1]:**

ಈ ಅಧ್ಯಾಯದಲ್ಲಿ ಅನುವಾದಗೊಂಡ ಕವನಗಳಲ್ಲಿನ ಮೂಲದ ಪ್ರಕೃತಿ ಸೌಂದರ್ಯ, ಪ್ರೇಮ, ಶೊಕಭಾವ, ಕೌಂಟುಂಬಿಕ ಜೀವನದ ಪರಿ, ತಾತ್ವಿಕತೆ, ವ್ಯಂಗ್ಯ, ದೇಶಭಕ್ತಿಗಳೂ ರಸಭಾವ ಪೂರ್ಣವಾಗಿ ಹೇಗೆ ಅನುವಾದಗೊಂದಿದೆ ಎಂಬುದನ್ನು ವಿಶ್ಲೇಷಿಸಲಾಗುವುದು. ಭಾಷಾಂತರ ಎಲ್ಲಿ ಯಶಸ್ವಿಯಾಗಿದೆ? ಎಲ್ಲಿ ಎಡವಿದೆ? ಎಲ್ಲಿ ಮೂಲವನ್ನು ಮೀರಿನಿಂತಿದೆ? ಇತ್ಯಾದಿ ಅಂಶಗಳನ್ನು ವಿವರಿಸಲಾಗುವುದು.

---

[1] ಈ ಪದವನ್ನು ಎಂ.ವಿ.ಸೀ ಯವರು 'ಇಂಗ್ಲಿಷ್ ಗೀತಗಳು' ಕೃತಿಗೆ ಬರೆದ ಮುನ್ನುಡಿಯಲ್ಲಿ ಬಳಸಿದ್ದಾರೆ.

# ಅಧ್ಯಾಯ – 2 ಭಾವಗೀತೆ

## ಅರ್ಥ

ಕವಿ ತನ್ನ ವ್ಯಕ್ತಿತ್ವದ ಪ್ರಭಾವವನ್ನು ಅತ್ಯಂತ ಸ್ಪಷ್ಟವಾಗಿ ಅಚ್ಚಳಿಯದಂತೆ ಮುದ್ರೆಯೊತ್ತುವುದು'ಭಾವನಿಷ್ಠ' ಕಾವ್ಯದಲ್ಲಿ ಮಾತ್ರ. ಈ ಬಗೆಯ ಕಾವ್ಯದ ಶ್ರೇಷ್ಠ ನಿದರ್ಶನ ಅಥವಾ ಏಕೈಕ ನಿದರ್ಶನ ಭಾವಗೀತೆ. ಕವಿಯ ಆತ್ಮವು ರಾಷ್ಟ್ರದ ಪೂರ್ಣ ಜೀವನದಿಂದ, ಅದರ ಸ್ಥಿತಿಗತಿಗಳಿಂದ, ಅದರಿಚ್ಛೆ ಅಭಿಪ್ರಾಯಗಳಿಂದ, ಅದರ ಭವಿಷ್ಯದಿಂದ ಬೇರೆಯಾಗಿ ನಿಲ್ಲಲು ಸಮರ್ಥವಾದಾಗ, ಕವಿಯ ಚೇತನದಲ್ಲೇ ಅವನ ಸ್ವಂತ ಇಚ್ಛೆ ಮತ್ತು ಭಾವಗಳ ತೀವ್ರ ವಿಭಜನೆ ನಡೆಯಬಲ್ಲ ಶಕ್ತಿ ಉದ್ಭವವಾದಾಗ ಭಾವಗೀತೆ ಮತ್ತು ನಾಟಕಗಳು ಸೃಷ್ಟಿಯಾಗಿ ಮಹಾಕಾವ್ಯದ ಸ್ಥಾನದಲ್ಲಿ ನಿಂತು ಸಂಪದ್ಯುಕ್ತವಾದ ಅಭಿವೃದ್ಧಿಯನ್ನು ಪಡೆಯುತ್ತವೆ... ವ್ಯಕ್ತಿ ಜೀವನದ, ಸ್ವತಂತ್ರವಾದ ಲೋಕದಲ್ಲಿ ಅಭಿವ್ಯಕ್ತಗೊಳ್ಳಲು, ತನ್ನ ಸ್ವಂತ ದರ್ಶನ, ಚಿಂತನೆ, ಭಾವನೆ ಇವುಗಳ ಪೂರ್ಣ ವಿಕಾಸಕ್ಕೆ ಅಭಿವ್ಯಕ್ತಿ ನೀಡಲು ಹವಣಿಸುತ್ತದೆ. ತನ್ನ ಆತ್ಮಾನುಭವದ ವಸ್ತುವಿಗೆ ಮನನದಿಂದ ಭಾವಗೀತಾತ್ಮಕವಾದ ಅಭಿವ್ಯಕ್ತಿಯನ್ನು ನೀಡುತ್ತದೆ.

'ಭಾವಗೀತೆ'ಯ ಸ್ವರೂಪ ನಿರ್ಣಯಕ್ಕೆ ಈ 'ಭಾವ' ಎಂದರೇನು ಎಂಬುದನ್ನು ವಿವೇಚಿಸುವುದು ಅಗತ್ಯ. 'ಭಾವ'ದ ಮೂಲಾರ್ಥ 'ಇರುವಿಕೆ'. ಇದರ ನಿಷ್ಪತ್ತಿಗೆ ಅನುಗುಣವಾಗಿ ಸಂಸ್ಕೃತದಲ್ಲಿ ಇದರ ಅರ್ಥಗಳೂ ಅನೇಕವಾಗಿವೆ. ಆಪ್ಟೆಯವರು ತಮ್ಮ ನಿಘಂಟಿನಲ್ಲಿ ಮೂವತ್ತೊಂದು ಅರ್ಥಗಳನ್ನು ಸಂಗ್ರಹಿಸಿದ್ದಾರೆ. ರೂಢಿಯ ಮಾತಿನಲ್ಲಿ ಕೂಡ ಇದನ್ನು ಎಷ್ಟೊಂದು ವಿಧವಾಗಿ ಬಳಸುತ್ತೇವೆ. ಸ್ಥಿತಿ, ಆಶಯ, ಇಂಗಿತ, ತಾತ್ಪರ್ಯ, ಭಾವನಾಮ, ಚಿತ್ತವೃತ್ತಿ ಇತ್ಯಾದಿ. ಸಂಸ್ಕೃತದಲ್ಲಿ ಪ್ರೀತಿ, ಪದಾರ್ಥ, ಸಂಭಾವಿತನಾದ ಮನುಷ್ಯ ಈ ಅರ್ಥಗಳೂ ಇದಕ್ಕುಂಟು. ಇಷ್ಟೇ ಸಾಲದೆಂದು ಕನ್ನಡದಲ್ಲಿ ಇದು ಬಂಧುವಾಚಕವೂ ಆಗುತ್ತದೆ! ಹೀಗೆ, ಕೇವಲ 'ಇರವಿ'ನಿಂದ ಹಿಡಿದು, ಇರುವ ಇಲ್ಲದಿರುವ ವಸ್ತು ಅವಸ್ತುಗಳೆಲ್ಲದಕ್ಕು ಈ 'ಭಾವ' ಶಬ್ದವು ವಾಚಕವಾಗಬಲ್ಲದು. ಈ ಅರ್ಥಗಳ ಸಂದಣಿಯಲ್ಲಿ ನಮಗೆ ಪ್ರಕೃತವಾದದ್ದು 'ಚಿತ್ತವೃತ್ತಿ', ಪ್ರೀತಿ, ಕ್ರೋಧ, ಭಯ, ಆಶ್ಚರ್ಯ, ಚಿಂತೆ, ಔತ್ಸುಕ್ಯ, ನಾಚಿಕೆ, ಹರ್ಷ, ಇಂಥವು ಚಿತ್ತವೃತ್ತಿಗಳು.

ಫೆಲಿಕ್ಸ್ ಕ್ಲೇ ಎಂಬ ವಿದ್ವಾಂಸನ ಪ್ರಕಾರ " An emotion, then, arises in this way: the stream of consciousness is interrupted by an idea to which the attention is forcibly attracted, this idea is immediately supplemented by other ideas, and a simultaneous association is formed reflecting a scene or situation in the physical world"

ಭಾವಸ್ಪಂದನವು ಸಮಸ್ತ ಮಾನವಕೋಟಿಗೂ ಪ್ರಮಾಣದಲಿ ಅಂತರವುಳ್ಳದ್ದಾದರೂ ಸಮಾನವಾದದ್ದು. ಆದರೂ ಆದರಲ್ಲಿಯ ರಸಾನುಭವವನ್ನು ಪಡೆಯುವ ಶಕ್ತಿ ಕೆಲವರಿಗೆ ಮಾತ್ರ ಇರುತ್ತದೆ.

ವರ್ಡ್ಸ್‌ವರ್ತ್‌ನ ಪ್ರಕಾರ " I have said that poetry is the spontaneous overflow of powerful feelings; it takes its origin from emotions recollected in tranquillity; the emotions contemplated till by a species of reaction the tranquillity gradually disappears, and an emotion, kindred to that which was before the subject of contemplation, is gradually produced and does, actually exist in the mind" ಇಲ್ಲಿ ಅತ್ಯಂತ ಸಮರ್ಥವಾಗಿ ಭಾವದ ವಿಚಾರ ಹೇಳಿದ್ದಾನೆ.

ಭಾವದ ವಿಚಾರ ತಿಳಿದ ಮೇಲೆ ಭಾವಗೀತೆಯ ಅರ್ಥ, ನಿಷ್ಪತ್ತಿ, ವಸ್ತು ಲಕ್ಷಣಗಳನ್ನು ತಿಳಿಯುವುದು ಅಗತ್ಯ. ಕಾವ್ಯದ ವಿವಿಧ ರೂಪಗಳಲ್ಲಿ ಭಾವಗೀತೆಯೊಂದು ಮುಖ್ಯವಾದ ರೂಪ, ಕನ್ನಡದಲ್ಲಿ ಭಾವಗೀತೆ ಎಂಬ ಪದವನ್ನು ಇಂಗ್ಲಿಷಿನ 'Lyric' ಎಂಬ ಪದಕ್ಕೆ ಸಮಾನಾರ್ಥದಲ್ಲಿ ಉಪಯೋಗಿಸುತ್ತಿದ್ದೇವೆ. ಆಕ್ಸ್‌ಫರ್ಡ್ ನಿಘಂಟಿನಲ್ಲಿ " short poems usually divided into stanzas and directly expressing the poet's own thoughts and sentiments" ಎಂದಿದೆ. " 'ಲಿರಿಕ್' ಎಂಬುದು 'Lyre' ಎಂಬ ತಂತೀವಾದ್ಯದೊಡನೆ ಹಾಡಬಹುದಾದ ಗೀತೆ ಎಂದು ಮೂಲದ ಅರ್ಥ. ಪುರಾತನ ಗ್ರೀಕ್ ಕವಿಗಳು ತಮ್ಮ ಕಾವ್ಯಗಳನ್ನು ಜನರ ಮುಂದೆ ಹಾಡುವಾಗ ಜೊತೆಗೆ ತಂತೀವಾದ್ಯಗಳನ್ನು ಶೃತಿಗಾಗಿ ಇಟ್ಟುಕೊಂಡು ಹಾಡುತ್ತಿದ್ದರು. ಆದಿನ ಕಾಲದಲ್ಲಿ 'ಲಿರಿಕ್' ಎಂಬ ಬಹಳ ವಿಶಾಲಾರ್ಥದಲ್ಲಿ ಬಳಕೆಯಾಗುತ್ತಿತ್ತು. ಎಲ್ಲ ಕಾವ್ಯವೂ 'ಲಿರಿಕ್'. 'ಲಿರಿಕ್' ಮತ್ತು 'ಪೋಯಟ್ರಿ'(ಭಾವಗೀತೆ ಮತ್ತು ಕಾವ್ಯ) ಎರಡೂ ಒಂದೇ ಆಗಿತ್ತು. ಕ್ರಮೇಣ ಗ್ರೀಕರು 'ಲಿರಿಕ್' ಎಂಬುದನ್ನು ಬೇರೆ ವಿಭಾಗವನ್ನಾಗಿ ಪರಿಗಣಿಸಲಾರಂಭಿಸಿದರು. ಕವಿ ಹೊರಜಗತ್ತಿನ ಅನುಭವಕ್ಕೆ ರೂಪ ನೀಡಿದಾಗ ಅದು 'narrative poem'/ ಕಥನ ಕವನವಾಯಿತು. ಇಲ್ಲಿ ಕವಿ ಸ್ವಂತಿಕೆ ಮೆರೆಯುವುದಿಲ್ಲ. ಆದ್ದರಿಂದ ಈ ಕಾವ್ಯ (objective) ವಸ್ತುನಿಷ್ಠ ಕವಿಯು ತನ್ನ ಅಂತರಂಗದ, ತನ್ನದೇ ಆದ ಭಾವನೆಗಳಿಗೆ ರೂಪುಗೊಟ್ಟಾಗ ಅದು (subjective) ವ್ಯಕ್ತಿನಿಷ್ಠ ಗುಣವನ್ನು ಪಡೆದ 'ಲಿರಿಕ್' ಅಥವಾ ಭಾವಗೀತೆಯಾಗುತ್ತದೆ"

ಒಟ್ಟಿನಲ್ಲಿ ಕವಿಯ ಭಾವಪ್ರಧಾನವಾದ ಕಾವ್ಯವೇ 'ಭಾವಗೀತೆ' ಎಂದು ತಿಳಿಯಬಹುದು,

ಭಾವಗೀತೆಯ ಲಕ್ಷಣಗಳು ಸ್ಥೂಲವಾಗಿ ಈ ಕೆಳಗಿನ ಅಂಶಗಳನ್ನು ಒಳಗೊಂಡಿವೆ.

- ಕವಿಯ ಸ್ವಂತ ಅನುಭಗಳನ್ನು ಒಳಗೊಂಡಿರುತ್ತದೆ.
- "ಸಾಮಾನ್ಯವಾಗಿ ಇದು ಹ್ರಸ್ವವಾದದ್ದು, ಇದು ಒಂದು ಕೇಂದ್ರ ಭಾವಕ್ಕೆ ಭಾಷೆಯ ಶರೀರವನ್ನು ಕೊಡುತ್ತದೆ."[2]
- ಬಾಹ್ಯವಸ್ತುವಿನ ವಸ್ತುತ್ವಕ್ಕೆ ಕವಿಯ ಚೇತನದ ಪ್ರವೇಶ, ಕವಿಯ ಚೇತನಕ್ಕೆ ಬಾಹ್ಯ ವಸ್ತುವಿನ ಪ್ರವೇಶ, ಕೊನೆಗೆ ಅದನ್ನು ನಿಮಿತ್ತವನ್ನಾಗಿ ಮಾಡಿಕೊಂಡ ಕವಿ ಪ್ರಜ್ಞೆಯ ಭಾವ ಪ್ರಕಾಶ ಹೀಗೆ ಮೂರು ಕ್ರಿಯೆಗಳು ಸಂಗಮಗೊಳ್ಳುತ್ತವೆ ಇಲ್ಲಿ.

---

[2] ಹೊಸಗನ್ನಡ ಸಾಹಿತ್ಯ ಚರಿತ್ರೆ ಎಲ್. ಎಸ್. ಶೇಷಗಿರಿರಾಯರು ಪುಟ 95

- ಭಾವಗೀತೆಯಲ್ಲಿ ಭಾವ ಪ್ರಧಾನವಾಗಿದ್ದರೂ ಭಾವವನ್ನು ಒಂದು ರೀತಿಯಾಗಿ ನಿಯಂತ್ರಿಸಿ ಅದಕ್ಕೆ ಸರಿಯಾದ ರೂಪವನ್ನು ಕೊಡಲು ಬುದ್ಧಿ, ಬುದ್ಧಿಯನ್ನು ರಸದೀಪ್ತವನ್ನಾಗಿ ಮಾಡಿ ಅದಕ್ಕೆ ಕಾವ್ಯತ್ವವನ್ನು ಕೊಡಲು ಭಾವ ಇವೆರಡೂ ಪರಸ್ಪರ ಪೂರಕಗಳು.
- ಐಕ್ಯತೆ ಮತ್ತು ಅದೀರ್ಘತೆಗಳು ಭಾವಗೀತೆಯ ಲಕ್ಷಣಗಳು.
- ಅನಂತ ಸಂಪತ್ತನ್ನು ಪರಿಪೂರ್ಣ ಸೌಂದರ್ಯವನ್ನು 'ಪುಟ್ಟಕೋಣೆ'ಯೊಂದರಲ್ಲಿ ಹಿಡಿದಿಡುವ ಹಂಬಲದ ನೈರಂತರ್ಯವನ್ನು ಈ ಕಾವ್ಯರೂಪ ಪ್ರದರ್ಶಿಸುತ್ತದೆ.
- ಪಂಕ್ತಿಗಳ ನಿಯಮವಿರುವುದಿಲ್ಲ.
- ಭಾವಗೀತೆಯ ಭಾಷೆ ಆಡುಮಾತಾದರೂ ಆಗಿರಬಹುದು; ನಾಜೂಕಾಗಿಯೂ ಹೊರಹೊಮ್ಮಬಹುದು.

ಒಟ್ಟಿನಲ್ಲಿ ಕಲ್ಪನೆ, ಭಾವನೆ ಇವುಗಳಿಗೆ ಒಳಪಡುವಂಥ ಅಂಶಗಳೆಲ್ಲವುಗಳ ಆಳ ಎತ್ತರವನ್ನು ಬಿಂಬಿಸಿ ವಿವೇಚಿಸುತ್ತದೆ ಭಾವಗೀತೆ. ವಿಶಿಷ್ಟತೆಯಲ್ಲಿಯೂ ಸಾಮಾನ್ಯತೆಯನ್ನು ನಾವು ಇದರಲ್ಲಿ ಕಾಣಬಹುದು.

'ಭಾವಗೀತೆ'ಯ ಲಕ್ಷಣವನ್ನು ಗಮನಿಸಿದ ನಂತರ ಅದರಲ್ಲಿ ಅಡಗಿರುವ ಗೀತಾಂಶದ ಬಗ್ಗೆಯೂ ತಿಳಿಯುವುದು ಅವಶ್ಯಕವಾಗಿದೆ. ಎರಡು ಸಹಸ್ರವರ್ಷಗಳಿಗಿಂತಲೂ ಹಿಂದೆ ಭಾವಗೀತೆ ಮೊದಲು ಜನ್ಮತಳೆದಾಗ ಅದು ಸಂಗೀತದ ಸಹಚರಿಯಾಗಿಯೇ ಮೂಡಿತ್ತು ಎಂದು ಹೆಗೆಲ್ ಎಂಬ ವಿದ್ವಾಂಸ ಅಭಿಪ್ರಾಯಿಸಿದ್ದಾನೆ. 'ಭಾವಗೀತೆ' ಎಂಬ ಪದದಲ್ಲಿಯೂ ಹಾಡಿನ ಗುಣವನ್ನು ಸೂಚಿಸುವ ಗೀತೆ ಎಂಬ ಪದವೂ ಇದೆ. 'ಭಾವಗೀತೆ'ಗೆ ತನ್ನದೇ ಆದ ಆಂತರಿಕ ಸಂಗೀತವಿರುತ್ತದೆ. ಕವಿಯ ಭಾವನೆಗಳೂ 'ಭಾವಗೀತೆ'ಯಾಗಿ ಹೊರಹೊಮ್ಮುವಾಗ ಬಹುಮಟ್ಟಿಗೆ ಗೇಯತೆಯ ಗುಣಸಹಿತವಾಗಿಯೇ ಹೊಮ್ಮುತ್ತವೆ ಎಂದೆನಿಸುತ್ತದೆ.

ಇನ್ನು 'ಭಾವಗೀತೆ'ಯ ವಸ್ತುವಿನ ಬಗ್ಗೆ ಹೇಳುವುದಾದರೆ, ಅದು ಜಗತ್ತಿನಷ್ಟೆ ವಿಶಾಲವಾಗಿರುತ್ತದೆ. ಬಹು ವೈಯಕ್ತಿಕವಾದುದರಿಂದ ಹಿಡಿದು, ವಿಶ್ವವ್ಯಾಪಿಯಾಗುವಂತಹ ಅಂಶಗಳವರೆಗೂ ಇದು ಹರಡಿರುತ್ತದೆ. ಸುಖ-ದುಃಖ, ಆಸೆ-ನಿರಾಸೆ, ಆದರ್ಶಗಳು, ನಂಬಿದ ತತ್ತ್ವಗಳು, ಕಂಡುಂಡ ಅನುಭವಗಳು, ಬದುಕಿನ ವಿಧಿವಿಧಾನಗಳ ಬಗೆಗಿನ ಧೋರಣೆಗಳು ಹೀಗೆ ಹತ್ತು ಹಲವು ಇದರ ವಸ್ತುವಾಗಬಲ್ಲವು. ಬಹುಶಃ ಇದಕ್ಕೆ ಅಳವಡದ ವಸ್ತುವೇ ಇಲ್ಲವೇನೋ! ಬಹುಪಾಲು ಭಾವಗೀತೆಗಳಲ್ಲಿ ಪ್ರೇಮ, ನಿಸರ್ಗಾರಾಧನೆ ಹೆಚ್ಚಾಗಿ ಕಂಡುಬರುತ್ತವಾದರೂ ಮನಸ್ಸಿಗೆ ಮುದ ನೀಡುವ ಅನುಭವಗಳೆಲ್ಲ ಭಾವಗೀತೆಯ ವಸ್ತುವಾಗಬಲ್ಲವು ಎನ್ನಬಹುದು.

**ಭಾವಗೀತೆಯ ಉಗಮ ಮತ್ತು ಬೆಳವಣಿಗೆ:**

'ಭಾವಗೀತೆ' ಉಸಿರು ಚೈತನ್ಯಗಳಲ್ಲಿ ಭಾರತೀಯವಾದರೂ ಹೆಸರು ರೂಪಗಳಲ್ಲಿ ಪಾಶ್ಚಾತ್ಯ ಸಾಹಿತ್ಯ ಪ್ರಪಂಚಕ್ಕೆ ಸೇರಿದ್ದುದು. ಕಳೆದ ಶತಮಾನದಲ್ಲಿ ಭಾರತಕ್ಕೆ ಕಾಲಿಟ್ಟ ಪಾಶ್ಚಾತ್ಯ ಸಂಸ್ಕೃತಿ ತನ್ನೊಡನೆ ತನ್ನ ಸಾಹಿತ್ಯ ಪ್ರಕಾರಗಳನ್ನು ಹೊತ್ತು ತಂದಿತು. ಅವುಗಳಲ್ಲಿ ಭಾರತೀಯ ಮನಸ್ಸನ್ನು ಮೊದಲು ಸೆರೆಹಿಡಿದದ್ದು ಈ ಭಾವಗೀತೆಯೆ. ವಂಗಕವಿ

ರವೀಂದ್ರರಲ್ಲಿ ಮುಗಿಲು ಮುಟ್ಟಿದ ಈ ಸಾಹಿತ್ಯ ರೂಪ ಕ್ರಮಕ್ರಮವಾಗಿ ಭಾರತದ ಉಳಿದ ಎಲ್ಲ ಭಾಷೆಗಳಲ್ಲಿಯೂ ಪಬ್ಬಿ ಪಸರಿಸಿತು ಎಂಬ ಮಾತು ಭಾವಗೀತೆಯು ಭಾರತದ ಕೂಸಲ್ಲ ಎಂಬುದನ್ನು ತಿಳಿಸುತ್ತದೆ.

ಕನ್ನಡದಲ್ಲಿ ಭಾವಗೀತೆಯ ಉದಯಕ್ಕೆ ಇಂಗ್ಲಿಷ್ ಸಾಹಿತ್ಯ ಪ್ರೇರಕ ಶಕ್ತಿಯಾದಂತೆ ಆ ಸಾಹಿತ್ಯಕ್ಕೆ ಮೂಲ ಪ್ರೇರಣೆ ದೊರೆತದ್ದು ಗ್ರೀಕ್ ಸಾಹಿತ್ಯದಿಂದ ಎಂಬುದು ಬಹುಪಾಲು ವಿದ್ವಾಂಸರ ಒಪ್ಪಿತ ಅಭಿಪ್ರಾಯ. ಆದರೆ ಈ ಗ್ರೀಕ್ ಮೂಲವನ್ನು ಅನುಮಾಮದಿಂದ ನೋಡುವ ವಾದವೊಂದು ಮೊಳೆತಿದೆ. ಅದು ಹೀಗಿದೆ. “ Lyre is an ancient stringed musical instrument. The recitations of the Greek were accompanied by it, yet the lyre was not of Greek origin. No root in the language has been discovered for a lyrikos all thaough the sepecial names bestowed upon vareties of instruments are Hellenic, we have to seek in Asia the birth place of the genus, and to infer its introduction into Greek through Thrace or Lydia”

ಯಾವ ಒಂದು ನಿರ್ದಿಷ್ಟವಾದ ಕಾಲದಲ್ಲಿ ಭಾವಗೀತೆಯ ಸೃಷ್ಟಿ ಸ್ಪಷ್ಟವಾಗಿ ಆರಂಭವಾಯಿತೆಂದು ನಿರ್ಧರಿಸುವುದು ಕಷ್ಟ. ಬಹುಶಃ ಮಾನವನ ಹೃದಯ ತನ್ನ ನೋವು ನಲಿವುಗಳನ್ನು ಅನುಭವಿಸುವುದನ್ನು ಎಂದು ಕಲಿಯಿತೋ ಅಂದು ಭಾವಗೀತೆ ಸೃಷ್ಟಿಯಾಯಿತೆನ್ನಬಹುದು. ಆದರೂ ಭಾವಗೀತೆ ಎಂಬ ಕಾವ್ಯಪ್ರಕಾರ ಬೇರೆ ಬೇರೆ ದೇಶ, ಭಾಷೆಗಳಲ್ಲಿ ನಿರ್ದಿಷ್ಟ ರೂಪದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಆಧರಿಸಿ, ಅದರ ಉಗಮ ಮತ್ತು ಬೆಳವಣಿಗೆಯನ್ನು ಈ ಅಂಶಗಳ ಮೂಲಕ ತಿಳಿಯಬಹುದು.

- ಗ್ರೀಕ್ ಯುಗ
- ಗ್ರೀಕ್ ಆನಂತರದ ಯುಗ
- ರೊಮ್ಯಾಂಟಿಕ್ ಯುಗ
- ವಿಕ್ಟೋರಿಯನ್ ಯುಗ
- ಫ್ರಿ–ರಾಫೆಲೈಟ್ ಚಳವಳಿ

### ಗ್ರೀಕ್ ಯುಗ:

ಹರ್ಮಿಸ್ ಎಂಬಾತ ‘ಲೂರ’ ಎಂಬ ಸಪ್ತತಂತಿಗಳ ವಾದ್ಯವನ್ನು ಕಂಡುಹಿಡಿದ. ಗೀತೆಗಳನ್ನು ರಚಿಸುವಾಗ ಅವು ಈ ವಾದ್ಯದ ಹಿನ್ನೆಲೆಯಲ್ಲಿ ಹಾಡಲ್ಪಡಬೇಕಾದವು ಎಂಬ ಪ್ರಜ್ಞೆ ಕವಿಗೆ ಇದ್ದೇ ಇರುತ್ತಿತ್ತು. ಗ್ರೀಕರಲ್ಲಿ ಟರ್ಪೆಂಡರ್ ಎಂಬಾತ ತಂತೀವಾದ್ಯದೊಂದಿಗೆ ಕ್ಲೋನಸ್ ಎಂಬಾತ ಕೊಳಲಿನೊಂದಿಗೆ ಹಾಡಲು ಸುಗಮವಾಗುವಂತೆ ಗೀತೆಗಳನ್ನು ರಚಿಸಿದರು. ಅಂದಿನ ಭಾವಗೀತಕಾರರು ಅವಶ್ಯವಾಗಿ ಸಂಗೀತಜ್ಞರಾಗಿಯೂ ಇರಬೇಕಾಗಿತ್ತು. ಏಕೆಂದರೆ ಗ್ರೀಕ್ ತತ್ವಶಾಸ್ತ್ರಜ್ಞರಲ್ಲಿ ಪ್ರಮುಖನಾದ ಪೈಥಾಗೊರಸ್ಸನ ಸಿದ್ಧಾಂತದಂತೆ ಔಷಧ ಹೇಗೆ ದೇಹದ ಶುದ್ಧೀಕರಣದ ಸಾಧನವೋ ಹಾಗೆಯೇ ಸಂಗೀತ ಆತ್ಮದ ಶುದ್ಧೀಕರಣ ಸಾಧನ ಎಂಬ ನಂಬಿಕೆ ಅವರಲ್ಲಿತ್ತು. ಆದರೆ ಗ್ರೀಕ್ ಭಾವಗೀತೆಯ ಮೂಲ ಪುರುಷರಾದ ಈ ಇಬ್ಬರ ಯಾವ ಕೃತಿಗಳೂ ನಮಗೆ ಉಳಿದು ಬಂದಿಲ್ಲ. ಕಾವ್ಯ ಉಳಿದು ನಮಗೆ ಸಿಕ್ಕಿರುವವರಲ್ಲಿ ಕ್ರಿ.ಪೂ.

ಏಳನೆಯ ಶತಮಾನದ 'ಆಲ್ಕ್‌ಮನ್' ಪ್ರಥಮ ಭಾವಗೀತಕಾರ.

ಆಧುನಿಕ ಸಾಹಿತ್ಯಗಳಲೆಲ್ಲಾ ಕಾಣದಂತಹ ಒಂದು ವಿಶಿಷ್ಟ ವಿಭಾಗದಿಂದ ಆರಂಭವಾಗುತ್ತದೆ ಗ್ರೀಕ್ ಭಾವಗೀತಾ ಸಾಹಿತ್ಯ. ಮೊದಲನೆಯದು ಮೇಳಗೀತ. ಎರಡನೆಯದು ಏಕವ್ಯಕ್ತಿಗೀತ. ಮೇಳಗೀತದಲ್ಲಿ ಹಾಡುವ ಮೇಳ, ಮೇಳ ನಾಯಕ, ನೃತ್ಯ, ಹಾಡು – ಇವು ಇರುತ್ತವೆ. ಏಕವ್ಯಕ್ತಿಗೀತದಲ್ಲಿ ಹಾಡುತ್ತಿದ್ದವನು ಒಬ್ಬನೇ. ಅತಿಮುಖ್ಯವಾದ ಮೂರನೆಯ ಅಂಶವೆಂದರೆ ಗಾಯಕ ಹಾಡುತ್ತಿದ್ದುದು. ತನ್ನ ವೈಯಕ್ತಿಕ ಭಾವಗಳನ್ನು ಕುರಿತು ಮಾತ್ರವೇ ಹೊರತು ಯಾವುದಾದರೂ ನಿರ್ದಿಷ್ಟ ಸಂದರ್ಭಕ್ಕೆ ತಕ್ಕಂತೆ ಅಲ್ಲ. ಮುಂದೆ ಜಗತ್ತಿನ ಎಲ್ಲ ಸಾಹಿತ್ಯಗಳಲ್ಲಿಯೂ ವಿಸ್ತಾರವಾಗಿ ತುಂಬಿ ಹರಿದ ಭಾವಗೀತಾ ವಾಹಿನಿಯ ಸೆಲೆ ಇಲ್ಲಿದೆ. ಏಕವ್ಯಕ್ತಿ ಗೀತೆಗಳಲ್ಲಿ ಹಾಡಬೇಕಾದ ವ್ಯಕ್ತಿ ಒಬ್ಬನೇ. ಆದುದರಿಂದ ಎಂತಹ ಪರಿಣಿತನಾದರೂ ಅವನ ಕಂಠಶಕ್ತಿಗೆ ಒಂದು ಮಿತಿ ಎಂಬುದು ಇದ್ದುದ್ದರಿಂದ ಅವನ ಗೀತೆ ಆ ಮಿತಿಗೆ ಒಳಪಟ್ಟಿರಬೇಕಾಯಿತು. ಹೀಗೆ ಭಾವಗೀತೆಯು ತನ್ನ ಆತ್ಮಗುಣವಾದ 'ಹ್ರಸ್ವತೆ'ಯನ್ನು ಪಡೆಯಿತು. ಇದೇ ಸಮಯದಲ್ಲಿ ಹಾಡುವುದನ್ನೇ ಉದ್ದೇಶವಾಗುಳ್ಳ 'ನಾಡಪದ' ಎಂಬ ಸಾಹಿತ್ಯ ರೂಪ ಬೆಳೆದು ಬಂದಿತು. ಪ್ರೇಮ ಮತ್ತು ನಲಿವುಗಳನ್ನು ವಸ್ತುವಾಗುಳ್ಳ ಇವು ಶೈಲಿಯಲ್ಲಿ ಮೇಳಗೀತಗಳಿಗಿಂತ ಹೆಚ್ಚು ಸರಳವಾಗಿಯೂ, ಸಹಜವಾಗಿಯೂ ಆಗಿದ್ದವು. ಮುಂದೆ ಏಕವ್ಯಕ್ತಿಗೀತೆ ಸಾಹಿತ್ಯರೂಪವಾಗಿ ಪರಿವರ್ತಿತವಾದಾಗ ಈ ಸರಳತೆ, ಸಹಜತೆಗಳು ಅದರ ಹೃದಯಗುಣವಾಗಿ ನೆಲೆಸಿದವು. ಪ್ರಾಚೀನ ಗ್ರೀಕ್ ಭಾವಗೀತಕಾರರಲ್ಲಿ ಏಕವ್ಯಕ್ತಿ ಗೀತಗಳನ್ನು ಸೃಷ್ಟಿಸಿ ಭಾವಗೀತೆಗಳಿಗೆ ಮುನ್ನುಡಿಯನ್ನು ಬರೆದ ಕೀರ್ತಿ ಪೆರಾಸಿನ ಆರ್ಕಿಲೋಕಸ್ ಎಂಬಾತನಿಗೆ ಸಲ್ಲುತ್ತದೆ. ಎರಡು ರೀತಿಗಳಲ್ಲಿ ಆತ ಈ ಸಾಹಿತ್ಯ ಪ್ರಕಾರಕ್ಕೆ ತಳಹದಿಯನ್ನು ಹಾಕಿದ. ಮೊದಲನೆಯದು ಯಾವುದೇ ವಿಧವಾದ ಲಚ್ಚೆಗೂ ಎಡೆಗೊಡದೆ ಸ್ವವಿಷಯವಾಗಿ ಹಾಡಿಕೊಂಡ. ಇನ್ನೊಂದು ದೇಸಿಯನ್ನು ಕಾವ್ಯದ ಪ್ರಾತ್ರವನ್ನಾಗಿ ಮಾಡಲು ಯತ್ನಿಸಿದುದು. ಇಷ್ಟಾದರೂ 'ಭಾವಗೀತೆ' ಎಂಬುದು ಆತನ ಸೃಷ್ಟಿ ಎಂಬ ಅಭಿಪ್ರಾಯಕ್ಕೆ ಬರುವಂತಿಲ್ಲ. ಆದರೆ 'ಭಾವಗೀತೆ'ಗೆ ಪ್ರಾಣವಾಯು ನೀಡಿದನೆಂದಷ್ಟೆ ಹೇಳಬಹುದು.

ಕ್ರಿ.ಪೂ. ಏಳು ಮತ್ತು ಆರನೆಯ ಶತಮಾನಗಳಲ್ಲಿ ಗ್ರೀಸ್ ದೇಶವನ್ನೆಲ್ಲ ಮುತ್ತಿದ್ದ ಈ ಭಾವಗೀತದ ನಿನಾದವನ್ನು ಮುಂದೆ ಬಂದ ರುದ್ರನಾಟಕಗಳ ರುದ್ರನೃತ್ಯ ಸಂಪೂರ್ಣವಾಗಿ ಮುಚ್ಚಿತು.

### ಗ್ರೀಕ್ ಅನಂತರ ಯುಗ:

ಗ್ರೀಕ್ ಭಾವಗೀತೆಗಳು ಫ್ರೆಂಚ್ ಭಾಷೆಯ ಮೂಲಕ ಇಂಗ್ಲಿಷ್ ಸಾಹಿತ್ಯವನ್ನು ಪ್ರವೇಶಿಸಿದವು, ಹಾಗಂದ ಮಾತ್ರಕ್ಕೆ ಇದಕ್ಕೆ ಮುಂಚೆ ಭಾವಗೀತ ಪ್ರಕಾರ ಇಂಗ್ಲಿಷಿನಲ್ಲಿ ಇರಲಿಲ್ಲವೆಂದಲ್ಲ, 'ಡಿಯೋರ್', 'ದಿ ಸೀ ಫೇರರ್'ಎಂಬ ವೈಯಕ್ತಿಕ ಭಾವಗಳನ್ನು ಪ್ರಧಾನವಾಗಿ ಬಿಂಬಿಸುವ ಕವನಗಳಿದ್ದವು.

ಫ್ರಾನ್ಸಿನ ಪ್ರಾವೆನ್ಸಿನ ಗ್ರಾಮದ ಜನರು ಹಬ್ಬ ಹರಿದಿನಗಳಲ್ಲಿ ವಸಂತ, ಸಂತಸ ಇವುಗಳನ್ನು ಕುರಿತಾಗಿ ಹಾಡುತ್ತಿದ್ದ ನೃತ್ಯ ಗೀತೆಗಳು ಭಾವಗೀತೆಯ ಸೃಷ್ಟಿಗೆ ಪ್ರೇರಣೆಯಾದವು, ಫ್ರಾನ್ಸಿನ ರಾಣಿ ಎಲಿಯನೋರಳು ಇಂಗ್ಲೆಂಡಿನ ರಾಣಿಯಾಗಿ

ಬಂದಾಗ ಅವಳೊಡನೆ ಅನೇಕ ಭಾವಗೀತೆಗಳ ಕವಿ ಗಾಯಕರೂ ಬಂದರು. ಇಂಗ್ಲಿಷ್ ಭಾವಗೀತೆಗಳ ಸೃಷ್ಟಿಯ ವಿಷಯದಲ್ಲಿ ಇವರು ಬೀರಿದ ಪ್ರಭಾವ ಮಹತ್ತ್ವವಾದುದು.

ಕ್ರಿಸ್ತಮಾತೆಯನ್ನು ಕುರಿತ ಆಧ್ಯಾತ್ಮಿಕ ಗೀತೆಗಳು, ಹೃದಯಂಗಮವಾದ ಜೋಗುಳ ಗೀತೆಗಳು ಈ ಸಾಹಿತ್ಯ ಪ್ರಕಾರವನ್ನು ಬೆಳೆಸಿದವು.

14ನೆಯ ಶವಮಾನದಲ್ಲಿ ಸಿಕ್ಕಿರುವ ಕೈಬರಹದ ಕವನಸಂಗ್ರಹಗಳಲ್ಲಿ ನೂರಾರು ಭಾವಗೀತೆಗಳಿವೆ. ಇವು ಲ್ಯಾಟಿನ್, ಆ್ಯಂಗ್ಲೋ–ಫ್ರಂಚ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ದೊರೆತಿವೆ. ಇವುಗಳಲ್ಲಿ ಅನೇಕವು ಕವಿ ತನ್ನ ಪ್ರಿಯೆಗೆ ಬರೆದ ಸಂಬೋಧನಾತ್ಮಕವಾದ ಗೀತೆಗಳು. ಇನ್ನು ಕೆಲವು ಸಂಭಾಷಣಾತ್ಮಕವಾದುದು.

ಆಂಗ್ಲ ಸಾಹಿತ್ಯದಲ್ಲಿ 'ಕವಿ ಪಿತಾಮಹ' ಎಂದು ಬಿರುದಾಂಕಿತನಾದ ಛಾಸರ್ ಸಾಹಿತ್ಯದ ಈ ಪ್ರಕಾರವನ್ನು ಬಳಸಲೇ ಇಲ್ಲವೆನ್ನುವುದು ಗಮನಾರ್ಹ. ಆದರೆ 16ನೆಯ ಶತಮಾನದಲ್ಲಿ ಸ್ಕಾಟ್ಲೆಂಡಿನ 'ಡನ್‌ಬರ್' ಉತ್ಕೃಷ್ಟ ಭಾವಗೀತೆಗಳನ್ನು ರಚಿಸಿದ. ಇವನನ್ನು ಅನೇಕ ವಿಮರ್ಶಕರು 'ಪ್ರಥಮ ಆಂಗ್ಲ ಭಾವಗೀತ'ಕಾರ ಎಂದು ಗುರುತಿಸಿದ್ದಾರೆ.

ಈ ಅವಧಿಯಲ್ಲಿ ಪ್ರಕಟವಾದ ಟೋಟೆಲನ ಮಿಸಲಿನಿಯಲ್ಲಿ 300 ಭಾವಗೀತೆಗಳಿದ್ದು, ಇದರಲ್ಲಿ ಅನೇಕ ಪ್ರಯೋಗಗಳನ್ನು ಕಾಣಬಹುದು. ಪ್ರಥಮ ಬಾರಿಗೆ ಸಾನೆಟ್ ರೂಪ ನಮಗಿಲ್ಲಿ ಎದುರಾಗುತ್ತದೆ. ಇಟ್ಯಾಲಿಯನ್ ಮತ್ತು ಫ್ರೆಂಚ್ ಮಾದರಿಯ ಸಾನೆಟ್ಟುಗಳನ್ನು 'ವೈಯಾಟ್' ಇಂಗ್ಲಿಷಿಗೆ ತಂದ. 'ಸರ್ರೆ' ಅದನ್ನು ಇಂಗ್ಲಿಷಿನ ಛಂದೋಗುಣಗಳಿಗೆ ಹೊಂದಿಕೊಳ್ಳುವಂತೆ ಹದ ಮಾಡಿದ. 16ನೆಯ ಶಮಾನದ ಉತ್ತರಾರ್ಧದಲ್ಲಿ 'Pastorale' ಎಂಬ ಗ್ರಾಮಕ ಕವಿತೆಗಳನ್ನು ಸ್ಪೆನ್ಸರನ ಕವಿತೆಗಳು ಹೊಮ್ಮಿದವು. ಅಲ್ಲದೆ 'Madrigal' ಎಂಬ ಮತ್ತೊಂದು ಭಾವಗೀತೆಯ ಪ್ರಕಾರ ಮೊಳೆತು ನಿಕೊಲಸ್ ಯುಗ ಮತ್ತು ಥಾಮಸ್ ವ್ಯಾಟ್ಸನ್‌ರಿಂದ ಬೆಳೆಯಿತು. ಈ ಹೊತ್ತಿಗೆ ಸಿಡ್ನಿ, ಷೇಕ್ಸ್‌ಪಿಯರ್, ಸ್ಪೆನ್ಸರ್ ಸಾನೆಟ್ಟಿನ ಗುಚ್ಛಗಳನ್ನು ರಚಿಸಿ ಆ ಪ್ರಕಾರವನ್ನು ಜನಪ್ರಿಯಗೊಳಿಸಿದರು.

**ರೊಮ್ಯಾಂಟಿಕ್ ಯುಗ:**

ರಾಣಿ ಎಲಿಜಬೆತಳ ಯುಗದ ಕವಿಗಳ ಕಾವ್ಯ ಪದ್ಧತಿಯನ್ನು ರೊಮ್ಯಾಂಟಿಕ್ ಎಂದು ವಿಮರ್ಶಕರು ಕರೆದಿದ್ದಾರೆ. 16ನೆಯ ಶತಮಾನದ ಉತ್ತರಾರ್ಧ ಮತ್ತು 17ನೆಯ ಶತಮಾನದ ಪೂರ್ವಾರ್ಧದಲ್ಲಿ ಸರಳತೆ, ಸಹಜತೆ, ಸಂಗೀತದ ಸಾಮರಸ್ಯದೊಂದಿಗೆ ಭಾವಗೀತೆ ಹೊಮ್ಮಿತ್ತು. 'ಡನ್' ಕವಿ ಈ ಗುಂಪಿನ ಆಚಾರ್ಯ ಪುರುಷ. ಜಾರ್ಜ್ ಹರ್ಬಟ್, ರಿಚರ್ಡ್ ಕ್ರಾಪ್ ಮುಂತಾದವರು ಅವನ ಹಾದಿಯಲ್ಲಿ ನಡೆದ ಹೆಸರಾಂತ ಕವಿಗಳು. ಮಿಲ್ಟನ್ ಅನೇಕ ಉತ್ತಮ ಭಾವಗೀತೆಗಳನ್ನು ಈ ಅವಧಿಯಲ್ಲಿ ರಚಿಸಿದ ಅವನ 'L'Allegro' ಮತ್ತು 'Ill penseroso' ಇವು ಇಂಗ್ಲಿಷ್ ಸಾಹಿತ್ಯದಲ್ಲಿಯೇ ಖ್ಯಾತಿ ಪಡೆದಿವೆ 'ಲಿಸಿಡಾಸ್' ಎಂಬ ಕವನ 'ಪ್ಯಾಸ್ಟೊರಲ್ ಎಲಿಜಿ' ಮುಂದಿನ ಅನೇಕ ಅಂತಹ ಕವನಗಳಿಗೆ ಮೇಲ್ಪಂಕ್ತಿಯಾಯಿತು.

2ನೆಯ ಚಾರ್ಲ್ಸ್ ಸಿಂಹಾಸನಕ್ಕೆ ಬಂದ ಕಾಲದಿಂದ ಭಾವಗೀತೆಯ ಇತಿಹಾಸದಲ್ಲಿ ಇಳಿಮುಖವಾಗತೊಡಗಿತು. ವೈಯಕ್ತಿಕ ಭಾವಗಳ ಅಭಿವ್ಯಕ್ತಿ ಹಾಸ್ಯಾಸ್ಪದವಾಗಿ ತೋರಿ, ಭಾವಗೀತೆಗಳ ಬೆಳವಣಿಗೆ ಕುಂಠಿತವಾಯಿತು.

ಮುಂದೆ ಬಂದ 2ನೆಯ ರೊಮ್ಯಾಂಟಿಕ್ ಯುಗದಲ್ಲಿ ಪರ್ವತ, ಸರೋವರಗಳು, ರೈತರು, ಅತಿಮಾನುಷ ಘಟನೆಗಳು, ಚರಿತ್ರೆ, ವಾಸ್ತುಶಿಲ್ಪ, ಕಲೆ, ಇವೆಲ್ಲವೂ ಕವಿಗಳಿಗೆ ಸ್ಫೂರ್ತಿಯದವು, ವರ್ಡ್ಸ್‌ವರ್ತ್ ಕೊಲ್ರಿಜ್, ಕೀಟ್ಸ್, ಷೆಲ್ಲಿ ಈ ಯುಗದ ಮಾಹಾಕವಿಗಳು ಕ್ರಿ.ಶ. 1798 ರಲ್ಲಿ 'The Lyrical Ballads' ಸಂಕಲನವು ವರ್ಡ್ಸ್‌ವರ್ತ್ ಮತ್ತು ಕೊಲ್ರಿಜ್‌ರಿಂದ ಪ್ರಕಟಗೊಂಡವು. ಇದು ರೋಮ್ಯಾಂಟಿಕ್ ಕಾವ್ಯಪದ್ಧತಿಯನ್ನು ಉದ್ಘೋಷಿಸಿತು. ಆದರೆ ಇದಕ್ಕೂ ಮುಂಚೆ ಗ್ರೇ, ಕೋಲಿನ್ಸ್, ಕೂಪರ್, ಬರ್ನ್ಸ್ ಮುಂತಾದ ಕವಿಗಳು ಈ ಸಾಧನೆಯ ಪ್ರಯತ್ನ ಮಾಡುತ್ತಿದ್ದರು.

**ವಿಕ್ಟೋರಿಯನ್ ಯುಗ:**

ರೊಮ್ಯಾಂಟಿಕ್ ಯುಗದ ವಿಸ್ತರಣವಾದ ಈ ಯುಗವು ಹಿಂದಿನ ಕಾವ್ಯ ವಸ್ತುಗಳಾದ ಪ್ರಕೃತಿ ಮತ್ತು ಕಲೆಗಳೊಡನೆ ಮಾನವ ಸ್ವಾಭಾವವನ್ನು ಸೇರಿಸಿಕೊಂಡಿತು. ಜ್ಞಾನ ವಿಸ್ತಾರವಾದಂತೆಲ್ಲ ಪ್ರಾಮಾಣಿಕ ಸಂಶಯಗಳು ಇವರಿಗೆ ಪ್ರಿಯವಾದವು. ತತ್ಪರಿಣಾಮವಾಗಿ ತತ್ತ್ವಚಿಂತನೆಗಳು ಪ್ರಧಾನವಾದ ಭಾವಗೀತೆಗಳೂ ಸೃಷ್ಟಿಯಾಗತೊಡಗಿದವು. ಈ ಯುಗದ ಪ್ರಮುಖ ಪ್ರತಿನಿಧಿ 'ಲಾರ್ಡ್ ಟೆನಿಸನ್'. ಕವನದಲ್ಲಿ ಭಾವ ತೀವ್ರವಾಗಿದ್ದು ನಾಟಕೀಯತೆಯಿಂದ ಕೂಡಿರಬೇಕೆಂದು ಅವನ ಧೋರಣೆ. ಇವನ್ನಿಂದ ಆರಂಭವಾದ ನಾಟಕೀಯತೆಯನ್ನು ಬೆಳೆಸಿ ಶ್ರೇಷ್ಠ ಭಾಬಗೀತೆಗಳನ್ನು ಸೃಷ್ಟಿಸಿ ಅದ್ಭುತ ಕಲಾಪ್ರತಿಭೆಯನ್ನು ಪ್ರದರ್ಶಿಸಿದ ಕವಿ 'ಬ್ರೌನಿಂಗ್'.

**ಫ್ರಿ–ರಾಫೆಲೈಟ್ ಚಳವಳಿ:**

ಒಂದು ಹೊಸ ಗುಂಪು ಪ್ರಕೃತಿಗಿಂತ ಹೆಚ್ಚಾಗಿ ಅತಿ ಪ್ರಾಕೃತಿಕ ಸಂಗತಿಗಳನ್ನೇ ಆಧಾರವಾಗಿಟ್ಟುಕೊಂಡು ಕವನಗಳನ್ನು ಬರೆದವರು, 'ಡಾಂಟೆ ಗ್ಯಾಬ್ರಿಯಲ್ ರಾಸೆಟ್'. ಈ ಹೊಸ ಚಳವಳಿಯ ಮುಖ್ಯ ಕೇಂದ್ರ ಧ್ವನಿ, ವಾತಾವರಣಗಳೆಡೆಗೆ ಇವನ ಆಸಕ್ತಿ ಹೆಚ್ಚು. ಆನಂತರದಲ್ಲಿ 'ಸ್ವಿನ್‌ಬರ್ಗ್' ಎಂಬ ಕವಿ ಸಂಗೀತ ಮಾಧುರ್ಯಗಳ ಮುಲನವನ್ನೊಳಗೊಂಡ ಹೃದಯದ ರಾಗ ಬಿಂಬಿಸುವ ಕವನಗಳನ್ನು ರಚಿಸಿದ. ಮುಂದೆ ಫ್ರಾನ್ಸಿಸ್ ಥಾಂಸನ್ ಎಂಬಾತ ದೀರ್ಘ ಪ್ರಗಾಥಗಳನ್ನು ರಚಿಸಿ ಭಾವಗೀತೆ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನಿತ್ತ.

ಇಲ್ಲಿ ಭಾವಗೀತೆಯು ಉಗಮಗೊಂಡು ಬೆಳೆದು ಬಂದ ಬಗೆಯನ್ನು ಸ್ಥೂಲವಾಗಿ ವಿವರಿಸಲಾಗಿದೆ. ಎಲ್ಲ ಕವಿಗಳನ್ನು ಎಲ್ಲ ಕೃತಿಗಳನ್ನು ಇಲ್ಲಿ ಹೆಸರಿಸುವುದು ಅವಶ್ಯಕವಾಗಿಲ್ಲದೇ ಇದ್ದುದ್ದರಿಂದ ಅವುಗಳನ್ನು ಕೈಬಿಡಲಾಗಿದೆ.

**ಭಾವಗೀತೆಯ ಪ್ರಕಾರಗಳು:**

ಹೇಗೆ ಕವಿಯ ಹೃದಯದ ಭಾವಗಳು ಅಸಂಖ್ಯಾತವಾದವೋ ಹಾಗೆಯೇ ಭಾವಗೀತೆಯ ಪ್ರಕಾರಗಳೂ ಅಸಂಖ್ಯಾತವಾದವು. ಭಾವನೆಗಳನ್ನು ಅನುಸರಿಸಿ, ಪ್ರೇಮಗೀತೆಗಳು, ಭಕ್ತಿಗೀತೆಗಳು ಎಂದು ವಿಭಾಗಿಸಿರುವುದು

ಒಂದೆಡೆಯಾದರೆ, ಕವನದ ಹೊರರೂಪವನ್ನು ಅನುಸರಿಸಿ ಓಡ್, ಎಲಿಜಿ, ಸಾನೆಟ್ ಎಂದು ವಿಭಾಗಿಸಿರುವುದು ಇನ್ನೊಂದೆಡೆ. ವರ್ಡ್ಸ್‌ವರ್ತ್ ಸ್ತೋತ್ರಗೀತೆಗಳು, ಗಾಥಾಗಳು, ಶೋಕಗೀತೆಗಳು, ಹಾಡು ಮತ್ತು ಲಾವಣಿಗಳು ಎಂದು ವಿಭಾಗಮಾಡಿರುವುದುಂಟು. ಬಹುಜನ ವಿದ್ವಾಂಸರ ಪ್ರಕಾರ ಭಾವಗೀತೆಯ ಪ್ರಕಾರಗಳು ಇಂತಿವೆ:

1. Elegy (ಶೋಕಗೀತೆ)
2. Love lyric (ಪ್ರೇಮಗೀತೆ)
3. Sonnet (ಅಷ್ಟಷಟ್ಪದಿ)
4. Ode (ಪ್ರಗಾಥ)
5. Satine (ವ್ಯಂಗ್ಯಕವನ)
6. Ballad (ಲಾವಣಿ)

ಈ ಮೇಲ್ಕಂಡವು ಮಾತ್ರವಲ್ಲದೆ–

1. Idyll (ಕಿರುಚಿತ್ರ)
2. ಸೀಸಪದ್ಯ
3. ಮುಕ್ತಕಗಳು
4. ವಚನ ಕವನಗಳು– ಎಂಬಿವುಗಳು ಭಾವಗೀತೆಯ ಪ್ರಕಾರಗಳೆಂದು ಗಣಿಸಲ್ಪಟ್ಟಿವೆ.

**Elegy (ಶೋಕಗೀತೆ):**

ತಮ್ಮ ಅತ್ಯಂತ ಪ್ರಿಯ ವ್ಯಕ್ತಿತೀರಿಕೊಂಡಾಗ ಅವನನ್ನು ಕುರಿತು ಬರೆಯುವ ಕವನ. ಪ್ರೇಮ, ಯುದ್ಧದ ಸಂದರ್ಭ ಇದಕ್ಕೆ ಪ್ರೇರಣೆ. ಇದು ಗ್ರೀಕರಲ್ಲಿ ಆರಂಭವಾಯಿತು. ಗ್ರೀಕರಲ್ಲಿ ಮೃತರ ಸಮಾಧಿಕ್ರಿಯೆಯ ಸಂದರ್ಭದಲ್ಲಿ ಸಂಗೀತದೊಂದಿಗೆ ಉಪಯೋಗಿಸುತ್ತಿದ್ದ ಮಂತ್ರದಂತಹ ಪದಗಳ ಗುಂಪಿಗೆ ಈ ಹೆಸರು ಸಲ್ಲುತ್ತಿತ್ತು. ಕ್ರಿ.ಪೂ. 7ನೆಯ ಶತಮಾನದ 'ಕ್ಯಾಲಿನಸ್' ಮೊದಲ ಎಲಿಜಿಕಾರ. ಟೈರ್ಟಿಯಸ್, ವಿಮ್ಮೆರ್ಮಸ್ಸ– ಇವರು ಪ್ರಸಿದ್ಧ ಗ್ರೀಕ್ ಎಲಿಜಿಕಾರರು. ಇಂಗ್ಲಿಷ್‌ನಲ್ಲಿ ಅತ್ಯಂತ ಪ್ರಾಚೀನವಾದ ಎಲಿಜಿಯೆಂದರೆ ಜಾರ್ಜ್ ಗ್ಯಾಸ್ಕೋನಿಯ ' ದಿ ಕಂಪ್ಲೈಂಟ್ ಆಫ್ ದಿ ಫಿಲೋಮಿನೆ'.ಮಿಲ್ಟನ್, ಷೆಲ್ಲಿ, ಗ್ರೇ ಕವಿಗಳು ಇಂಗ್ಲಿಷಿನ ಪ್ರಮುಖ ಎಲಿಜಿಕಾರರು. ಕುವೆಂಪು ಅವರ 'ಮುಕ್ತ ಮಹಾಪುರುಷನಿಗೆ', ಬೇಂದ್ರೆಯವರ 'ಶಾಂತ ಕವಿಗಳ ವಿಶ್ರಾಂತಿ', ಇವು ಗಮನಾರ್ಹ ಶೋಕಗೀತಗಳು.

**2. Love lyric (ಪ್ರೇಮಗೀತೆ):**

ಇದು ಭಾವಗೀತೆಯ ಅತ್ಯಂತ ಜನಪ್ರಿಯ ಪ್ರಕಾರ. ಜಗತ್ತಿನ ಎಲ್ಲ ಸಾಹಿತ್ಯದಲ್ಲಿಯೂ ಈ ಪ್ರಕಾರವಿದೆ. ವಿರಹ, ಸಮಾಗಮಗಳ ಯಾತನೆ, ಸಂತೋಷ ಮುಂತಾದವನ್ನು ಈ ಪ್ರಕಾರದಲ್ಲಿ ಕಾಣಬಹುದು. ಶೃಂಗಾರರಸ ಪ್ರಧಾನವಾದುದು. ತೀ.ನಂ.ಶ್ರೀ, ಬಿ.ಎಂ.ಶ್ರೀ, ಕುವೆಂಪು, ಕೆ.ಎಸ್.ನ, ಬೇಂದ್ರೆ, ಪು.ತಿ.ನ ರಾಜರತ್ನಂ ಮುಂತಾದ ಅನೇಕ ಕವಿಗಳು ಪ್ರೇಮಗೀತೆಗಳನ್ನು ರಚಿಸಿದ್ದಾರೆ.

### 3. Sonnet (ಅಷ್ಟಷಟ್ಪದಿ)

ಇದರ ಮೂಲ ನೆಲೆ ಇಟಲಿ. ಇಟಾಲಿಯನ್ ಸಾನೆಟ್ಟುಗಳ ಸ್ಫೂರ್ತಿಯಿಂದ 16ನೆಯ ಶತಮಾನದಲ್ಲಿ ಇಂಗ್ಲಿಷಿನಲ್ಲಿ ಕಾಣಿಸಿಕೊಂಡಿತು. ಇಟಾಲಿಯನ್ ಭಾಷೆಯಲ್ಲಿ ಇದನ್ನು ಮೊದಲು ಬಳಸಿದವ ಡಾಂಟೆ. ಇದನ್ನು ಪ್ರಸಿದ್ಧಿಗೆ ತಂದವನು ಪೆಟ್ರಾರ್ಕ್. ಇದು 14 ಸಾಲಿನ ಪದ್ಯವೆಂದು ನಿರ್ದೇಶಿಸಿದವನು 'ಗಿತಾನ್ ದಿ ಅರೆಸ್ಸೊ', ಪೆಟ್ರಾರ್ಕ್ ತನ್ನ ಪ್ರೇಯಸಿಯಾದ ಲಾರ(Loura)ಳನ್ನು ಕುರಿತು ಬರೆದ ಸಾನೆಟ್ಟುಗಳು ಜಗತ್ಪ್ರಸಿದ್ಧವಾಗಿವೆ. ಇಂಗ್ಲಿಷಿಗೆ ಸಾನೆಟನ್ನು ತಂದ ಕೀರ್ತಿ ವಯೆಟ ಮತ್ತು ಸರ್ರೆ ಕವಿಗಳಿಗೆ ಸಲ್ಲುತ್ತದೆ, 'ಸ್ಪೆನ್ಸೇರಿಯನ್' ಎಂಬ ಸ್ಪೆನ್ಸರನ ಸಾನೆಟ್ ರೂಪವೂ ಇದೆ.

ಇಂಗ್ಲೀಷ್‌ನಲ್ಲಿ ಪ್ರಮುಖ ಸಾನೆಟ್ ರೂಪಗಳೆಂದರೆ ಪೆಟ್ರಾರ್ಕ್ ಸಾನೆಟ್ ಮತ್ತು ಷೇಕ್ಸ್‌ಪಿಯರ್ನ್ ಸಾನೆಟ್. ಪೆಟ್ರಾರ್ಕ್ ಸಾನೆಟ್‌ನಲ್ಲಿ 2 ಖಂಡಗಳಿರುತ್ತವೆ, ಮೊದಲನೆಯ ಖಂಡದಲ್ಲಿ 8 ಸಾಲುಗಳಿರುತ್ತದೆ. ಇದಕ್ಕೆ 'Octave' ಎಂದು ಹೆಸರು. ಕೊನೆಯ ಖಂಡದಲ್ಲಿ 6 ಸಾಲುಗಳಿರುತ್ತವೆ, ಇದಕ್ಕೆ 'Sestet' ಎಂದು ಹೆಸರು. ಷೇಕ್ಸ್‌ಪಿಯರ್‌ನ ಸಾನೆಟ್‌ನಲ್ಲಿ ಭಿನ್ನಭಿನ್ನ ಪ್ರಾಸವ್ಯವಸ್ಥೆಯ 3 ಚೌಪದಿಗಳು, ಕೊನೆಯಲ್ಲಿ ದ್ವಿಪದಿ ಇರುತ್ತದೆ. ಪ್ರೇಮ, ಪ್ರಣಯ, ಸಾಮಾಜಿಕ ವಿಮರ್ಶೆ, ವ್ಯಕ್ತಿಮಹಿಮೆ, ದೇಶಭಕ್ತಿ ಇದರ ವಸ್ತುಗಳಾಗಿರುತ್ತವೆ. ರಾಸೆಟ್ ಇದನ್ನು 'ಕ್ಷಣವೊಂದರ ಸ್ಮಾರಕ' ಎಂದಿದ್ದಾನೆ. 'ಆಂಗ್ಲ ಕವಿತಾವಳಿ'. 'ಇಂಗ್ಲಿಷ್ ಗೀತಗಳು– ಇವುಗಳಲ್ಲಿ ಸಾನೆಟ್ ಬಳಕೆಯಾಗದೆ ಇರುವುದು (ಇಂಗ್ಲಿಷ್ ಕವನಗಳ ಅನುವಾದ ಕೃತಿಗಳು) ಮಹತ್ತ್ವದ ಸಂಗತಿ. ಕನ್ನಡದಲ್ಲಿ ಮೊತ್ತಮೊದಲ ಬಾರಿಗೆ ಇದನ್ನು ರಚಿಸಿದ ಹೆಗ್ಗಳಿಕೆ ಎಂ.ಗೋವಿದ ಪೈಗಳದು. ಇದನ್ನು ಅವರು 'ಚತುರ್ದಶಪದಿ' ಎಂದಿದ್ದಾರೆ. ಕುವೆಂಪು, ಗೋಕಾಕ್, ಪುತಿನ ಕೆಎಸ್‌ನ ಅಡಿಗರು, ಕಣವಿ, ಜಿ.ಎಸ್.ಎಸ್ ಮೊದಲಾದವರು ಈ ಪ್ರಕಾರವನ್ನು ಬಳಸಿದ್ದಾರೆ.

### 4. Ode (ಪ್ರಗಾಥ)

ಸಾನೆಟ್ ನಂತೆಯೇ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಕನ್ನಡದಲ್ಲಿ ರೂಪುಗೊಂಡಿರುವ ಛಂದೋಪ್ರಕಾರವಿದು. ಇದು ಗ್ರೀಕ್ ಮೂಲದ್ದು. ಮೇಳಗೀತೆಗಳಲ್ಲಿ ಪ್ರಯೋಗವಾಗುತ್ತಿದ್ದ ಇದು ಇಂಗ್ಲಿಷ್‌ನಲ್ಲಿ ಬೆನ್‌ಜಾನ್‌ನಿಂದ ಟೆನಿಸನ್ ವರೆಗೆ ಮತ್ತು ಆಧುನಿಕ ಕಾಲದಲ್ಲಿ ಎಲ್ಲ ಪ್ರಮುಖ ಕವಿಗಳಿಂದಲು ಬಳಕೆಯಾದ ಪ್ರಕಾರ, ಕನ್ನಡದಲ್ಲಿ ಇದಕ್ಕೆ ಪ್ರಗಾಥ ಎಂದು ಹೆಸರಿಟ್ಟವರು ಆಚಾರ್ಯ ಬಿ.ಎಂ.ಶ್ರೀ ಇದರಲ್ಲಿ ಪಿಂಡಾರಿಕ್ ಓಡ್(ಗ್ರೀಕ್), ಹೊರೆಷಿಯನ್ ಓಡ್(ಲ್ಯಾಟಿನ್) ಎಂಬ 2 ಪ್ರಕಾರಗಲಿವೆ. ಪಿಂಡಾರಿಕ್ ಓಡ್‌ಗಳೂ ಸಾಮಾನ್ಯವಾಗಿ ಸಾಂದರ್ಭಿಕ ಕವನಗಳು. ಇವುಗಳನ್ನು ಮೇಳದವರು ಹಾಡುತ್ತಿದ್ದರು. ಸ್ಟ್ರೋಫ್ (ಎಡಸುತ್ತು), ಆಂಟಿಸ್ಟ್ರೋಫ್(ಬಲಸುತು) , ಇಪೋಡ್(ನಿಲುಗಡೆ) ಇದು ಪಿಂಡಾರಿಕ್ ಓಡ್ ವಿನ್ಯಾಸದ ಬಗೆ ಇದನ್ನು 'Regular Ode' ಎಂದೂ ಕರೆಯುತ್ತಾರೆ. ಹೋರೆಷಿಯನ್ ಓಡ್‌ಗಳು ವೈಯಕ್ತಿಕ ಸ್ವರೂಪದವು, ಚಿಕ್ಕಚಿಕ್ಕ ನುಡಿಗಳನ್ನೊಳಗೊಂಡ ಇವು ಚಿಂತನೆ ಮತ್ತು ಭಾವಪ್ರಧಾನವಾದವು. ಮಿಲ್ಟನ್, ಡ್ರೈಡನ್, ವರ್ಡ್ಸ್‌ವರ್ತ್,

ಕೀಟ್ಸ್, ಗ್ರೇ, ಷೆಲ್ಲಿ, ಅರ್ನಾಲ್ಡ್ ಮುಂತಾದವರು ಓಡ್‌ಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಶ್ರೀ, ಪೈ, ಪುತಿನ, ಕೆಎಸ್‌ನ ಡಿವಿಜಿ, ಮಾಸ್ತಿ, ಬೇಂದ್ರೆ, ಎಂವೀಸಿ ಮೊದಲಾದವರು ಓಡ್‌ಗಳನ್ನು ರಚಿಸಿದ್ದಾರೆ.

## 5. Satire (ವ್ಯಂಗ್ಯಕವನ)

ಶಿಕ್ಷೆ ಬೋಧನೆ ಈ ಎರಡು ರೀತಿಗಳನ್ನು ಕೂಡಿಸಿಕೊಂಡು ಎರಡನ್ನು ಮೀರುವ ನಗೆಯ ರೀತಿಯೊಂದಿದೆ. ತಪ್ಪನ್ನು ಎತ್ತಿತೋರಿಸಿ, ಆ ತಪ್ಪು ಮಾಡಿದವರನ್ನು ನಗೆಪಾಟಲಿಗೆ ಗುರಿಮಾಡುವುದರ ಮೂಲಕ, ಅವರ ತಪ್ಪು ತಿದ್ದಿಕೊಳ್ಳುವಂತೆ ಮಾಡುವುದೇ ಈ ರೀತಿ. ಇದನ್ನು ವಿಡಂಬನ ಅಥವಾ ವ್ಯಂಗ್ಯ ಎನ್ನುವರು. ಅನ್ಯೋಕ್ತಿಯೂ ವಿಡಂಬನೆಯ ಒಂದು ರೀತಿ. ಇದು ಸಹ ಪಾಶ್ಚಾತ್ಯದಿಂದ ಬಂದ ಕೊಡುಗೆ. ಕನ್ನಡದಲ್ಲಿ ಶ್ರೀ, ರಾಜರತ್ನಂ, ಕಡೆಂಗೋಡ್ಲು ಶಂಕರಭಟ್ಟ, ಬೇಂದ್ರೆ, ಅಡಿಗ, ಕೆ.ಎಸ್.ನ., ಕುವೆಂಪು ಮ್ಯಾಸ್ತಿ ಮುಂತಾದವರು ರಚಿಸಿದ್ದಾರೆ.

## 6. Ballad (ಲಾವಣಿ)

ಕಥಾತ್ಮಕವಾಗಿ, ಹಾಡಲು ಯೋಗ್ಯವಾದ ರೂಪ, ವಿಷಯಗಳಲ್ಲಿ ಜನಪದ ಮಾದರಿಯಾದ ಇದರಲ್ಲಿ ಕ್ರಿಯೆಯೆ ಪ್ರಧಾನ. 'Ballad' ಎಂಬುದು ಲ್ಯಾಟಿನ್ನಿನ 'Ballare' ಶಬ್ದದಿಂದ ನಿಷ್ಪನ್ನವಾದುದು, 'ಕುಣಿತದ ಹಾಡು' (to dance) ಎಂದು ಇದರ ಅರ್ಥ. ಇವು ಸಂಪ್ರದಾಯನಿಷ್ಠವಾದವು. ಒಂಟಿಲಾವಣಿ, ಮೇಳ ಲಾವಣಿ ಎಂದು ಎರಡು ವಿಧಗಳಿವೆ. ಇದನ್ನು 'ಕಥನಗೀತೆ' ಎಂತಲೂ ಕರೆಯುತ್ತಾರೆ. 'ಲಾವಣಿಗಳೇ ಕ್ರಮೇಣ ಬೆಳೆದು ಮಹಾಕಾವ್ಯವಾದವು' ಎಂಬ ಮಾತಿದೆ. ಫಿನ್ಲೆಂಡ್, ಐರ್ಲೆಂಡ್, ಸುಮೇರಿಯನ್, ಸ್ಪೇನ್, ಜರ್ಮನ್‌ಗಳಲ್ಲಿ ಹೇಗೋ ಹಾಗೆಯೇ ಕನ್ನಡದ 'ಮಲೆ ಮಾದೇಶ್ವರ', 'ಮಂಟೇಸ್ವಾಮಿ', 'ಜುಂಜಪ್ಪ', 'ಮೈಲಾರಲಿಂಗ' ಇವೇ ಮುಂತಾದ ಕಾರ್ಯಗಳು ಲಾವಣಿಗಳ ವಿಕಾಸದಿಂದ ರೂಪುಗೊಂಡಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಫ್ಲೀಟರು ಸಂಗ್ರಹಿಸಿದ ಲಾವಣಿಗಳು ಉಲ್ಲೇಖಾರ್ಹವಾದವು.

## 7. Idyll (ಕಿರುಚಿತ್ರ)

ಇದರಲ್ಲಿ ಕವನದ ವಸ್ತುವಿಗೆ ಪ್ರಾಮುಖ್ಯವಿದೆ. ಇದು ಗ್ರೀಕಿನ 'Eidullion' ಎಂಬ ಪದದಿಂದ ಬಂದದ್ದು. ಕವನದಲ್ಲಿ ಪುಟ್ಟ ಚಿತ್ರವೊಂದನ್ನು ಇದು ಒಳಗೊಂಡಿರುತ್ತದೆ. ಗ್ರೀಕರಲ್ಲಿ ಥಿಯೋಕ್ರಿಟ್ ಇದನ್ನು ರೂಢಿಸಿದ, ಹಳ್ಳಿಯ ಮತ್ತು ನಗರ ಜೀವನಗಳ ಚಿತ್ರಣ, ಪೌರಾಣಿಕ ಕಥಗಳ ನಿರೂಪಣೆ ಮತ್ತು ವರ್ಣನೆ ಇವು ಅವನ 'Idyll' ನಲ್ಲಿ ಮೂಡಿವೆ. ಇಂಗ್ಲಿಷಿನಲ್ಲಿ ಟೆನಿಸನ್‌ನವು ಪ್ರಖ್ಯಾತವಾದವು. ವರ್ಡ್ಸ್‌ವರ್ತ್‌ನ 'ದಿ ಸಾಲಿಟರಿ ರೀಪರ್ ಎಂಬುದು ಪ್ರಮುಖವಾದುದು.

## 8. ಸೀಸಪದ್ಯ:

ಇದು ಶುದ್ಧ ದ್ರಾವಿಡ ಛಂದಸ್ಸು. ಒಂದೊಂದು ಪಾದದಲ್ಲಿ 6 ವಿಷ್ಣುಗಣಗಳು, 2 ಬ್ರಹ್ಮಗಣಗಳು ಇದ್ದು, ಎರಡೆರಡು ಗಣಕ್ಕೆ ಯತಿಯಿರುತ್ತದೆ ಎಂದು 'ಕನ್ನಡ ಕೈಪಿಡಿ'ಯಲ್ಲಿ ಹೇಳಿದೆ. ಡಿವಿಜಿ, ಬೇಂದ್ರೆಯವರು ಸೀಸಪದ್ಯಗಳನ್ನು ರಚಿಸಿದ್ದಾರೆ.

**9. ಮುಕ್ತಕಗಳು:**

"ನಾಲ್ಕಾರು ಪಂಕ್ತಿಗಳಲ್ಲಿ ಸುಂದರವಾದ ಭಾವಪ್ರಪಂಚವೊಂದನ್ನು ಸೃಷ್ಟಿಸಬಲ್ಲ ಕವನರೂಪವಿದು. ಪ್ರಣಯ ಹಾಸ್ಯ ವಿಡಂಬನೆ ಇವು ಇದರ ವಸ್ತು"[2] ಇದಕ್ಕೆ ಸಂಸ್ಕೃತ ಸಾಹಿತ್ಯ ಮೂಲ. ಇದು ಕನ್ನಡ ಜನಪದ ಸಾಹಿತ್ಯದಲ್ಲಿ ಅಲ್ಲಲ್ಲಿ ಸೃಷ್ಟಿಯಾಗಿದ್ದರೂ ಅಧುನಿಕ ಕನ್ನಡ ಕವಿಗಳು ಅಷ್ಟಾಗಿ ಪೋಷಿಸಲಿಲ್ಲ.

**10. ವಚನ ಕವನಗಳು:**

'ಭಾವ ನಿರ್ಭರತೆಯನ್ನುಳ್ಳ ಕವನ ವಚನವಾಗಬಹುದು. ಯಾವುದೋ ಒಂದು ಮನಸ್ಥಿತಿಯಲ್ಲಿ ಸೃಷ್ಟಿಮುಖವಾದ ಕವಿ ಹೃದಯ ಈ ರೂಪವನ್ನು ಆರಿಸುತ್ತದೆ.

ವಿಶ್ವದ ವಿವಿಧ ವ್ಯಾಪಾರಗಳು ಇದರ ವಸ್ತು. ಇದು ಪದ್ಯಗಂಧಿಯಾದ ಗದ್ಯಶೈಲಿ. ರಂಗನಾಥ ದಿವಾಕರ, ಕುವೆಂಪು, ಬೇಂದ್ರೆ, ಆನಂದ– ಇವರು ವಚನಕವನಗಳನ್ನು ರಚಿಸಿದ್ದಾರೆ. ಇದಕ್ಕೆ "ಕನ್ನಡವೇ ತವರ್ಮನೆ"[3]

**ಬಿ.ಎಂ.ಶ್ರೀ ಪೂರ್ವದಲ್ಲಿ ಭಾವಗೀತೆಯ ಅನುವಾದಗಳು(ಇಂಗ್ಲಿಷ್‌ಗೆ ಸಂಬಂಧಿಸಿದಂತೆ):**

" Though one man must originate a movement, it takes many men to make one, and when our glance backward deepens into a scrutiny we see not so much the movement as the men"[4] ಎಂಬ ವಾಲ್ಟರ್ ಡಿಲನ ಅಭಿಪ್ರಾಯ ಗಮನಾರ್ಹ. ಶ್ರೀಯವರ ಇಂಗ್ಲಿಷ್ ಗೀತಗಳು ಎಂಬ ಭಾವಗೀತೆಗಳ ಅನುವಾದ ಕೃತಿ ಹೊರಬರಬೇಕಾದರೆ ಅವರಿಗಿಂತಲೂ ಮೊದಲು ಅನೇಕರು ಇಂಗ್ಲಿಷ್ ಕವಿತೆಯ ಆಸ್ವಾದವನ್ನು ಪಡೆದು ಅನುವಾದ ಮಾರ್ಗದಲ್ಲಿ ಸಾಗಿದ್ದರು. ಅವರಲ್ಲಿ ಎಸ್,ಜಿ ನರಸಿಂಹಾಚಾರ್ಯರು, ಜಯರಾಯಾಚಾರ್ಯರು, ಎಸ್.ಜಿ. ಗೋವಿಂದಾರಾಜಯ್ಯಂಗಾರ್ಯರು, ಪಂಜೆ ಮಂಗೇಶರಾಯರು, ಪೈ, ಹಟ್ಟಿಯಂಗಡಿ ನಾರಾಯಣರಾಯರು, ರಾಜಗೋಪಾಲ, ಕೆರೋಡಿ ಸುಬ್ಬರಾಯರು, ಎಂ.ಡಿ ಅಳಸಿಂಗ್ರಾಚಾರ್ಯ ಪ್ರಮುಖರು.

**ಎಸ್,ಜಿ ನರಸಿಂಹಾಚಾರ್ಯ:**

ಇವರು ಇಂಗ್ಲಿಷ್ ಸಾಹಿತ್ಯ ಓದಿ, ಅಲ್ಲಿನ ಕವಿತೆಗಳ ವಸ್ತು ಭಾವ, ಬಂಧ, ಭಾಷೆಗಳಿಗೆ ಮಾರು ಹೋಗಿ, ಆಸ್ವಾದವನ್ನು ಪಡೆದ ಕವಿಗಳು. ಅದರ ಸ್ಫೂರ್ತಿ ಪಡೆದು ಅನುವಾದ ಕಾರ್ಯದಲ್ಲಿ ತೊಡಗಿದ್ದವರು. ಇವರು ಇಂಗ್ಲಿಷಿನಿಂದ ಕೆಲವು ಪದ್ಯಗಳನ್ನು ಅನುವಾದಿಸಿದ್ದಾರೆ. ಇವರ ಅನುವಾದದಲ್ಲಿ ಸರಳತೆ ಮುಖ್ಯಲಕ್ಷಣ. ವರ್ಡ್ಸ್‌ವರ್ತನ 'To the cuckoo', 'Mrs. F. Hemans', 'The Better land', 'Twinkle Twinkle little star' , Try, 'Try, try again' ಮುಂತಾದವು ಅವರ ಅನುವಾದ ಕವನಗಳು ಷೇಕ್ಸ್‌ಪಿಯರ್ ನ 'Tempest'ನಿಂದ 2 ಹಾಡುಗಳನ್ನು ಅನುವಾದಿಸಿದ್ದಾರೆ.

---

[2] ಕನ್ನಡದಲ್ಲಿ ಭಾವಗೀತೆ– ಪ್ರಭುಶಂಕರ ಪುಟ 82

[3] ಕನ್ನಡದಲ್ಲಿ ಭಾವಗೀತೆ– ಪ್ರಭುಶಂಕರ ಪುಟ 84

[4] ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ –ಎಸ್ ಅನಂತನಾರಾಯಣ ಪುಟ 30

'Full fathom five thy fother is', 'Where the bee sucks' ಇವು ಆ ಎರಡು ಕವಿತೆಗಳು. 20ನೆಯ ಶತಮಾನದ ಮೊದಲ ದಶಕಗಳಲ್ಲಿ ಪ್ರಚುರವಾಗಿದ್ದ ಕನ್ನಡ ಪಠ್ಯಪುಸ್ತಕಗಳಲ್ಲಿ ಸೇರಿದ್ದ ಇಂಗ್ಲಿಷ್ ಪದ್ಯಾನುವಾದಗಳೆಲ್ಲ ಬಹುಮಟ್ಟಿಗೆ ಇವರಿಂದಲೇ ಆದವೆಂದು ತೀನಂಶ್ರೀ ಅವರ ಅಭಿಪ್ರಾಯ. ನಡುಗನ್ನಡ ಕಾಲದಲ್ಲಿದ್ದ ಷಟ್ಪದಿ, ಚೌಪದಿ, ಸಾಂಗತ್ಯಗಳನ್ನೆ ಹೊಸ ಭಾಷೆ ಭಾವಗಳಿಗೆ ಹೊಂದಿಕೆಯಾಗುವಂತೆ ಬಳಸಿದರು. ಆನೇಕ ಸ್ವತಂತ್ರ ಕೃತಿಗಳನ್ನು ರಚಿಸಿದ್ದರೂ ಇಂಗ್ಲಿಷ್ ಭಾವಗೀತೆಗಳ ಅನುವಾದದ ಮೂಲಕ ಹೊಸ ಕವಿತೆಯ ಉಗಮಕ್ಕೆ ತಮ್ಮದೇ ಆದ ಕೊಡುಗೆಯನ್ನಿತ್ತರು.

**ಜಯರಾಯಾಚಾರ್ಯ:**

ಇವರು ಅನುಕರಣ ಗೀತೆಗಳಲ್ಲಿ ಹೊಸ ಹೆಜ್ಜೆ ಹಾಕಿದವರು. ಅವರು ಆರಿಸಿಕೊಂಡ ವಸ್ತುಗಳು ಹೊಸವು. 'ನವಿಲೇ, ನವಿಲೇ', ರೈಲುಗಾಡಿ', ಮುಂತಾದ ಮಕ್ಕಳ ಹಾಡುಗಳು ಗಮನಾರ್ಹವಾದವು. ಇಂಗ್ಲಿಷಿನಿಂದ ಅನುವಾದ ಮಾಡಿದ್ದು ಕಡಿಮೆ. 'Mother' ಎಂಬ ಇಂಗ್ಲಿಷ್ ಕವನವನ್ನು 'ಮಾತೃಭಕ್ತಿ' ಎಂದು ರೂಪಾಂತರಿಸಿದ್ದಾರೆ. ಅವರ ರಚನೆಗಳಲ್ಲಿ ಛಂದಸ್ಸಿನ ನಡೆ, ಪದಪ್ರಯೋಗ, ಇವುಗಳಲ್ಲಿ ಪರಿಣತಿ ಕಾಣುತ್ತದೆ.

**ಎಸ್.ಜಿ. ಗೋವಿಂದಾರಾಜಯ್ಯಂಗಾರ್ಯ:**

ಇವರು ಎಸ್. ಜಿ ನರಸಿಂಹಾಚಾರ್ಯರ ತಮ್ಮ. ಇವರಿಗೆ ಇಂಗ್ಲಿಷಿನಿಂದ ಕನ್ನಡದ ಭಂಡಾರವನ್ನು ತುಂಬಬೇಕೆನ್ನುವ ಆಕಾಂಕ್ಷೆ ಇತ್ತು. ಇಂಗ್ಲಿಷಿನಿಂದ ಕೆಲವು ಅನುವಾದಗಳನ್ನು ಮಾಡಿದ್ದಾರೆ. ಈ ಕವಿತೆಗಳಲ್ಲಿ ಹಳಗನ್ನಡ ಮತ್ತು ಹಳೆಯ ಪ್ರಯೋಗಗಳನ್ನು ಕಾಣಬಹುದು. ಇಂಗ್ಲಿಷಿನಿಂದ ಪ್ರಖ್ಯಾತವಾದ ಗ್ರೇ ಕವಿಯ ಎಲಿಜಿಯನ್ನು 'ಶ್ಮಶಾನ ಶೋಕ' ಎಂಬ ಹೆಸರಿನಿಂದ ಕನ್ನಡಿಸಿದ್ದಾರೆ. ಮೂಲದ ಗಾಂಭೀರ್ಯವನ್ನಿಲ್ಲಿ ಕಾಣಬಹುದು ಎಂಬುದು ವಿದ್ವಾಂಸರ ಅಭಿಮತ.

**ಪಂಜೆ ಮಂಗೇಶರಾಯರು:**

ಮಕ್ಕಳಲ್ಲಿ ತಮಗಿದ್ದ ಅತಿಶಯ ಪ್ರೇಮದಿಂದ ಸರಳವಾದ ಕವನಗಳನ್ನು ರಚಿಸಿ ಖ್ಯಾತರಾದವರು. ಇಂಗ್ಲಿಷ್ ಕವಿತೆಗಳಿಂದ ಸ್ಫೂರ್ತಿಗೊಂಡು ಅವುಗಳ ಅಧಾರದ ಮೇಲೆ ಬರೆದ ಕವಿತೆಗಳು ರಮ್ಯವಾಗಿದೆ. 'Frolic in the wind' ಕವಿತೆಯನ್ನು 'ತೆಂಕಣ ಗಾಳಿಯಾಟ'ವಾಗಿ ರೂಪಾಂತರಿಸಿದ್ದಾರೆ. 'Twinkle Twinkle little star' ಎಂಬುದನ್ನು 'ನಕ್ಷತ್ರ' ಎಂದು ಕನ್ನಡಿಸಿದ್ದಾರೆ. 'Mrs. F.Hemans'ನ 'O call my brother back to me' ಯನ್ನು 'ಅಣ್ಣನ ವಿಲಾಪ' ಎಂಬುದಾಗಿ ಭಾಷಾಂತರಿಸಿದ್ದಾರೆ.

**ಮಂಜೇಶ್ವರ ಗೋವಿಂದ ಪೈ:**

ಪಂಜೆ ಮಂಗೇಶರಾಯರ ಶಿಷ್ಯರಾದ ಇವರು ಕಾವ್ಯ ನಾಟಕ ಪ್ರಕಾರಗಳಲ್ಲಿ ನವೀನ ಪ್ರಯೋಗಗಳನ್ನು ಮಾಡಿದವರು, ಆದಿಪ್ರಾಸ ಪರಿತ್ಯಾಗದ ಧೀರಸಿರ್ಧಾರವನ್ನು ಕೈಗೊಂಡವರು. ಬ್ರೌನಿಂಗ್ ನಿಂದ 'ಗಿಳಿವಿಂಡು', ವರ್ಡ್ಸ್‌ವರ್ತ್‌ನಿಂದ

'ಚಿಟ್ಟೆಗೆ', ಷೆಲ್ಲಿಯಿಂದ 'ಬಾನಕ್ಕಿಗೆ' ಇವರ ಪ್ರಮುಖ ಅನುವಾದಗಳು. ಕನ್ನಡದಲ್ಲಿ ಸಾನೆಟ್ ಪ್ರಕಾರವನ್ನು ಬಳಸಿ ಮೊದಲು ಕವಿತೆಗಳನ್ನು ರಚಿಸಿದ ಹೆಗ್ಗಳಿಕೆ ಇವರದು.

**ಹಟ್ಟಿಯಂಗಡಿ ನಾರಾಯಣರಾಯರು:**

"ಇಂಗ್ಲಿಷ್ ಕವಿತೆಯ ರುಚಿಯನ್ನು ಕನ್ನಡಿಗರಿಗೆ ಒದಗಿಸುವುದರಲ್ಲಿ ಪ್ರಾರಂಭದ ಪ್ರಯತ್ನಮಾಡಿ ಮುಂದುವರಿಸಿದ ಹಿರಿಯರಲ್ಲಿ ಇವರು ಪ್ರಮುಖರು. ಪರಿಷತ್ಪತ್ರಿಕೆಯ ಮೂರನೆಯ ಸಂಪುಟದಲಿ ಪ್ರಕಟವಾಗಿರುವ ತಮ್ಮ ಕನ್ನಡ ಕವಿತೆಯ 'ಭವಿತವ್ಯ', 'ಕವಿತಾವರ್ಧನ' ಎಂಬ ಲೇಖನಗಳಲ್ಲಿ ಉದಾಹರಣಾರ್ಥವಾಗಿ ಕೆಲವು ಅನುವಾದಗಳನ್ನು ಕೊಟ್ಟರು. ಮುಂದೆ 'ಆಂಗ್ಲಕವಿತಾಸಾರ' ಎಂಬ ಅವರ ಕೃತಿಗಳ ಚಿಕ್ಕ ಸಂಕಲನ ಮುದ್ರಿತವಾಯಿತು.... ಷೇಕ್ಸ್‌ಪಿಯರ್, ಮಿಲ್ಟನ್, ಕೀಟ್ಸ್, ಗ್ರೇ, ವರ್ಡ್ಸ್‌ವರ್ತ್ ಷೆಲ್ಲಿ, ಕಾಲಿನ್ಸ್, ವಿಟಿಯರ್ ಮೊದಲಾದ ಕವಿಗಳಿಂದ ಆಯ್ದುಕೊಂಡ ಭಾಗಗಳ ಮತ್ತು ಗೀತಗಳ ಅನುವಾದಗಳಿವೆ. ಶ್ರೀಯಾವರ ಇಂಗ್ಲಿಷ್ ಗೀತಗಳನ್ನು ಬಿಟ್ಟರೆ, ಕೇವಲ ಇಂಗ್ಲಿಷ್ ಕಾವ್ಯನುವಾದಕ್ಕೆ ಮೀಸಲಾಗಿದ್ದು ಆ ಕಾರ್ಯದಲ್ಲಿ ಹೊಸ ಮಾರ್ಗವನ್ನು ಹಿಡಿದ ಸರಿಸುಮಾರು ಸಮಕಾಲೀನ ಕೃತಿ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾಸಾರ'ವೊಂದೇ ಎಂದು ತೋರುತ್ತದೆ'' ಎಂದು ತೀನಂಶ್ರೀಯವರು ಮೊದಲು 'ಇಂಗ್ಲಿಷ್ ಗೀತಗಳು' ಕೃತಿಗೆ ಬರೆದ ಮುನ್ನುಡಿಯಲ್ಲಿ ತಿಳಿಸಿದ್ದಾರೆ

ಈ ಮೇಲ್ಕಂಡ ಪ್ರಧಾನ ಅನುವಾದಗಳಲ್ಲದೇ ರಾಜಗೋಪಾಲ (1914), ಕೆರೋಡಿ ಸುಬ್ಬರಾಯರು(1907) ಎಂಬುವವರು ಎಲೆಮರೆಯ ಕಾಯಿಯಂತೆ ಇಂಗ್ಲಿಷಿನಿಂದ ಕೆಲವು ಕವಿತೆಗಳನ್ನು ಅನುವಾದ ಮಾಡಿ ಪ್ರಕಟಿಸುತ್ತಿದ್ದರು. ಎಂ.ಡಿ ಅಳಸಿಂಗ್ರಾಚಾರ್ಯರು ಈ ಮಧ್ಯೆ ಷೇಕ್ಸ್‌ಪಿಯರ್‌ನ 'Seven stages of life' ನ್ನು 'ಮನುಷ್ಯನ ಸಪ್ತವಯೋವಸ್ಥೆಗಳು' ಎಂಬುದಾಗಿ ಅನುವಾದಿಸಿದ್ದಾರೆ.[5] ಗುಪ್ತಗಾಮಿನಿಯಂತೆ ಎಲ್ಲೆಲ್ಲೋ ಹರಿಯುತ್ತಿದ್ದ ಇಂಗ್ಲಿಷ್ ಕಾವ್ಯಾನುವಾದಗಳು ಬಿ.ಎಂ.ಶ್ರೀ. ಅವರನ್ನು ಪರೋಕ್ಷವಾಗಿ ಪ್ರಭಾವಿಸಿ, 'ಇಂಗ್ಲಿಷ್ ಗೀತಗಳ ಉಗಮಕ್ಕೆ ಕಾರಣವಾದವು ಎನ್ನಬಹುದು.

---

[5] ಈ ಅಧ್ಯಾಯದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯಗಳನ್ನು, ಅಡಿ ಟಿಪ್ಪಣಿಗಳನ್ನು ಹೊರತುಪಡಿಸಿ ಉಳಿದ ಅಂಶಗಳನ್ನು 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ', 'ಕನ್ನಡದಲ್ಲಿ ಭಾವಗೀತೆ' ಕೃತಿಗಳಿಂದ ಸಂಗ್ರಹಿಸಲಾಗಿದೆ.

# ಅಧ್ಯಾಯ – 3 – 'ಇಂಗ್ಲಿಷ್ ಗೀತಗಳು' – ಪ್ರಭಾವ, ಪ್ರೇರಣೆ, ಉದ್ದೇಶ, ಮಹತ್ವ

**ಬಿ.ಎಂ.ಶ್ರೀ ಮತ್ತು ಮೂಲ ಆಂಗ್ಲ ಕವನಗಳ ಕರ್ತೃಗಳ ಪರಿಚಯ**

**ಬಿ.ಎಂ.ಶ್ರೀಕಂಠಯ್ಯ:**

ಬಿ.ಎಂ.ಶ್ರೀಕಂಠಯ್ಯನವರು ಆಧುನಿಕ ಕನ್ನಡ ಸಾಹಿತ್ಯದ ಆಚಾರ್ಯ ಪುರುಷರು. 'ಶ್ರೀ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಅವರು ಕ್ರಿ.ಶ. 1884 ರಂದು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಸಂಪಿಗೆಯಲ್ಲಿ ಜನಿಸಿದರು. ತಂದೆ ಬೆಳ್ಳೂರು ಮೈಲಾರಯ್ಯ, ತಾಯಿ ಭಾಗೀರಥಮ್ಮ. ಹುಟ್ಟೂರಿನಲ್ಲಿಯೇ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬಳಿಕ ಮುಂದಿನ ಉನ್ನತ ಶಿಕ್ಷಣವನ್ನು ಮೈಸೂರು, ಬೆಂಗಳೂರು, ಮದರಾಸು ಮೊದಲಾದ ಕಡೆಗಳಲ್ಲಿ ಪಡೆದರು. 1902ರಲ್ಲಿ ಬಿ.ಎ. ಪದವಿ, 1906 ರಲ್ಲಿ ಬಿ.ಎಲ್.ಪದವಿ, 1909 ರಲ್ಲಿ ಎಂ.ಎ ಪದವಿಯನ್ನು ಪಡೆದುಕೊಂಡರು. ಆನಂತರ 1909 ರಿಂದ ಮೈಸೂರು ವಿಶ್ವವಿದ್ಯಾಲಯ ಮಹಾರಾಜ ಕಾಲೇಜಿನಲ್ಲಿ ಆಂಗ್ಲ ಅಧ್ಯಾಪಕರಾಗಿ ನೇಮಕಗೊಂಡು, ಉಪಪ್ರಾಧ್ಯಾಪಕರಾಗಿ , ಪ್ರಾಧ್ಯಾಪಕರಾಗಿ ಬಡ್ತಿ ಪಡೆದರು. ಅವರ ಕನ್ನಡ ಸಂಸ್ಕೃತಗಳ ಪಾಂಡಿತ್ಯವನ್ನು ತಿಳಿದು ಆಗಿನ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿದ್ದ ವೀಯರ್ ಸಾಹೇಬರು ಇವರನ್ನು ಇಂಗ್ಲಿಷ್ ಮತ್ತು ಕನ್ನಡ ಪ್ರಾಧ್ಯಾಪಕರಾಗಿ ನೇಮಿಸಿದರು.

ಬಿ.ಎಂ.ಶ್ರೀಯವರು ಪಾಶ್ಚಾತ್ಯ ಮತ್ತು ದೇಶಿಯ ಪ್ರಮುಖ ವಿದ್ವಾಂಸರೂ ಶಿಕ್ಷಣ ತಜ್ಞರೂ ಆಗಿದ್ದ ಕಿಟೆಲ್, ಕಾಲ್ಡ್‌ವೆಲ್, ಬಿ.ಎಲ್.ರೈಸ್, ಆರ್. ನರಸಿಂಹಚಾರ್, ಡೆಪ್ಯೂಟಿ ಚನ್ನಬಸಪ್ಪ, ವೆಂಕಟರಂಗೋಕಟ್ಟಿ ಹಾಗೂ ಗಂಗಾಧರ ಮಡಿವಾಳೇಶ್ವರ ಮೊದಲಾದ ವಿದ್ವಾಂಸರೊಡಗೂಡಿ ಪ್ರಾಚೀನ ಕಾವ್ಯ, ನಾಡು–ನುಡಿ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಆಧುನಿಕ ಸಂವೇದನೆಯಿಂದ ಪುನರ್ವ್ಯಾಖ್ಯಾನಿಸಿದರು. ಇವರೆಲ್ಲರ ಕಳಕಳಿಯು ಹೆಪ್ಪುಗಟ್ಟಿ ಜುಲೈ 20 1890 ರಂದು ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ಸ್ಥಾಪಿತವಾಯಿತು. ಇದಾದ ಹತ್ತು ವರ್ಷಗಳ ಬಳಿಕ 1911 ರಂದು ಈ ಸಂಘದ ಆಶ್ರಯದಲ್ಲಿ ಶ್ರೀಯವರು ತಮ್ಮ ಮೊತ್ತಮೊದಲ 'ಕನ್ನಡ ಮಾತು ತಲೆಯುತ್ತುವ ಬಗೆ' ಎಂಬ ಯುಗ ಪ್ರವರ್ತಕ ಭಾಷಣವೊಂದನ್ನು ಮಾಡಿದರು. ಇದು ಕನ್ನಡ ಸಾಹಿತ್ಯದ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು. ಕನ್ನಡ ಭಾಷೆ ಸಾಹಿತ್ಯಗಳ ಕುರಿತ ಚಿಂತನೆ, ನಿಷ್ಠೆ, ಪ್ರಗತಿಯ ಮುನ್ನೋಟವನ್ನು ಇದು ಒಳಗೊಂಡಿತ್ತು.

ಶ್ರೀಯವರು ಬರೆದಿರುವ ಕೃತಿಗಳ ಸಂಖ್ಯೆ ಕಡಿಮೆಯಾದರೂ ತೂಕದಲ್ಲಿ ತುಂಬ ಮೌಲಿಕವಾದವು. 1915 ರಿಂದಲೂ ಬಿಡಿಬಿಡಿಯಾಗಿ ಬರೆದುಕೊಂಡು ಬಂದಿದ್ದ ಅನುವಾದಿತ ಮತ್ತು ಸ್ವತಂತ್ರ ಕವನಗಳನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘವು ಮೊತ್ತಮೊದಲು 'ಶ್ರೀ' ಎಂಬ ಕಾವ್ಯನಾಮವನ್ನು ಧರಿಸಿದ 'ಇಂಗ್ಲಿಷ್ ಗೀತಗಳು'

ಸಂಕಲನವನ್ನು 1926ರಲ್ಲಿ ಪ್ರಕಟಿಸಿತು. ಇದರಿಂದ ಕನ್ನಡ ಕಾವ್ಯ ಪ್ರಪಂಚದಲ್ಲಿ ಹೊಸ ಯುಗವೊಂದು ಆವಿರ್ಭವಿಸಲು ಮುನ್ಸೂಚನೆ ನೀಡಿತು. ಇದರೊಂದಿಗೆ ಕನ್ನಡ ನಾಟಕ ಸಾಹಿತ್ಯದಲ್ಲಿಯೂ ಪೌರಾಣಿಕ ಮತ್ತು ಅನುವಾದಿತ ರುದ್ರನಾಟಕಗಳ ರಚನೆಗೆ ಹೆದ್ದಾರಿಯನ್ನು ತೆರೆದರು. ಅಂತೆಯೇ ಕನ್ನಡ ಸಾಹಿತ್ಯ ಚರಿತ್ರೆಯ ವಿಭಾಗ ಕ್ರಮಗಳಲ್ಲಿಯೂ ಹೊಸ ಮಾರ್ಗವನ್ನು ತೋರಿಸಿದರು.

ಶ್ರೀಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಧ್ಯಾಕ್ಷರಾಗಿ ಉಪನ್ಯಾಸಗಳು, ಗ್ರಂಥ ಪ್ರಕಟಣೆ, ಸಾಹಿತ್ಯ ಪರೀಕ್ಷೆಗಳ ಪ್ರಾರಂಭ, ಅಚ್ಚುಕೂಟ ಸ್ಥಾಪನೆ, ದತ್ತಿಗಳ ಏರ್ಪಾಟು ಹೀಗ ಹತ್ತು ಹಲವು ಚಟುವಟಿಕೆಗಳ ಆಧ್ವೈರ್ಯುವಾದರು. 'ಇಂಗ್ಲಿಷ್ ಗೀತಗಳು'(1921), 'ಹೊಂಗನಸುಗಳು' (1943), 'ಕನ್ನಡ ಬಾವುಟ'(1938), 'ಗದಾಯುದ್ಧ ನಾಟಕಂ'(1926), 'ಅಶ್ವತ್ಥಾಮನ್'(1929), 'ಪಾರಸಿಕರು'(1935), 'ಕನ್ನಡ ಛಂದಸ್ಸಿನ ಚರಿತ್ರೆ'(1936), 'ಕನ್ನಡ ಕೈಪಿಡಿ ಭಾಗ –1', 'ಕನ್ನಡ ಸಾಹಿತ್ಯ ಚರಿತ್ರೆ'(1947), 'ಕನ್ನಡ ಕೈಪಿಡಿ ಭಾಗ 2', 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ'(1948), 'ಇಸ್ಲಾಂ ಸಂಸ್ಕೃತಿ'(1948), 'ಶ್ರೀ ಸಾಹಿತ್ಯ'(1983), 'A Hand book of Rhatoric' (1919) ಹೀಗೆ ಹಲವು ಮಹತ್ತ್ವದ ಕೃತಿಗಳನ್ನು ರಚಿಸಿದರು. 1928 ರಲ್ಲಿ ಗುಲ್ಬರ್ಗಾದಲ್ಲಿ ನಡೆದ 14ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆಗಿನ ಮೈಸೂರು ಸಂಸ್ಥಾನ 1938 ರಲ್ಲಿ ಅವರಿಗೆ 'ರಾಜಸೇವಾಸಕ್ತ' ಬಿರುದನ್ನು ನೀಡಿತು. 1941 ರಲ್ಲಿ ಅವರಿಗೆ ಶಿಷ್ಯ ಮಿತ್ರರು ಸೇರಿ 'ಸಂಭಾವನೆ' ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸಿದರು.

ಇಂಗ್ಲಿಷ್ ಗೀತಗಳು ಕೃತಿಯಲ್ಲಿನ ಮೂಲ ಆಂಗ್ಲಕವನಗಳನ್ನು ರಚಿಸಿದ ಕವಿಗಳ ಕಿರು ಪರಿಚಯ ಇಲ್ಲಿ ಮಾಡಿಕೊಡಲಾಗಿದೆ.[6]

**ಎಸ್.ಟಿ ಕೋಲ್ರಿಜ್**




ಸ್ಯಾಮ್ಯುಯಲ್ ಟೇಲರ್ ಕೋಲ್ರಿಜ್ ಪ್ರಸಿದ್ಧನಾದ ಆಂಗ್ಲಕವಿ. ಈತ ರೊಮ್ಯಾಂಟಿಕ್ ಪಂಥದ ಪ್ರಮುಖ ಕವಿಗಳಲ್ಲಿ ಒಬ್ಬ. ಡೆವೆನ್ ಶೈಲ್ ಜಿಲ್ಲೆಯಲ್ಲಿದ್ದ ಪಾದ್ರಿಯೊಬ್ಬನ 14 ಮಕ್ಕಳಲ್ಲಿ ಈತ ಕೊನೆಯವನು. ಹುಟ್ಟಿದು 1772 ಅಕ್ಟೋಬರ್ 21ರಂದು ಚಿಕ್ಕವಯಸ್ಸಿನಲ್ಲಿದ್ದಾಗಲೇ ಅವನಿಗೆ ಪುಸ್ತಕಗಳ ಹುಚ್ಚು. ಮಹಾ ಅಗ್ನಿಸರ್ಪಗಳನ್ನು ನಾಶಗೊಳಿಸುತ್ತಿರುವ ಸಂತ ಜಾರ್ಜ್‌ನೇ ತಾನು ಎಂದು ಕೊಂಡು, ಕತ್ತಿಯಿಂದ ಸಿಕ್ಕಸಿಕ್ಕ ಗಿಡಪೊದೆಗಳನ್ನು ಹೊಡೆದು ಕತ್ತರಿಸುತ್ತಿದ್ದ. ಇಂಗ್ಲೆಂಡಿನ ಪ್ರಸಿದ್ಧ ಶಾಲೆ ಕ್ರೈಸ್ಟ್ ಹಾಸ್ಪಿಟಲ್‌ನಲ್ಲೂ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲೂ ಅವನ ವಿದ್ಯಾಭ್ಯಾಸ ನಡೆಯಿತು. ರಕ್ಷಣಾದಳದಲಿಯೂ ಕೆಲ ಕಾಲ ಕಾರ್ಯನಿರ್ವಹಿಸಿದ ಆತ ಕೆಲಕಾಲ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದ. ರಾಬರ್ಟ್ ಸದೆ, ವರ್ಡ್ಸ್‌ವರ್ತ್ ಇವನ ಪರಮ ಮಿತ್ರರು. 1798ರಲ್ಲಿ ವರ್ಡ್ಸ್‌ವರ್ತ್‌ನೊಡಗೂಡಿ 'The

[6] ಬಿ.ಎಂ.ಶ್ರೀ ಮತ್ತು ಆಂಗ್ಲ ಕವಿಗಳೆಲ್ಲರ ಬಗ್ಗೆ ಮಾಹಿತಿಯನ್ನು Wikipedia ಅಂತರ್ಜಾಲದಿಂದ ಸಂಗ್ರಹಿಸಲಾಗಿದೆ.

Lyrical Ballads' ಎಂಬ ಗೀತಸಂಕಲನವನ್ನು ಪ್ರಕಟಿಸಿದ್ದ. ಇದು ಇಂಗ್ಲಿಷ್ ಕಾವ್ಯದ ಚರಿತ್ರೆಯಲ್ಲಿ ಹೊಸ ಯುಗವನ್ನೇ ಆರಂಭಿಸಿತು. ಅವನು ಕವಿಯೆಂದು ಪ್ರಖ್ಯಾತನಾದರೂ ಹೆಚ್ಚಾಗಿ ಬರೆದದ್ದು ಗದ್ಯವನ್ನೇ. 'ಬಯಾಗ್ರಫಿಯ ಲಿಟಾರೇರಿಯ' ಮತ್ತು ಲೆಕ್ಚರ್ಸ್ ಆನ್ ಷೇಕ್ಸ್‌ಪಿಯರ್' ಇವು ಅವನೊಬ್ಬ ಶ್ರೇಷ್ಠ ವಿಮರ್ಶಕ ಎಂಬುದನ್ನು ತೋರಿಸಿಕೊಟ್ಟವು. ಕಿರಿಯ ವಯಸ್ಸಿನಲ್ಲಿಯೇ ಕಾಡುತ್ತಿದ್ದ ನರಗಳ ವ್ಯಾಧಿಯ ಬಾಧೆಯನ್ನು ತಪ್ಪಿಸಿಕೊಳ್ಳಲು ಅಫೀಮು ಸೇವನೆ ಆರಂಭಿಸಿದ. ಇದರಿಂದ ಹೊರಬರಲಾರದೆ ಕೊನೆಗೆ ಲಂಡನ್ನಿನ ವೈದ್ಯನೊಬ್ಬನ ಆರೈಕೆಯಲ್ಲಿ ಇರಲಾರಂಭಿಸಿದ. 1834 ಜುಲೈ 25 ರಂದು ಕಾಲವಾಗುವ ತನಕವೂ ಆ ವೈದ್ಯನೊಡನೆಯೇ ಇದ್ದ.

**ಟೆನಿಸನ್**

ಆಲ್ಫ್ರೆಡ್ ಟೆನಿಸನ್ ಇಂಗ್ಲೆಂಡಿನ ಆಸ್ಥಾನ ಕವಿಯಾಗಿದ್ದ. 06–08–1809ರಂದು ಹುಟ್ಟಿದ ಈತನ ತಂದೆ ಜಾರ್ಜ್ ಟೆನಿಸನ್. 12 ತುಂಬುವ ಮೊದಲೆ 6000 ಸಾಲುಗಳ ವೀರ ಕವಿತೆ ಬರೆದ. ತನ್ನ 18ನೆಯ ವಯಸ್ಸಿನಲ್ಲಿ ಸಹೋದರ ಚಾರ್ಲ್ಸ್ ಜೊತೆ ಸೇರಿ, 'Poems by two brothers' ಎಂಬ ಕಾವ್ಯ ಸಂಕಲನವನ್ನು ಪ್ರಕಟಿಸಿದ. 'The lady of shallott', 'Ulysses', 'Maud', 'The window', .'The eagle' ಮುಂತಾದವು ಅವನ ಸ್ಥಾನವನ್ನು ಇಂಗ್ಲಿಷ್ ಸಾಹಿತ್ಯ ಚರಿತೆಯಲ್ಲಿ ಭದ್ರಗೊಳಿಸಿದವು. 1833ರಲ್ಲಿ ಇವನ ಆತ್ಮೀಯ ಗೆಳೆಯ ಆರ್ಥರ್ ಹ್ಯಾಲಂ ತೀರಿಕೊಂಡಾಗ ಆ ಆಘಾತದಿಂದ ಹಲವು ವರ್ಷಗಳ ಕಾಲ ಕವನಗಳನ್ನು ಬರೆಯಲಿಲ್ಲ. 1850 ರಲ್ಲಿ ಇವನನ್ನು ಕುರಿತು ಬರೆದ ಶೋಕಗೀತೆ ಸ್ಮರಣೆಯು ಪ್ರಕಟವಾಯಿತು. ಇದು ಇಂಗ್ಲಿಷಿನ ಪ್ರಖ್ಯಾತ ಶೋಕಗೀತೆ. ದೊರೆ ಆರ್ಥರ್ ನ ವೀರತ್ವವನ್ನು ಬಿಂಬಿಸುವ 'Ideas of the King' ಎಂಬ ಕವನ ಸಂಕಲವನವನ್ನು ಪ್ರಕಟಿಸಿದ. The George of the Brigade' ಅವನ ಇನ್ನೊಂದು ಪ್ರಸಿದ್ಧ ಕತೆ. 'Mary Rani', 'Herald' ಇತ್ಯಾದಿ ಚಾರಿತ್ರಿಕ ನಾಟಕಗಳನ್ನು ಬರೆದ. ಅವುಗಳಿಗೆ ಸಾಕಷ್ಟು ಮನ್ನಣೆ ದೊರೆಯಲಿಲ್ಲ. 1880ರಲ್ಲಿ 'Becket' ಎಂಬ ದುರಂತ ನಾಟಕ ರಚಿಸಿದ ಬಳಿಕ ನಾಟಕರಚನೆಯ ಯೋಚನೆಯನ್ನು ಕೈಬಿಟ್ಟ. ಅಪಾರ ಮಾನ್ಯತೆ ಪಡೆದಿದ್ದ ಟೆನಿಸನ್ 1892 ರ ಅಕ್ಟೋಬರ್ 6 ರಂದು ತೀರಿಕೊಂಡ.

**ಬರ್ನ್ಸ್:**

ಬರ್ನ್ಸ್ ಸ್ಕಾಟ್ಲೆಂಡಿನ ರಾಷ್ಟ್ರೀಯ ಕವಿ ಐರ್‌ಶೈರ್ ಪ್ರಾಂತದ ಬಡರೈತನೊಬ್ಬನ ಮಗ ರಾಬರ್ಟ್ ಬರ್ನ್ಸ್. ಹುಟ್ಟಿದ್ದು 25–01–1759 ರಂದು. ಅವನ ಜನ್ಮದಿನದಂದು ಸ್ಕಾಟ್ಲೆಂಡಿನಾದ್ಯಂತ ವಿಶೇಷ ಉತ್ಸವಗಳು ನಡೆಯುತ್ತವೆ. ತಂದೆ ತನ್ನಿಂದ ಸಾಧ್ಯವಾದಷ್ಟು ವಿದ್ಯಾಭ್ಯಾಸ ಕೊಡಿಸಿದ. ಹುಡುಗ ಕೂಡ ಕಷ್ಟಪಟ್ಟು ಇಂಗ್ಲಿಷ್ ವ್ಯಾಕರಣ

ಕಲಿತ; ನೃತ್ಯದ ಪಾಠಗಳನ್ನು ಹೇಳಿಸಿಕೊಂಡ ಭಗ್ನ ಪ್ರೇಮ, ಹಣದ ಅಭಾವಗಳು, ಅನೇಕ ತೊಂದರೆಗಳಿಗೆ ಸಿಲುಕಿದ ಬರ್ನ್ಸ್ ಊರುಬಿಟ್ಟು ಜಮೈಕಾ ದ್ವೀಪಕ್ಕೆ ವಲಸೆ ಹೋಗಲು ನಿರ್ಧರಿಸಿದ. ಈ ದೂರದ ಪಯಣಕ್ಕೆ ಬೇಕಾದ ಹಣಕ್ಕಾಗಿ ತನ್ನ ಹಲವಾರು ಪದ್ಯಗಳಲ್ಲಿ ಕೆಲವನ್ನು ಆರಿಸಿ ಒಂದು ಸಂಕಲನ ಸಿದ್ಧಗೊಳಿಸಿ ಪ್ರಕಟಿಸಿದ. ಅವು ಜನಪ್ರಿಯವಾದವು. ಕ್ರಮೇಣ ಅನೇಕ ಕಷ್ಟ ನಷ್ಟಗಳಿಗೆ ಗುರಿಯಾದ ಆತ 37ನೆಯ ವಯಸ್ಸಿನಲ್ಲಿ 21–07–1796 ರಂದು ಕೊನೆಯುಸಿರೆಳೆದ.

ಬರ್ನ್ಸ್ ನ ಕೊನೆಯ ದಿನಗಳು ಕಷ್ಟದ ದಿನಗಳಾಗಿದ್ದರೂ ಅವನ ಅತ್ಯಂತ ಸುಂದರ ಕವನಗಳ ರಚನೆ ನಡೆದದ್ದು ಆ ಕಾಲದಲ್ಲಿಯೇ. ಪ್ರೇಮಗೀತೆಗಳು, ಪ್ರಕೃತಿಗೀತೆಗಳು, ಬಡವರ ಬಾಳನ್ನು ಚಿತ್ರಿಸುವ ಗೀತೆಗಳಲ್ಲಿ ಅವನನ್ನು ಮೀರಿಸುವವರಿರಲಿಲ್ಲ. ಅವನ ಕವನಗಳು ಹೆಚ್ಚಾಗಿ ಸಂಗೀತಕ್ಕೆ ಅಳವಡುತ್ತವೆ. ತಾನು ದರಿದ್ರನಾಗಿದ್ದರೂ ಸಾಹಿತ್ಯದ ಸಿರಿವಂತಿಕೆಯನ್ನು ಜನತೆಗೆ ಹಂಚಿದ ಮಹಾಕವಿ ಬರ್ನ್ಸ್.

**ಜಾರ್ಜ್ ಗಾರ್ಡನ್ ಬೈರನ್**



ಈತ 22–01–1788 ರಲ್ಲಿ ಜನಿಸಿದ. ಅವನ ತಂದೆ ಜಾನ್ ಬೈರನ್. ತಾಯಿ ಕ್ಯಾಥರಿನ್. ಬೈರನ್ ಗೆ ಹುಟ್ಟಿದಾಗಲೇ ಕಾಲು ಊನ. ಈ ಅಂಗವಿಕಲತೆಯನ್ನು ತಾನು ಮೀರಿದ್ದೇನೆಂಬುದನ್ನು ಪ್ರದರ್ಶಿಸಲು ಶಾಲೆಯಲ್ಲಿ ಅತ್ಯುತ್ತಮ ಈಜುಗಾರನೂ, ಒಳ್ಳೆಯ ಆಟಗಾರನೂ ಆಗಿದ್ದ. 'ಡಾನ್ ಯೂಆನ್' , 'ಲಾರಾ', 'ಬ್ರೈಡ್ ಆಫ್ ಆಬಿಡಸ್', 'ಪ್ಯಾರಿಸಿನಿಯ', 'ಬೆಪ್ಪೋ', 'ಕೇನ್' ಮುಂತಾದವು ಅವನ ಮುಖ್ಯ ಕೃತಿಗಳು. ಪತ್ರ ಬರೆಯುವುದರಲ್ಲಿ ಆತ ನಿಸ್ಸೀಮ. ಆವನು ಬರೆದ 2,500 ಪತ್ರಗಳು ದೊರೆತಿವೆಯಂತೆ. 19–04–1824 ರಂದು 'ಮಿಸೊಲೊಂಗಿ' ಎಂಬಲ್ಲಿ ಕಾಲವಾದ.

**ಬ್ರೌನಿಂಗ್:**



ರಾಬರ್ಟ್ ಬ್ರೌನಿಂಗ್ ಹುಟ್ಟಿದ್ದು 07–05–1812ರಂದು. ಕಾವ್ಯ ಮನೋವೃತ್ತಿಗೆ ಪೋಷಕವಾದ ವಾತಾವರಣದಲ್ಲಿ ಬೆಳೆದ ಬ್ರೌನಿಂಗನ ಮೇಲೆ ಬೈರನ್ ಷೆಲ್ಲಿ, ಕೀಟ್ಸ್, ಪ್ರಭಾವವಿತ್ತು. 'Pauline', 'Paracelsus' ಕೃತಿಗಳು ಅವನಿಗೆ ಖ್ಯಾತಿಯನ್ನು ತಂದವು. ಅವನ 'The Ring and the book' ಅವನ ಸಾಧನೆಗಳಲ್ಲಿ ಹಿರಿಯ ಮಟ್ಟದ್ದು. ಅವನ ಹಾಸ್ಯ ಪ್ರಜ್ಞೆ ಕಲಾಮಯ ಅಭಿವ್ಯಕ್ತಿ, ಅಪಾರಜ್ಞಾನ, ಮಾನವ ಜೀವನದ ಬಗೆಗಿನ ಸಹಾನುಭೂತಿ, ತೀಕ್ಷ್ಣ ಒಳನೋಟ, ಉದಾತ್ತ ಆದರ್ಶಗಳು ಅವನನ್ನು ಕವಿಗಳ ಅಗ್ರಪಂಕ್ತಿಯಲ್ಲಿ ನಿಲ್ಲಿಸಿವೆ. ಇಂಗ್ಲೆಂಡಿನಲ್ಲಿದ ತನ್ನ ಬಂಗಲೆಯ (ಅಸೊಲೊ) ಹೆಸರನ್ನು ಉಪಯೋಗಿಸಿಕೊಂಡು 'Asolando' ಎಂಬ ತನ್ನ ಕೊನೆಯ ಸಂಕಲನವನ್ನು ಪ್ರಕಟಿಸಿದ. 12–12–1889ರಂದು ನಿಧನನಾದ. ಈತ ಆಂಗ್ಲ ಸಾಹಿತ್ಯದ ವಿಕ್ಟೋರಿಯನ್ ಯುಗದ ಸ್ವೋಪಜ್ಞ ಕವಿ.

C. ರೊಸೆಟ್ಟಿ:



ಗೇಬ್ರಿಯಲ್ ರೊಸೆಟ್ಟಿಯ ಮಗಳು ಕ್ರಿಶ್ಚಿಯನಾ ರೊಸೆಟ್ಟಿ. 17 ನೆಯ ವಯಸ್ಸಿನಲ್ಲಿಯೇ ಒಂದು ಕವನ ಸಂಕಲನವನ್ನು ಹೊರತಂದ ಪ್ರತಿಭಾನ್ವಿತೆ. ಮಕ್ಕಳಿಗಾಗಿಯೇ 'Sing Song' ಎಂಬ ಕವಿತೆಗಳ ಪುಸ್ತಕವನ್ನು, 'ಸ್ಪೀಕಿಂಗ್ ಲೈಕ್‌ನೆಸಸ್' ಎಂಬ ಸಣ್ಣಕಥೆಗಳ ಸಂಗ್ರಹವನ್ನು ಹೊರತಂದಳು. 'ಗಾಬ್ಲಿನ್ ಮಾರ್ಕೆಟ್', 'ದಿ ಫೇಸ್ ಆಫ್ ದಿ ಡೀಪ್', 'ನ್ಯೂ ಪೊಯೆಮ್ಸ್' ಇವು ಕವನ ಸಂಕಲನಗಳು.

ವಾಲ್ಟರ್ ಸ್ಕಾಟ್:



ಸ್ಕಾಟ್ ಸ್ಕಾಟ್ಲೆಂಡಿನ ಎಡಿನ್‌ಬರೋದಲ್ಲಿ 15-08-1771 ರಂದು ಜನಿಸಿದ ಹುಡುಗನಾಗಿದ್ದಾಗ ಖಾಸಗಿ ಉಪಾಧ್ಯಾಯರಲ್ಲಿ ವಿದ್ಯೆಕಲಿತ ಈತ ಉನ್ನತ ಶಿಕ್ಷಣವನ್ನು ಎಡಿನ್‌ಬರೊ ವಿ.ವಿ.ಯಲ್ಲಿ ಮುಗಿಸಿದ. 'Waverly', 'Guy mannering', 'Rob Roy', 'The abbot'. ಮುಂತಾದ ಕೃತಿಗಳನ್ನು ರಚಿಸಿದ.

"ಧೈರ್ಯವಿಲ್ಲದೆ ಸತ್ಯವಿರಲು ಸಾಧ್ಯವಿಲ್ಲ, ಸತ್ಯವಲ್ಲದೆ ಸದ್ಗುಣ ಸೌಶೀಲ್ಯಗಳಿರಳು ಆಗುವುದಿಲ್ಲ" ಎಂದು ತನ್ನ ಮಕ್ಕಳಿಗೆ ಹೇಳುತ್ತಿದ್ದ ಸ್ಕಾಟ್ ತಾನೂ ಅಕ್ಷರಶಃ ಹಾಗೆಯೇ ನಡೆದುಕೊಂಡ. 1827 ರಲ್ಲಿ ಪ್ರಕಟವಾದ ನೆಪೋಲಿಯನ್ ಬೋನೋಪಾರ್ಟೆಯ ಜೀವನ ಕೃತಿ ಅವನಿಗೆ ಅಪಾರ ಕೀರ್ತಿ ತಂದುಕೊಟ್ಟಿತ್ತು. ಅದೇ ವರ್ಷ ತನ್ನ ಮೊಮ್ಮಗನಿಗಾಗಿ ತಾತನ ಕಥೆಗಳು ಪ್ರಕಟಿಸಿದ. ಕವನ, ನಾಟಕ, ವಿಮರ್ಶೆ, ಸಂಪಾದನಾ ಕಾರ್ಯ ಕೈಗೊಂಡ ಅವನ ಪ್ರತಿಭೆ ಬಹುಮುಖವಾದದ್ದು. ಪಾರ್ಶ್ವವಾಯು, ಸಂಧಿವಾತ ವ್ಯಾಧಿಗಳಿಂದ ಪೀಡಿತನಾಗಿ 21-09-1832 ರಂದು ನಿಧನನಾದ,

ನಾರ್ಟನ್

ಇವಳ ಪೂರ್ಣ ಹೆಸರು 'ಕ್ಯಾರೊಲಿನ ಎಲಿಜಬೆತ್ ಸಾರಾ ನಾರ್ಟನ್'. ಈಕೆಯ ಕಾಲ 1808-1877 ವಿಖ್ಯಾತ ಇಂಗ್ಲಿಷ್ ನಾಟಕಕಾರ ಶೆಂಡನನ್ನ ಮೊಮ್ಮಗಳು. ತಂದೆ ಥಾಂಸನ್. ಈಕೆ ಹುಟ್ಟಿದ್ದು ಲಂಡನಿನ್ನಲ್ಲಿ. ಕಿರಿಯ ವಯಸ್ಸಿನಲ್ಲಿಯೇ ಬರವಣಿಗೆ ರೂಢಿಸಿಕೊಂಡ ಈಕೆ 17ನೆಯ ವರ್ಷಕ್ಕೆ 'ದಿ ಡ್ಯಾಂಡೀಸ್ ರೂಟ್' ಎಂಬ ವಿಡಂಬನ ಕಾವ್ಯವನ್ನು ರಚಿಸಿದಳು. 'ದಿ ಸಾರೋಸ್ ಆಫ್ ರೋಸಲೀ' (1828), 'ದಿಅನ್ ಡೈಯಿಂಗ್ ಒನ್' (1830), 'ವಾಯ್ಸ್ ಫ್ರಂ ದಿ ಫ್ಯಾಕ್ಟರಿಸ್'(1836), 'ಆ್ಯಂಟ್ ಕ್ಯಾರಿಸ್ ಬ್ಯಾಲಡ್ಸ್'(1847), 'ಸ್ಟೂ ಆರ್ಟ್ ಆಫ್ ಡನ್‌ಲೀತ್'(1851), 'ಲಾಸ್ಟ್ ಆ್ಯಂಡ್ ಸೇವ್ಡ್'(1863), 'ಓಲ್ಡ್ ಪರ್ ಡಗ್ಲಾಸ್'(1867) ಕೃತಿಗಳು ಹೊರಬಂದವು ಜಾರ್ಜ್ ಮೆಂಡಸ್ ಎಂಬಾತನ 'ಡಯಾನ ಅಫ್ ಥೆ ಕ್ರಾಸ್ ವೇಸ್' ಎಂಬ ಕಾದಂಬರಿಯಲ್ಲಿನ ಡಯಾನಳ ಪಾತ್ರ ಈಕೆಯನ್ನು ಹೋಲುತ್ತದೆ ಎಂಬುದು ಕೆಲವು ವಿದ್ವಾಂಸರ ಅಭಿಮತ.

**ನ್ಯಾಷ್:**

ಈತನ ಕಾಲ 1567–1601 ಇಂಗ್ಲಿಷ್ ವಿಡಂಬನಕಾರ, ಸಾಹಸಿ, ಸುಸಂಸ್ಕೃತನಾದ ಈತನನ್ನು ರಾಬರ್ಟ್ ಗ್ರೀನನ ಉತ್ತರಾಧಿಕಾರಿ ಎಂದು ಕರೆಯುತ್ತಾರೆ. ಆಧುನಿಕ ಇಂಗ್ಲಿಷ್ ಗದ್ಯದ ಪ್ರವರ್ತಕ. ಫ್ರೆಂಚ್ ವೈದ್ಯನೂ ವಿಡಂಬಕಾರನೂ ಆದ ರ್‍ಯಾಬಲೆಯ ಪ್ರಭಾವ ಇವನ ಶೈಲಿಯಲ್ಲಿ ಕಂಡುಬರುತ್ತದೆ. 'Anatomy of abser dity', Pears feniles', 'His saplication to the devil', 'The unfortunate travalor', 'Or the life back Miltan' ಎಂಬವು ಅವನ ಮುಖ್ಯ ಕೃತಿಗಳು

**ಜಾನ್ ಹೆನ್ರಿ ನ್ಯೂಮನ್**

ಇಂಗ್ಲೆಂಡಿನ ಧರ್ಮೋಪದೇಶಕ ಹಾಗೂ ಚರ್ಚಿನ ಕಾರ್ಡಿನಲ್. ಈತ ಹುಟ್ಟಿದ್ದು 21–02–1801ರಂದು ಲಂಡನ್ನಿನಲ್ಲಿ ತಂದೆ ಜಾನ್ ನ್ಯೂಮನ್ ತಾಯಿ ಜೆಮೀಮಾ. ವೇದಾಂತಿ ವಿಲಿಯಂ ಫ್ರಾನ್ಸಿಸ್ ನ್ಯೂಮನ್ ಈತನ ಸಹೋದರ. ಈತನ ಪ್ರಾಂಭದ ಶಿಕ್ಷಣ ಈಲಿಂಗ್ ಶಾಲೆಯಲ್ಲಿ ನಡೆಯಿತು. ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಕವಿತೆ ನಾಟಕ ರಚನೆಗೆ ತೊಡಗಿದ್ದ. ಟ್ರಿನಿಟಿ ಕಾಲೇಜು, ಒರಿಯಲ್ ಕಾಲೇಜುಗಳ ವಿದ್ಯಾರ್ಥಿಯಾಗಿದ್ದ. ಈತ 1808ರಲ್ಲಿ ಸೆಂಟ್ ಮೇರಿ ವಿ.ವಿ. ಯ ಚರ್ಚಿನ ವಿಕರ್ (ಕ್ರೈಸ್ತ ಪುರೋಹಿತ) ಆಗಿ ನೇಮಕವಾದ. ಇದೇ ಸಮಯದಲ್ಲಿ ಆ್ಯಂಗ್ಲಿಕನ್ ಪಂಥದಲ್ಲಿನ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸಬೇಕೆಂದು ತೀರ್ಮಾನಿಸಿದ ಈ ಹೊಸ ಸಂಕಲ್ಪದ ಕುರುಹಾಗಿ ಸ್ವದೇಶಕ್ಕೆ ಮರಳಿ 'Lead kindly light' ಎಂಬ ಗೀತೆ ರಚಿಸಿದ. ನ್ಯೂಮನ್ ಕ್ಯಾಥೋಲಿಕ್ ಪಂಥದ ಪುನರುದ್ಧಾರಕ್ಕಾಗಿ ಸಂಗಡಿಗರೊಡಗೂಡಿ 'Tracts for the times'. ಪ್ರಕಟಿಸಿದ. 'Arians of the fourth century', 'British Critics', 'Lectures on justification'ಮುಂತಾದ ಮಹತ್ವದ ಕೃತಿಗಳನ್ನು ವಿರಚಿಸಿದ. ಈತನ ಗದ್ಯಶೈಲಿ ಅನುಕರಣೀಯವಾದುದು. ಈತ ತನ್ನ ಅಮೋಘ ಧರ್ಮ ಪ್ರವಚನಗಳಿಂದಾಗಿ ಕ್ರೈಸ್ತ ಪ್ರಚಾರಕರಲ್ಲಿ ಅಗ್ರಸ್ಥಾನ ಪಡೆದಿದ್ದಾನೆ. 11–08–1890 ರಲ್ಲಿ ಈತ ಸಾವನಪ್ಪಿದ.

**ಹಾರ್ಟ್ಲಿ ಕೋಲ್ರಿಜ್**

ಈತನ ಕಾಲ 19–09–1796 ರಿಂದ 06–01–1849. ಇವನು ಇಂಗ್ಲಿಷ್ ಲೇಖಕ. ಸ್ಯಾಮ್ಯುಯಲ್ ಟೇಲರ್ ಕೋಲ್ರಿಜ್‌ನ ಹಿರಿಯ ಮಗ ಹುಟ್ಟಿದ್ದು ಕ್ಲೀವ್‌ಡನ್‌ನಲ್ಲಿ ವಿದ್ಯಾಭ್ಯಾಸ ಆಕ್ಸ್‌ಫರ್ಡಿನಲ್ಲಿ ನಡೆಯಿತು. ಒರಿಯಲ್ ಫೆಲೋ ಆಗಿದ್ದ ಈತ ತನ್ನ ದುಡುಕಿನಿಂದಾಗಿ ಅದನ್ನು (1820) ಕಳೆದುಕೊಂಡ. ಇದರಿಂದ ನೊಂದು ಲಂಡನ್ನಿಗೆ ತೆರಳಿ ಅಲ್ಲಿ ಪತ್ರಿಕೆಗಲಿಗೆ ಲೇಖನಗಳನ್ನು ಬರೆಯತೊಡಗಿದ. 'Yorksh iree and lancashire', 'Life of Massinger' ಎಂಬ

ಕೃತಿಗಳನ್ನು ರಚಿಸಿದ. ಈತ ಆಂಗ್ಲ ಸಾಹಿತ್ಯದಲ್ಲಿ ತನ್ನ ಕೆಲವು ಸುನೀತಗಳಿಗಾಗಿ ಪ್ರಖ್ಯಾತನಾಗಿದ್ದಾನೆ. ಈತನ ಕೃತಿಗಳಲ್ಲಿ ಒಂದು ಬಗೆಯ ಖೇದ, ಮಾಧುರ್ಯಗಳಿವೆ. ಈತನ ಮರಣಾನಂತರ ಈತನ ಕೆಲವು ಪದ್ಯಗಳನ್ನು ಅಪೂರ್ಣಗೊಂಡ 'Prometheus' ಎಂಬ ನಾಟಕವನ್ನು ಈತನ ಸಹೋದರ 1851 ರಲ್ಲಿ ಪ್ರಕಟಿಸಿದ.

**ಆರ್ಥರ್ ಹ್ಯೂ ಕ್ಲಫ್**

ಈತನ ಕಾಲ 01–01–1819 ರಿಂದ 13–11–1861. ಈತ ಒಬ್ಬ ಇಂಗ್ಲಿಷ್ ಕವಿ. ಈತ ಹತ್ತಿ ವ್ಯಾಪಾರ ಮಾಡುತ್ತಿದ್ದ, 'ಜೇಮ್ಸ್ ಬಟ್ಲರ್ ಕ್ಲಫ್' ಎಂಬುವವನಿಗೆ ಮಗನಾಗಿ 'ಲಿವರ್‌ಪೂಲ್' ಎಂಬಲ್ಲಿ ಜನಿಸಿದ. ಈತನ ಸೋದರ ಜೆಮೀಮ ಕ್ಲಫ್. 1822 ರಲ್ಲಿ ಈತನಕುಟುಂಬ ಅಮೇಕಾಕ್ಕೆ ವಲಸೆ ಹೋದುದರಿಂದ ಅಲ್ಲಿನ ಇವನ ಬಾಲ್ಯದ ವಿದ್ಯಾಭ್ಯಾಸ ನಡೆಯಿತು. ನಂತರ ಇವನು 'Rugby scholl', 'Thomas Arnold' ಸಂಸ್ಥೆಗಳಲ್ಲಿ ವ್ಯಾಸಂಗ ಮುಂದುವರಿಸಿದ, ಜಾನ್ ಹೆನ್ರಿ ನ್ಯೂಮನ್ ಆರಂಭಿಸಿದ 'High church Movement' ನಿಂದ ಈತ ಪ್ರಭಾವಿತನಾಗಿದ್ದ. 'The bothie of tober- na-vuolach', 'Easter day' ಮುಂತಾದ ಕೃತಿಗಳನ್ನು ರಚಿಸಿದ್ದಾನೆ. ಈತನ ಕೆಲವು ಭಾವಗೀತೆಗಳನ್ನು ಹೊರತುಪಡಿಸಿದರೆ ಉಳಿದವುಗಳಲ್ಲಿ ಅಷ್ಟೇನೂ ಉತ್ತಮ ರಚನೆಯಲ್ಲ ಎಂಬ ಮಾತಿದೆ. ಈತ ಮ್ಯಾಥ್ಯೂ ಅರ್ನಾಲ್ಡ್‌ನ ಆಪ್ತಸ್ನೇಹಿತ. ಅರ್ನಾಲ್ಡ್ ಈತನನ್ನು ಕುರಿತು 'Thyrsis' ಎಂಬ ಶೋಕಗೀತೆಯನ್ನು ರಚಿಸಿದ್ದಾನೆ. ಆಕಾಲದ ಇಂಗ್ಲಿಷ್ ಕವಿಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾನೆ.

**ಜೇಮ್ಸ್ ಥಾಮಸನ್**



ಈತ ಸ್ಕಾಟ್ಲೆಂಡಿನ ಕವಿ. ಈತ ಸ್ಕಾಟ್ಲೆಂಡಿನ ಈಡ್ನಂ ಎಂಬಲ್ಲಿ 11–09–1700 ರಲ್ಲಿ ಜನಿಸಿದ. 'Thomas Thomson ಮತ್ತು Beatrix Thomson ದಂಪತಿಗಳ 9 ಮಕ್ಕಳಲ್ಲಿ ಈತ ನಾಲ್ಕನೆಯವ. Jedburgh, Edinburgh ಗಳಲ್ಲಿ ಈತನ ವಿದ್ಯಾಭ್ಯಾಸ ನಡೆಯಿತು. ಆಧ್ಯಾತ್ಮ, ತರ್ಕ, ನೀತಿಗಳಲ್ಲಿ ಅಪಾರ ಆಸಕ್ತಿ ಹೊಂದಿದ್ದ. ಗ್ರೀಕ್, ಲ್ಯಾಟಿನ್‌ಗಳನ್ನು ಕಲಿತಿದ್ದ. ತಂದೆಯ ಮರಣದಿಂದ ತೆರವಾದ 'Grotesque club' ನ ಸದಸ್ಯನಾಗಿ ಸೇರಿದ ಈತನಿಗೆ 'Davil mallet' ಎಂಬಾತನ ಗೆಳೆತನ ದೊರೆಯಿತು. ಇದು ಅವನ ಕೃತಿ ರಚನೆಯ ಮೇಲೆ ಪ್ರಭಾವ ಬೀರಿತು. 'The Seasons', 'Summer', 'Liberty', ಮುಂತಾದ ಅಮೂಲ್ಯ ಕೃತಿಗಳನ್ನು ರಚಿಸಿದ. ಇವನ 'The Seasons' ಕೃತಿ ಬಹಳ ಪ್ರಖ್ಯಾತವಾಗಿದ್ದು ಇದು ಜರ್ಮನ್ ಭಾಷೆಗೆ ಭಾಷಾಂತರಗೊಂಡಿದೆ. ತುಂಬು ಬಾಳನ್ನು ಬಾಳಿದ ಈತ ಲಂಡನ್ನಿನಲ್ಲಿ 27–08–1748ರಲ್ಲಿ ತನ್ನ 47 ನೆಯ ವಯಸ್ಸಿನಲ್ಲಿ ಅಸುನೀಗಿದ.

**ಲೇಡಿ ಆ್ಯನಿ ಲಿಂಡ್ಸೆ**

ಈಕೆ ಜೇಮ್ಸ್ ಲಿಂಡ್ಸೆಯ ಹಿರಿಯ ಮಗಳು. 12-12-1750 ರಲ್ಲಿ ಸ್ಕಾಟ್ಲೆಂಡಿನಲ್ಲಿ ಜನಿಸಿದಳು. ಇವಳೊಬ್ಬಳು ಕಲಾವಿದೆ, ಕಥೆಗಾರ್ತಿ, ಸಮಾಜವಾದಿ ಲೇಖಕಿಯಾಗಿದ್ದಳು. 'Andrew barnard' ಎಂಬಾತನನ್ನು 1793 ರಲ್ಲಿ ವರಿಸಿದಳು. ಚಿಕ್ಕಂದಿನಿಂದಲೂ ಕವಿ ಹೃದಯವುಳ್ಳ ಈಕೆ 'South Africa a century ago', 'Auld robin gray' ಮುಂತಾದ ಕೃತಿಗಳನ್ನು ರಚಿಸಿದ್ದಾಳೆ. ತನ್ನ ಜೀವಿತದ ಬಹುಕಾಲವನ್ನು ಲಂಡನ್‌ನಲ್ಲಿ ಕಳೆದ ಈಕೆ ಕ್ರಿ.ಶ. 1825 ರಲ್ಲಿ ಅಲ್ಲಿಯೇ ತೀರಿಕೊಂಡಳು.

**ವಿಲಿಯಂ ಷೇಕ್ಸ್‌ಪಿಯರ್**



ಷೇಕ್ಸ್‌ಪಿಯರ್ ಜಗತ್ತು ಕಂಡ ಮಹಾನ್ ನಾಟಕಕಾರ. ಮನುಷ್ಯನ ವಿಚಿತ್ರ ವಿಶಿಷ್ಟ ಭಾವಾವೇಶಗಳನ್ನು ತನ್ನ ಕೃತಿಗಳಲ್ಲಿ ಮನೋಜ್ಞನವಾಗಿ ಬಿಂಬಿಸಿದ ಪ್ರತಿಭಾವಂತ ಇಂಗ್ಲೆಂಡಿನ 'ವಾರ್ ವಿಕ್‌ಷಯರ್' ಪ್ರಾಂತದ 'ಸ್ಟ್ರಾಟ್ ಫರ್ಡ್ ಆನ್ ಏವನ್' ಎಂಬಲ್ಲಿ 1564 ರಲ್ಲಿ ಜನಿಸಿದ. ತಂದೆ ರಿಚರ್ಡ್ ಷೇಕ್ಸ್‌ಪಿಯರ್, ತಾಯಿ ಮೇರಿ. ವಿದ್ಯಾರ್ಥಿ ದೆಸೆಯಲ್ಲಿಯೇ ವರ್ಜಿಲ್, ಹೊರೆಸ್ ಮೊದಲಾದ ಕವಿಗಳ ಸಾಹಿತ್ಯವನ್ನು ಅಭ್ಯಾಸ ಮಾಡುತ್ತಿದ್ದ. ವೈವಾಹಿಕ ಜೀವನಕ್ಕೂ ಪಾದಾರ್ಪಣೆ ಮಾಡಿದ. ಆ್ಯನಹಾತವೇ ಎಂಬಾಕೆ ಈತನ ಹೆಂಡತಿ. ಯಾವುದೋ ಕಾರಣದಿಂದ ಊರು ಬಿಟ್ಟು ಲಂಡನ್ ಸೇರಿ, ಅಲ್ಲಿ ನಾಟಕ ಶಾಲೆಯಲ್ಲಿ ಕೆಲಸಗಾರನಾಗಿ, ನಟನಾಗಿ, ನಾಟಕಶಾಲೆಯ ವ್ಯವಸ್ಥಾಪಕನಾಗಿ, ಬರಹಗಾರನಾಗಿ ಬೆಳೆದ ಈತ 37 ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾನೆ. ರೋಮಿಯೋ ಜೂಲಿಯಟ್, ಮಿಡ್ ಸಮ್ಮರ್ಸ್ ನೈಟ್ ಡ್ರೀಮ್, ಮ್ಯಾಕ್‌ಬೆತ್, ಒಥೆಲೋ, ಕಿಂಗ್‌ಲಿಯರ್ , ಹ್ಯಾಮ್ಲೆಟ್, ಜೂಲಿಯಸ್ ಸೀಸರ್ ಇತ್ಯಾದಿ ಅವನ ಕೆಲವು ಮುಖ್ಯ ನಾಟಕಗಳು. 154 ಸಾನೆಟ್‌ಗಳನ್ನು ರಚಿಸಿದ್ದಾನೆ. 'ವೀನಸ್ ಆಂಡ್ ಎಡೋನೀಸೇ', 'ರೇಪ್ ಆಫ್ ಲುಕ್ರೀಸ್' ಎಂಬಿವು ಅವನು ವಿರಚಿಸಿದ 2 ಖಂಡಕಾವ್ಯಗಳು. ಕ್ರಿ.ಶ. 1616 ರಲ್ಲಿ ನಿಧನನಾದ ಈತ ಇಂಗ್ಲಿಷ್ ಸಾಹಿತ್ಯ ಲೋಕಕ್ಕೆ ಮಾತ್ರವಲ್ಲ ವಿಶ್ವ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ್ದಾನೆ.

**ಪರ್ಸಿ ಬಿಷೆ ಷೆಲ್ಲಿ:**



ಷೆಲ್ಲಿ 1792ರಲ್ಲಿ ಇಂಗ್ಲೆಂಡಿನ ವಾರ್ನ್ ಹ್ಯಾಂ ಎಂಬಲ್ಲಿ ಜನಿಸಿದ. ಟಿಮೋಥಿ ಷೆಲ್ಲಿ ಮತ್ತು ಎಲಿಜಬೆತ್ ದಂಪತಿಗಳ ಜೇಷ್ಠ ಪುತ್ರನಿವನು. ಸಿಯಾನ್ ಹೌಸ್ ಎಂಬಲ್ಲಿ ಮತ್ತು ಆಕ್ಸ್‌ಫರ್ಡ್ ವಿ.ವಿ. ಗಳಲ್ಲಿ ಈತನ ವಿದ್ಯಾಭ್ಯಾಸ ನಡೆಯಿತು. ಹಾಡ್ವಿನ್, ವಿಲಿಯಂ ಗಾಡ್ವಿನ್, ಲೀಹಂಟ್ ಇವರ ಪ್ರಭಾವದಿಂದ ಅನೇಕ ಕೃತಿಗಳನ್ನು ರಚಿಸಿದ

ಹ್ಯಾರಿಯಟ್ ಗ್ರೋ ಮತ್ತು ಮೇರಿ ಎಂಬಿಬ್ಬರನ್ನು ಇವನು ವಿವಾಹವಾಗಿದ್ದ. ರೆನಾಲ್ಡ್ಸ್ ಕೀಟ್ಸ್, ಷೆಲ್ಲಿ ಪರಮಾಪ್ತ ಗೆಳೆಯರಾಗಿದ್ದರು. 'Zastrozzi', 'Montblanc', 'The Revolt of Islam', 'The Cenci', 'Ode to the west wind', 'To a Skylark', 'A Defecne of poetry' ಮುಂತಾದ ಕೃತಿಗಳನ್ನು ರಚಿಸಿ ಇಂಗ್ಲಿಷ್ ಸಾಹಿತ್ಯ ಭಂಡಾರವನ್ನು ತುಂಬಿದ್ದಾನೆ 08-07-1822 ರಲ್ಲಿ ಸಮುದ್ರದಲ್ಲಿ ಪ್ರಯಾಣಿಸುತ್ತಿದ್ದಾಗ ಹಠಾತ್ತನೆ ದೋಣಿ ಮುಳುಗಿ ಷೆಲ್ಲಿ ಅಸುನೀಗಿದ.

**ವಿಲಿಯಂ ವರ್ಡ್ಸ್‌ವರ್ತ್**



ಇಂಗ್ಲಿಷಿನ ರೋಮ್ಯಾಂಟಿಕ್ ಪಂಥದ ಖ್ಯಾತ ಕವಿ. 07-04-177 ರಂದು ಇಂಗ್ಲೆಂಡಿನ ಕಾರಕ್ ಮಾತ್ ಎಂಬಲ್ಲಿ ಜನಿಸಿದ. ಜಾನ್ ವರ್ಡ್ಸ್‌ವರ್ತ್ ಮತ್ತು ಆ್ಯನ್ ಕೂಕ್ಸನ್ ದಂಪತಿಗಳ ಐವರು ಮಕ್ಕಳಲ್ಲಿ ಈತ ಎರಡನೆಯವ. ತನ್ನ ವಿದ್ಯಾಭ್ಯಾಸಕ್ಕಾಗಿ 'Hawks head Grammer School' ನಲ್ಲಿ ಪ್ರವೇಶ ಪಡೆದ ಈತ 'Yorkshire' ನಲ್ಲಿ ಉಳಿಯಬೇಕಾಯಿತು. ನಂತರ ಇವನ ವಿದ್ಯಾಭ್ಯಾಸ St.John's College, Trinity College, ಗಳಲ್ಲಿ ನಡೆಯಿತು. 'Annette vallon' ಎಂಬಾಕೆಯನ್ನು 1791 ರಲ್ಲಿ ಪ್ರೇಮ ವಿವಾಹವಾಗಿದ್ದ. ಫ್ರಾನ್ಸಿನ ಮಹಾಕ್ರಾಂತಿಯ ತತ್ವಗಳಿಂದ ಈತ ಆಕರ್ಷಿತನಾದರೂ ಕ್ರಾಂತಿಯಿಂದ ಮೂಡಿನಿಂದ ಕ್ರೌರ್ಯ ರಕ್ತಪಾತಗಳಿಂದ ರೋಸಿದ ಇವನ ಕಾವ್ಯ ಜೀವನದ ಮೇಲೆ ಗಾಢ ಪ್ರಭಾವ ಬೀರಿದವರು ಇಬ್ಬರು. ತಂಗಿ ಡರಥಿ ಮತ್ತು ವಿಮರ್ಶಕ ಶ್ರೇಷ್ಠ ಕವಿ ಸ್ಯಾಮ್ಯೂಯಲ್ ಟೇಲರ್ ಕೋಲ್ರಿಜ್. 1798 ರಲ್ಲಿ ಕೋಲ್ರಿಜ್ ಮತ್ತು ವರ್ಡ್ಸ್‌ವರ್ತ್ ಇಬ್ಬರು ಸೇರಿ 'The Lyricall Ballads' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ಇದು ರೊಮ್ಯಾಂಟಿಕ್ ಕಾವ್ಯದ ಉದಯವನ್ನು ಸ್ಪಷ್ಟವಾಗಿ ಸಾರಿತು. 1800 ರಲ್ಲಿ ಈ ಕೃತಿಯ 2 ನೆಯ ಆವೃತ್ತಿಗೆ ಬರೆದ 'Preface' ನಲ್ಲಿ ಕಾವ್ಯ, ಕಾವ್ಯ ಭಾಷೆಯನ್ನು ಕುರಿತು ತನ್ನ ಚಿಂತನೆಗಳನ್ನು ವಿವರಿಸಿದ. 'The Daffodils, Nutting', 'We are seven' ಮುಂತಾದ ಕವನಗಳು ಈ ಸಂಕಲನದಲ್ಲಿವೆ. 'The Prelude', 'Resolution and Indipendence' ಮುಂತಾದವು ಇವನ ಇತರ ರಚನೆಗಳಾಗಿವೆ. ನ್ಯೂಮೋನಿಯಾದಿಂದ ಬಳಲಿದ ವರ್ಡ್ಸ್‌ವರ್ತ್ 23-04-1850 ರಲ್ಲಿ ತೀರಿಕೊಂಡ.

**ರಾಬರ್ಟ್ ಸದೆ:**



ಕವಿ, ಚಿಂತಕ, ಪ್ರಬಂಧಕಾರ, ಇತಿಹಾಸಕಾರನಾಗಿದ್ದ. ಈತ ರೋಮ್ಯಾಂಟಿಕ್ ಪಂಥಕ್ಕೆ ಸೇರಿದವನು. 12-08-1774ರಲ್ಲಿ ಇಂಗ್ಲೆಂಡಿನ ಬ್ರಿಸ್ಟಲ್ ಎಂಬಲ್ಲಿ ಜನಿಸಿದ. 'Thomus Southey' ಮತ್ತು 'Margaret hill' ದಂಪತಿಗಳ ಮಗ ಲಂಡನ್ನಿನ 'West minister school', 'Oxford college' ಗಳಲ್ಲಿ ಅವನ ವಿದ್ಯಾಭಾಸ ನಡೆಯಿತು.


ವಿಲಿಯಂ ವರ್ಡ್ಸ್‌ವರ್ತ್ ಮತ್ತು ಎಸ್.ಟಿ.ಕೋಲ್ರಿಜ್ ಇವನ ಪರಮಾಪ್ತ ಸ್ನೇಹಿತರಾಗಿದ್ದರು. 14–11–1795 ರಲ್ಲಿ ಎಂಬಾಕೆಯನ್ನು ವರಿಸಿದ ನ ಪ್ರಭಾವವು ಇವನ ಕೃತಿ ರಚನೆಯ ಮೇಲೆ ಪ್ರಭಾವ ಬೀರಿದೆ. 'Letters from spain, Madoc', 'The Cid', 'After Blenhim' ಇವೇ ಮೊದಲಾದ ಕೃತಿಗಳನ್ನು ರಚಿಸಿದ್ದಾನೆ. 21–03–1843ರಲ್ಲಿ ಈತ ಅಸುನೀಗಿದ.

**ಥಾಮಸ್ ಕ್ಯಾಂಬೆಲ್**



ಈತ ಸ್ಕಾಟ್ಲೆಂಡಿನ ಕವಿ. ಮಾನವ ಸಂಬಂಧಗಳ ಕುರಿತು ಅತ್ಯಂತ ಭಾವುಕವಾಗಿ ಕವನಗಳನ್ನು ಬರೆದ ಕವಿ ಈತ. 27–07–1777 ರಲ್ಲಿ Glasgow ಎಂಬಲ್ಲಿ 'Archibald Campbell, Argyll' ದಂಪತಿಗಳ ನಾಲ್ವರು ಮಕ್ಕಳಲ್ಲಿ ಕೊನೆಯವನಾಗಿ ಜನಿಸಿದ. 'Glasgow High School, Univesity of Glasgow' ಎಂಬೆಡೆಗಳಲ್ಲಿ ಅವನ ವಿದ್ಯಾಭ್ಯಾಸ ನಡೆಯಿತು. 'Francis Jeffrey', 'Scott' ಈ ವಿದ್ವಾಂಸರ ಸಾನಿಧ್ಯ ಕ್ಯಾಂಬೆಲೆಗೆ ದೊರೆತಿದುದರಿಂದ ಅವನ ಸಾಹಿತ್ಯ ರಚನೆಯಲ್ಲಿ ಇವರೆಲ್ಲರ ಪ್ರಭಾವವಿದೆ. 1803ರಲ್ಲಿ 'Matilda Sinclair' ಳನ್ನು ವಿವಾಹವಾಗಿ ಲಂಡನ್‌ನಲ್ಲಿ ನೆಲೆಸಿದ. 'Lord Ullin's Daughter', 'Battle of Baltic' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಸ್ಕಾಟಿಷ್ ಸಾಹಿತ್ಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಈ ಕೃತಿಗಳಿಗೆ ಮಹತ್ತ್ವದ ಸ್ಥಾನವಿದೆ.

**ವಾಲ್ಟನ್ ಸವೇಜ್ ಲ್ಯಾಂಡರ್**



ಈತ ಆಂಗ್ಲ ಲೇಖಕ ಮತ್ತು ಕವಿ 30–01–1775ರಲ್ಲಿ ಇಂಗ್ಲೆಂಡಿನ ವರ್ವಿಕ್ ಪ್ರಾಂತ್ಯದಲ್ಲಿ ಜನಿಸಿದ. ಡಾ. ವಾಲ್ಟರ್ ಲ್ಯಾಂಡರ್ ಮತ್ತು ಎಲಿಜಬೆತ್ ದಂಪತಿಗಳ ಹಿರಿಯ ಮಗ. ರಗ್ ಬಿ ಸ್ಕೂಲ್, ಆಕ್ಸ್‌ಫರ್ಡ್, ಟ್ರಿನಿಟಿ ಕಾಲೆಜ್‌ಗಳಲ್ಲಿ ಇವನು ವಿದ್ಯಾಭಾಸ ಮಾಡಿದ. ನ್ಯಾಂಸಿ ಈವನ್ಸ್‌ಳನ್ನು ಪ್ರೇಮಿಸಿ ಅವಳಿಂದ ಈತ ದೂರಾಗಬೇಕಾಯಿತು. ಸಾತ್ ವೇಲ್, ಸ್ಪೇನ್‌ಗಳಲ್ಲಿ ಕೆಲಕಾಲ ನೆಲೆಸಿದ ಈತ ಸ್ಪೇನಿನ ಬ್ಯಾಂಕ್ ಉದ್ಯೋಗಿಯೊಬ್ಬನ ಮಗಳಾದ ಜೂಲಿಯ ಎಂಬಾಕೆಯನ್ನು ವಿವಾಹವಾದ. ಜೀವನದಲ್ಲಿ ಅನೇಕ ಏಳು ಬೀಳುಗಳನ್ನು ಕಂಡಿದ್ದ ಈತನಿಗೆ ಸವೆ ಕವಿಯ ಸ್ನೇಹ ಸಂಜೀವಿನಿಯಾಗಿತ್ತು. 'Gebir', 'The moring post' ಮುಂತಾದ ಕೃತಿಗಳನ್ನು ರಚಿಸಿದ. ಇವನ ಸಾಹಿತ್ಯ ಕೃತಿಗಳಲ್ಲಿ ರಾಜಕೀಯ ಧೋರಣೆ, ಪ್ರಜಾಹಿತಾಸಕ್ತಿ, ಪ್ರಭುತ್ವದ ಬಗೆಗಿನ ರೋಷಾವೇಶಗಳು ಪ್ರಧಾನವಾಗಿದೆ. 17–09–1864ರಲ್ಲಿ ಈತ ತೀರಿಕೊಂಡ.

**ವಿಲಿಯಂ ಕೌಪರ್**

ಪ್ರಖ್ಯಾತ ಆಂಗ್ಲಕವಿಯಾಗಿದ್ದ ಈತ ಹುಟ್ಟಿದ್ದು ಇಂಗ್ಲೆಂಡಿನ 'Berkhamsted' ಎಂಬ ಊರಿನಲ್ಲಿ. ಈತನ ಕಾಲ 26-11-1731 ರಿಂದ 25-04-1800. ಜೂಡಿಯತ್ ಮ್ಯಾಡನ್ ಕವಿಯ ಸೋದರಳಿಯ. ಮೇರಿ ಯುನ್ ವಿನ್ ಎಂಬಾಕೆಯು ಇವನ ಕೃತಿರಚನೆಗೆ ಪ್ರೇರಣೆ ನೀಡುತ್ತಾ ಸಹಾಯಕಳಾಗಿದ್ದು ಅವನಿಗೆ ಬೆನ್ನೆಲುಬಿನಂತೆ ಆಧಾರವಾಗಿದ್ದಳು. ಏಕೆಂದರೆ ಅವನು ಬಹಳ ಭಾವುಕವಾಗಿದ್ದು ಸೂಕ್ಷ್ಮ ಸ್ವಭಾವದವನಾಗಿದನು. 'The Task', 'Homer's Illiad and Odyssey' ಇವು ಇವನ ಕೃತಿಗಳು.

**ಅನ್ನ ಲೆಟಿಟೀಯ ಬಾರ್‌ಬೊಲ್ಡ್:**

18ನೆಯ ಶಮಾನದ ಆಂಗ್ಲ ಕವಿಯತ್ರಿ, ಮಕ್ಕಳ ಸಾಹಿತಿ, ಪ್ರಬಂಧ ಕಾರಳಾಗಿದ್ದಳು. ಅಂದಿನ ಮಹಿಳಾ ಲೇಖಕಿಯರಲ್ಲಿ ಈಕೆ ಪ್ರಖ್ಯಾತಳಾಗಿದ್ದಳು. ಈಕೆ 20-06-1743 ರಲ್ಲಿ ಇಂಗ್ಲೆಂಡಿನಲ್ಲಿ 'Jhon Aikin' ಎಂಬುವವರ ಮಗಳಾಗಿ ಹುಟ್ಟಿದಳು. ಅಂದಿನ ಮಹಿಳೆಯರಿಗೆ ಓದಲು ಅವಕಾಶವಿಲ್ಲದ ಲ್ಯಾಟಿನ್, ಗ್ರೀಕ್, ಪ್ರೆಂಚ್, ಇಟ್ಯಾಲಿಯನ್ ಭಾಷೆಗಳನ್ನು ಇನ್ನಿತರ ವಿಷಯಗಳನ್ನು ಓದಿ ಪ್ರಬುದ್ಧಳಾಗಿದ್ದಳು ಎಂಬಾತನನ್ನುವರಿಸಿದ್ದಳು, ಆದರೆ ದಾಂಪತ್ಯ ಜೀವನದಲ್ಲಿ ಬರಿಯ ನೋವುಂಡ ಆಕೆ ಅವನನ್ನು ತೊರೆದು ಏಕಾಂಗಿಯಾಗಿ ಜೀವಿಸತೊಡಗಿದಳು. ಫ್ರಾನ್ಸಿನ ಮಹಾಕ್ರಾಂತಿಯ ಕುರಿತು ಅವಳು ಬರೆದ ಲೇಖನಗಳು ಅವಳಿಗೆ ಕುತ್ತಾಗತೊಡಗಿದವು. 'Poems', 'Lessons for Childer' ಮುಂತಾದವು ಅವಳ ಕೃತಿಗಳಾಗಿವೆ. 09-03-1825ರಲ್ಲಿ ಅವಳು ತೀರಿಕೊಂಡಳು.

**ಲೇಡಿ ಕರೋಲಿನಾ ನೈರ್ನೆ:**

ಈಕೆ ಸ್ಕಾಟ್ಲೆಂಡಿನ ಕವಿಯತ್ರಿ. 16-08-1766ರಲ್ಲಿ ಸ್ಕಾಟ್ಲೆಂಡಿನಲ್ಲಿ ಜನಿಸಿದಳು. ಈಕೆಯ ತಂದೆ ಲೂರಿನ್ಸ್ ಆಲಿಫ಼ಂಟ್ ಈಕೆಯ ಜನ್ಮನಾಮ ಕೆರೊಲಿನಾ ಬ್ಯಾರೊನೆಸ್ ನೈರ್ನೆ. ಶಾಲೆಯಲ್ಲಿ ಪ್ರೆಟ್ಟಿ ಮಿಸ್ ಕಾರ್ ಎಂದು ಹೆಸರಾಗಿದ್ದ ಈಗೆ ತನ್ನ ಸೌಂದರ್ಯದಿಂದ 'Flower of Strathearn' ಎಂಬ ಹೆಸರನ್ನು ಗಳಿಸಿದ್ದಳು 'W.M Nairne' ಎಂಬಾತನನ್ನು ವಿವಾಹವಾದಳು. 'The Fife laird', 'Jhon Tod'ಮುಂತಾದವು ಅವಳ ಕೃತಿಗಳು. ಈಕೆ 26-10-1845ರಲ್ಲಿ ತೀರಿಕೊಂಡಳು.


**ಹೆನ್ರಿ ವಾಟನ್**

ಈತ ಇಂಗ್ಲಿಷ್ ಕವಿ ಹಾಗೂ ರಾಜತಂತ್ರಜ್ಞನಾಗಿದ್ದ. ಥಾಮಸ್ ವಾಟನ್ ನ ಮಗನಾಗಿ 1568ರಲ್ಲಿ ಜನಿಸಿದ. ವಿಂಚೆಸ್ಟರ್ ಮತ್ತು ಆಕ್ಸ್‌ಫರ್ಡ್‌ಗಳಲ್ಲಿ ಈತನ ವಿದ್ಯಾಭಾಸ ನಡೆಯಿತು. ಅವನು ಹವ್ಯಾಸಿ ಲೇಖಕನಾಗಿದ್ದ. ಅವನ ಇಡೀ ಜೀವಿತಾವಧಿಯಲ್ಲಿ ಅವನು ಪ್ರಕಟಿಸಿದುದು 2 ಗ್ರಂಥಗಳು. ಅವು ಯಾವುವೆಂದರೆ 'The elment of Articutecture', 'De Architectura', ರಾಜಕಾರ್ಯ ಕುಶಲವಾಗಿದ್ದ ಈತ 1639ರಲ್ಲಿ ತೀರಿಕೊಂಡ.

**ಚಾರ್ಲ್ಸ್ ಲ್ಯಾಂಬ್**

ಈತ ಒಬ್ಬ ಪ್ರಸಿದ್ಧ ಆಂಗ್ಲ ಪ್ರಬಂಧಕಾರ. 10-02-1775 ರಲ್ಲಿ ಲಂಡನ್ನಿನ ಎಡ್ಮಂಡ್‌ಟನ್‌ನಲ್ಲಿ ಜನಿಸಿದ. ' John lamb' ಈತನ ತಂದೆ. ತಂದೆ ಬಡವನಾಗಿದ್ದರೂ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. 'Mary lamb' ಈತನ ಸಹೋದರಿ ಚಿಕ್ಕಂದಿನಲ್ಲಿಯೇ ಈರ್ವರೂ ಮಾನಸಿಕ ಅಸ್ವಸ್ಥತೆಗೆ ಒಳಗಾದರು. ಚಿಕಿತ್ಸೆಯು ಫಲಕಾರಿಯಾಗಿ ಮೊದಲಿನಂತಾದರು. ತಂದೆಯನ್ನು ಕಳೆದುಕೊಂಡು ಕೊನೆವರೆಗೂ ಈ ಸಹೋದರ-ಸಹೋದರಿಯರು ಒಟ್ಟಿಗೆ ಜೀವಿಸಿದರು. ಲ್ಯಾಂಬ್ 'Tales form Shekespear', 'Essay of Elia' ಮುಂತಾದ ಕೃತಿಗಳನ್ನು ರಚಿಸಿದ್ದಾನೆ.

**ವಿಲಿಯಂ ಅರ್ನೆಸ್ಟ್ ಹೆನ್ಲಿ**

ಈತ ಆಂಗ್ಲ ಕವಿ, ಚಿಂತಕ, ವಿಮರ್ಶಕ. ಪತ್ರಿಕೆಯ ಸಂಪಾದಕನು ಆಗಿದ್ದ. 'Gloucester' ಎಂಬಲ್ಲಿ ಜನಿಸಿದ. ತಂದೆ ವಿಲಿಯಂ ತಾಯಿ ಮೇರಿ ಮಾರ್ಗನ್. ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಅವನು ವಿದ್ಯಾಭ್ಯಾಸ ಮಾಡಿದನು. 'Viewes and Reviewes', 'Beau Austin' ಮುಂತಾದ ಕೃತಿಗಳನ್ನು ಈತ ರಚಿಸಿದ್ದಾನೆ. 11-07-1903 ರಲ್ಲಿ ಈತ ಅಸುನೀಗಿದ.

**ಥಾಮಸ್ ಹುಡ್**

ಬ್ರಿಟಿಸ್ ಹಾಸ್ಯ ಸಾಹಿತಿ ಮತ್ತು ಕವಿ. 23-05-1799 ರಲ್ಲಿ ಲಂಡನ್ನಿನಲ್ಲಿ ಜನಿಸಿದ. ಬಡತನದಲ್ಲಿ ಬೆಳೆದ ಹುಡುಗ ಪ್ರಪಂಚ ಬೇಗ ಅರ್ಥವಾಗಿತ್ತು. ಪುಸ್ತಕದಂಗಡಿಯ ಕೆಲಸಗಾರನಾಗಿ ಜೀವನನಿರ್ವಹಿಸುತ್ತಿದ್ದ. 'Odes and add resses' ಮುಂತಾದವು ಇವನ ಕೃತಿಗಳು. 03-05-1845ರಲ್ಲಿ ಈತ ತೀರಿಕೊಂಡ.

**ಲಾರ್ಡ್ ಬೈರನ್**

ಈತ ಇಂಗ್ಲಿಷ್ ಕವಿ. ಈತನ ವರ್ಣರಂಜಿತ ವ್ಯಕ್ತಿತ್ವ ಮತ್ತು ಕಾವ್ಯ ಯುರೋಪಿನಲ್ಲಿ ಪ್ರಖ್ಯಾತವಾಗಿತ್ತು. ಲಂಡನ್ ಇವನ ತವರೂರು. ಷೆಲ್ಲಿ ಈತನ ಆಪ್ತ ಸ್ನೇಹಿತ. ಈತನ ಕಾಲ 1759–1795. 'Hours of Idleness', 'A Turkish Tale' ಮುಂತಾದವು ಈತನ ಕೃತಿಗಳು.

**ಪ್ರೇರಣೆ–ಪ್ರಭಾವ:**

ಕವಿಗೆ ಕೇವಲ ಪ್ರತಿಭೆ ವ್ಯುತ್ಪತ್ತಿಗಳಿದ್ದರಷ್ಟೇ ಸಾಲದು. ಅವನು ಕವಿಯಾಗುವ ಮುನ್ನ ಅನೇಕ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿರುತ್ತಾನೆ. ಅವು ಅವನ ಒಟ್ಟಾರೆ ವ್ಯಕ್ತಿತ್ವವನ್ನು ರೂಪಿಸಿ, ಅನುಭವಗಳನ್ನೊದಗಿಸಿ, ಆ ರಸಪಾಕವನ್ನು ತಮ್ಮ ರಚನೆಗಳಲ್ಲಿ ತರುವಂತೆ ಮಾಡಿಬಿಡುತ್ತವೆ. ಹಾಗೆಯೇ ಶ್ರೀಯವರು ಕೂಡ ಇಂಗ್ಲಿಷ್ ಗೀತಗಳ ರಚನೆಗೆ ಅನೇಕ ಪ್ರೇರಣೆ–ಪ್ರಭಾವಗಳಿಗೆ ಒಳಗಾಗಿದ್ದರೆನ್ನಬಹುದು.

1907 ರಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರೌಢವ್ಯಾಸಂಗ ಮಾಡುತ್ತಿದ್ದಾಗಲೇ ಬಿ.ಎಂ.ಶ್ರೀ ಅವರಿಗೆ ವರ್ಡ್ಸ್‌ವರ್ತ್ ಪ್ರಿಯನಾದ. 'ಕಾವ್ಯದಲ್ಲಿ ಬಳಸುವ ಭಾಷೆಯು ಜನಸಾಮಾನ್ಯರ ಭಾಷೆಯ ಸಂಸ್ಕಾರಗೊಂಡ ರೂಪವಾಗಿರಬೇಕು' ಎಂಬ ಅವರ ಅಭಿಪ್ರಾಯವನ್ನು ಗಮನಿಸಿದರೆ, ವರ್ಡ್ಸ್‌ವರ್ತ್‌ನ ಪ್ರಭಾವವನ್ನು ಗುರುತಿಸಬಹುದು. ವರ್ಡ್ಸ್‌ವರ್ತ್‌ನ ವಿಚಾರಗಳ ಸ್ಫೂರ್ತಿ ಈ ಮಾತುಗಳ ಹಿಂದೆ ಕಾಣುತ್ತದೆ. "ಕಾವ್ಯವನ್ನು ಮೊದಲು ಬರೆದವನು ಆಡುವ ಭಾಷೆಯನ್ನು ತಾನೇ ಬರೆದಿರಬೇಕು? ಹಿಂದಿನ ಭಾಷೆ ಆಗಿನ ಜನಕ್ಕೆ ತಿಳಿಯುತ್ತಿತ್ತು. ಈಗಿನ ಜನಕ್ಕೆ ಅದು ತಿಳಿಯುವುದಿಲ್ಲ.[7]

ಷೇಕ್ಸ್‌ಪಿಯರ್‌ನ ನಾಟಕಗಳು, ಗ್ರೀಕ್ ರುದ್ರನಾಟಕಗಳು, ಪ್ಲೇಟೋವಿನ ಸಂವಾದಗಳು, ಕಾರ್ಲೈಲ್‌ನ ಧೀರೋಪದೇಶಗಳು ಅವುಗಳಲ್ಲಿನ ತತ್ತ್ವಗಳು, ವಿಚಾರಗಳು ಈ ಹೊಸ ಸೃಷ್ಟಿಗೆ ಪರೋಕ್ಷವಾಗಿ ಪ್ರೇರಣೆಯಿತ್ತವು ಎನಿಸುತ್ತದೆ.

"ಪದವಿ ಐಶ್ವರ್ಯಗಳ ವ್ಯಾತ್ಯಾಸ ಏನೇ ಇರಲಿ, ಮನುಷ್ಯ ಮನುಷ್ಯನೇ" ಎಂದು ಹಾಡಿದ ಬರ್ನ್ಸ್ ಕವಿಯ ವಿಚಾರ ಅವರನ್ನು ಪ್ರಭಾವಿಸಿದೆ. ಬರ್ನ್ಸ್ ನಂತೆ ಶ್ರೀಯವರು ಕೂಡ ತಮ್ಮ ವೈಯಕ್ತಿಕ ಜೀವನದಲ್ಲಿ ಅನುಭವಿಸಿದ ಕಷ್ಟ ನಿಷ್ಟುರತೆಗಳ ಪರಂಪರೆಯನ್ನು ಗಮನಿಸಿದರೆ ಬರ್ನ್ಸ್ ವಿರಚಿತ ಕವನಗಳು ಇಂಗ್ಲಿಷ್ ಗೀತಗಳಲ್ಲಿ ಎಡೆ ಪಡೆದಿರುವುದಕ್ಕೆ ಕಾರಣ ಗೋಚರವಾಗುತ್ತದೆ.

ಷೆಲ್ಲಿ ಬೈರನ್‌ರಂತಹ ಸಮಾಜವನ್ನು ಎಚ್ಚರಿಸುವ ಕ್ರಾಂತಿಕಾರರು,ಸಮಕಾಲೀನ ವೈಜ್ಞಾನಿಕ ಮತ್ತು ರಾಜಕೀಯ ಆಗುಹೋಗುಗಳಿಗೆ ಸ್ಪಂದಿಸಿದ ಟೆನಿಸನ್ ಪ್ರಭಾವವು ಅವರ ಮೇಲೆ ನಿಚ್ಚಳವಾಗಿರುವುದಕ್ಕೆ ಇಂಗ್ಲಿಷ್ ಗೀತಗಳಲ್ಲಿನ ಕೆಲವು ಕವಿತೆಗಳೇ ಸಾಕ್ಷಿ ಎನ್ನಬಹುದು.

---

[7] ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ : ಶ್ರೀ . ಪುಟ. 22

ಮನುಷ್ಯನ ಅತಿ ಸೂಕ್ಷ್ಮ ಭಾವನೆಗಳು, ಕನಸುಗಳು, ನೋವು ನಿರಾಸೆಗಳು ಅಭಿವ್ಯಕ್ತಗೊಳ್ಳುವ ಭಾವಗೀತೆಯ ಮೋಡಿ ಅವರನ್ನು ಕವಿತೆಗಳ ಅನುವಾದಕ್ಕೆ ಪ್ರೇರೇಪಿಸಿತು ಎನಿಸುತ್ತದೆ.

ಸಂಸ್ಕೃತ, ಕನ್ನಡ, ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಛಂದಸ್ಸು ಬೆಳೆದ ಬಗೆಯನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ್ದರಿಂದಾಗಿ ಇಂಗ್ಲಿಷ್ ಗೀತಗಳಲ್ಲಿ ಛಂದಸ್ಸಿನ ಹೊಸ ಹೆದ್ದಾರಿಯೊಂದು ತೆರೆಯಲು ಸ್ಫೂರ್ತಿಯಾಯಿತು.

**'ಇಂಗ್ಲಿಷ್ ಗೀತೆ' ಉದ್ದೇಶ ಮತ್ತು ಚಾರಿತ್ರಿಕ ಮಹತ್ತ್ವ:**

ತಮ್ಮ ಈ ಆಯ್ಕೆಯ ಉದ್ದೇಶವೇನೆಂಬುದನ್ನು ಶ್ರೀಯವರೇ ಹೀಗೆ ಸ್ಪಷ್ಟಪಡಿಸಿದ್ದಾರೆ:

"ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣಗ್ರಂಥದಿಂದ ಸ್ವಲ್ಪಮಟ್ಟಿಗೆ ತಿಳಿಯಬಹುದು. ವಿಶ್ವ ಕವಿತಾವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜ ಭಾಷೆಯಲ್ಲಿ ಸೌಂದರ್ಯ ರಚನೆಯನ್ನು ಮಾಡಿರುವರೋ ಅದನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ, ಧೈರ್ಯವನ್ನೂ ಶಿಕ್ಷಣ- ಬದ್ಧವಾದ ಸ್ವಾತಂತ್ರ್ಯವನ್ನೂ ವಹಿಸಿ ಕನ್ನಡ ಕವಿಗಳು ಹಿಂದಕ್ಕಿಂತಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ".

ಇವೆಲ್ಲಕಿಂತ ಹೆಚ್ಚಾಗಿ ಶ್ರೀಯವರನ್ನು ಇಂಥ ಸಾಹಸಕ್ಕೆ ಕೈಹಾಕಿದುದರ ಮುಖ್ಯ ಉದ್ದೇಶವೇನೆಂಬುದನ್ನು ತಿಳಿಯುವುದು ಲಕ್ಷ್ಯಾರ್ಹ. ನಮ್ಮ ಹೆಣ್ಣಾದ ಕನ್ನಡ ನುಡಿ ಹಾಗೂ ಪಡುವ ಕಡಲ ಹೊನ್ನ ಹೆಣ್ಣಾದ ಇಂಗ್ಲಿಷ್ ಭಾಷೆ, ತಮ್ಮನ್ನು ಒಲಿಸಿ, ನಲಿಸಿ, ಕಲಿಸಿ ಕುಣಿಸುತ್ತಿದ್ದಾಗ:

"ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ;
ಅವಳ ತೊಡುಗೆ ಇವಳಿಗಿಟ್ಟು
ಹಾಡಬಯಸಿದೆ"

ಎಂದು ಅವರೇ ತಮ್ಮ ಸ್ವತಂತ್ರ ಕವನ 'ಕಾಣಿಕೆ' ಯಲ್ಲಿ ಹೇಳಿಕೊಂಡಿದ್ದಾರೆ,

ಒಟ್ಟಿನಲ್ಲಿ ಅವರಿಗಿದ್ದುದು, ಶ್ರೇಷ್ಠ ಕವಿಗಳ ಶ್ರೇಷ್ಠ ಕವನಗಳ ಅನುವಾದ ಮಾಡಬೇಕೆಂಬ ಉದ್ದೇಶವಲ್ಲ. ಹೊಸ ಹಾದಿ ತೆರೆದು ತೋರುವ ಉತ್ಸಾಹ, ಹೊಸ ಪ್ರಯೋಗ ಮಾಡುವ ಸಾಹಸವಷ್ಟೇ ಅವರ ಈ ಕೃತಿಯ ರಚನೆಯ ಹಿಂದಿದ್ದ ಉದ್ದೇಶ ಎನಿಸುತ್ತದೆ.

ಈ ಕೃತಿಯು 'ಯುಗ ಪ್ರವರ್ತಕ' ಕೃತಿ ಎಂಬ ಪಸಿದ್ಧಿಯನ್ನು ಪಡೆದಿದೆ, 'ಇಂಗ್ಲಿಷ್ ಗೀತ'ಗಳಿಂದ ಆಧುನಿಕ ಕನ್ನಡ ಕಾವ್ಯವು ಸ್ಫೂರ್ತಿಯನ್ನು ಪಡೆಯಿತು

"ಅನುವಾದದ ವಿಷಯದಲ್ಲಿ, ಶ್ರೀಯವರೇ ತಾವು ಆರಿಸಿದ ಕವನಗಳ ಮೌಲ್ಯ, ಅವನ್ನು ಆರಿಸಲು ಕಾರಣ, ಅವನ್ನು ಅನುವಾದಿಸಿರುವ ದೃಷ್ಟಿ ಮತ್ತು ರೀತಿ, ಹಾಗೂ ಅನುವಾದದ ಇತಿಮಿತಿಗಳನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ಪದಾನುವಾದ

ಭಾವನುವಾದ, ರೂಪಾಂತರ, ಪ್ರತಿಸೃಷ್ಟಿ ಮುಂತಾದ ಭಾಷಾಂತರದ ಎಲ್ಲ ಬಗೆಗಳನ್ನೂ ಅದರಲ್ಲಿ ಕಾಣಬಹುದು. ಅದರ ಯಶಸ್ಸು ಕೆಲವೆಡೆ ಮೂಲಕ್ಕಿನ್ನು ಉತ್ತಮವೆನ್ನುವ ಕವಿತೆಗಳಲ್ಲಡಗಿದೆ."

ಛಂದಸ್ಸಿನ ದೃಷ್ಟಿಯಿಂದ ಅದರ ಸಾಧನೆಯನ್ನು ಕುರಿತು ತೀ.ನಂ.ಶ್ರೀ.ಯವರು "ಎಲ್ಲಕ್ಕೂ ಮುಗಿಲಾಗಿ ಶ್ರೀಯವರಿಗೆ ಕನ್ನಡಕ್ಕೆ ಆದ ಪರಮೋಪಕಾರವೆಂದರೆ, 'ಇಂಗ್ಲಿಷ್ ಗೀತ'ದಲ್ಲಿ ಹೊಸದೊಂದು ಹೆದ್ದಾರಿಯನ್ನು ತೆರೆದದ್ದು;..." ಎಂದಿದ್ದಾರೆ. ಈ ಕೃತಿ ಶಾಸ್ತ್ರೀಯ ಛಂದಸ್ಸಿನ ಹಿಡಿತದಿಂದ ಕನ್ನಡಕಾವ್ಯಕ್ಕೆ ಬಿಡುಗಡೆ ತಂದಿತು. ಭಾವದ ನೈಜ ಅಭಿವ್ಯಕ್ತಿಯಾಗುವ ಹೊಸ ವೃತ್ತರೂಪಗಳನ್ನು ಅದು ಕಲ್ಪಿಸಿತು. ಛಂದಸ್ಸು .... ಸದ್ಯೋಜಾತವಾದ ಭಾವ ತನ್ನ ಅಭಿವ್ಯಕ್ತಿಗಾಗಿ ಕಲ್ಪಿಸಿಕೊಳ್ಳುವ ನೈಜರೂಪ ಎಂಬ ವಿವರಣೆಯನ್ನು ಸೂಚಿಸಿತು.

ಭಾಷೆಯ ವಿಷಯದಲ್ಲಿ ಇದು ಕಾವ್ಯಭಾಷೆಯನ್ನು ಆಡುಭಾಷೆಗೆ ಹತ್ತಿರ ತಂದಿತು. ಸಂಸ್ಕೃತ ಪದಗಳ ಹೇರಳತೆ, ಅಲಂಕಾರತಿಶಯತೆಯಿಂದ ಮುಕ್ತವಾಗಿ ಸರಳವಾದ ಪದಗಳು, ನುಡಿಗಟ್ಟುಗಳು, ಹೇಳಿಕೆಗಳನ್ನು ಬಳಸಿಕೊಂಡಿತು.

"ಕಾವ್ಯದ ವಸ್ತು ಹಾಗೂ ಪ್ರಕಾರಗಳ ವಿಷಯದಲ್ಲಿ ಇದು ಒಂದು ಕ್ರಾಂತಿಯನ್ನೇ ತಂದಿತು. ಪ್ರಚಲಿತ ಕಾವ್ಯ ಸಿದ್ಧಾಂತದ ಪ್ರಕಾರ, ಗಂಭೀರ ಕಾವ್ಯದ ವಸ್ತು ಪ್ರಸಿದ್ಧವಾದ ಲೌಕಿಕ ಅಥವಾ ಪೌರಾಣಿಕ ಸಂಗತಿಯೊಂದರ ಉದಾತ್ತ ಅಥವಾ ಉದಾತ್ತೀಕರಿಸಿದ ವ್ಯಕ್ತಿಯೊಬ್ಬನ ಚರಿತದ ದೀರ್ಘ ಕಥನವಾಗಬೇಕಾಗಿದ್ದಿತು. ಆದರೆ ಶ್ರೀಯವರು ಅನುದಿನದ ಘಟನೆಗಳು, ಸಾಮಾನ್ಯ ವ್ಯಕ್ತಿಯ ಅನುಭವಗಳನ್ನು ಕಾವ್ಯದ ವಸ್ತುವನ್ನಾಗಿಸಿದರು".[8]

"ಇಂಗ್ಲಿಷ್ ಕಾವ್ಯದಲ್ಲಿ ಹೊಸ ಯುಗವನ್ನು ಸಾರಿ, ಹೊಸ ಹಾದಿಯನ್ನು ಹಾಕಿಕೊಟ್ಟ 'The Lyrical Ballads' ಒಂದು ಪರ್ವ ಕೃತಿಯಾಯಿತೋ, ಅದೇ ರೀತಿಯಲ್ಲಿ ಕನ್ನಡದಲ್ಲಿ ಇಂಗ್ಲಿಷ್ ಗೀತಗಳು ಆ ಕೆಲಸವನ್ನು ಮಾಡಿತು"[9]

"....ಶ್ರೀಯವರು ಇಂಗ್ಲಿಷ್ ಭಾವಗೀತಗಳನ್ನು ಕನ್ನಡಿಸಿರುವಂತೆ ಬೇರೆಯವರೂ ಮಾಡಿದ್ದಾರೆ. ಬೇರೆ ಭಾಷೆಯವರೂ ಮಾಡಿದ್ದಾರೆ. ಆದರೆ ನನಗಿದ್ದ ಸಾಹಿತ್ಯ ಪರಿಚಯದಿಂದ ಹೇಳುವುದಾದರೆ ಇಂಗ್ಲಿಷ್ ಗೀತಗಳು ತನ್ನ ಮೊತ್ತದಿಂದಲೂ ಕಾವ್ಯ ಗುಣದಿಂದಲೂ ಶೈಲಿಯ ಸಮತ್ವದಿಂದಲೂ ತನ್ನ ಜಾತಿಯಲ್ಲಿ ಆದರ್ಶವಾಗಿರುವಂತೆ ಈ ಗುಣ ಸಮುದಾಯವನ್ನು ನಾನು ಬೇರೆ ಕಡೆಗೆ ಕಂಡಿಲ್ಲ.." [10]

ಈ ಮೇಲ್ಕಂಡ ಅಭಿಪ್ರಾಯಗಳನ್ನು ಗಮನಿಸಿದಾಗ 'ಇಂಗ್ಲಿಷ್ ಗೀತಗಳು' ಒಂದು ಒಳ್ಳೆಯ ಕವನ ಸಂಗ್ರಹ ಮತ್ತು ಮಹತ್ತ್ವದ ಐತಿಹಾಸಿಕ ಪ್ರಭಾವ ಎನ್ನಬಹುದು.

---

[8] ಪ್ರಬುದ್ಧ ಕರ್ನಾಟಕ 'ಇಂಗ್ಲಿಷ್ ಗೀತಗಳು' ಎನ್ ಬಾಲಸುಬ್ರಹ್ಮಣ್ಯ ಪುಟ 254

[9] ಸಂಭಾವನೆ ಪುಟ 21

[10] ಸಂಭಾವನೆ ಪುಟ 50

# ಅಧ್ಯಾಯ –4– 'ಇಂಗ್ಲಿಷ್ ಗೀತಗಳು' ಕೃತಿಯಲ್ಲಿನ ವಿಶ್ವಕವಿತಾ ವಿಷಯಗಳು[11]: ಅನುವಾದಗಳ ಸ್ವರೂಪ–ತೌಲನಿಕವಾಗಿ.

ಈ ಸಂಕಲನದ ಮೂಲ ಕವನಗಳ ಕವಿಗಳು ಬಳಸಿರುವ ಪ್ರಕೃತಿ, ಪ್ರೇಮ, ಶೋಕ, ತಾತ್ತ್ವಿಕತೆ, ಭಕ್ತಿ, ವಿಡಂಬನೆ ದೇಶಭಕ್ತಿ ಮುಂತಾದ ವಿಶ್ವ ಕವಿತಾ ವಿಷಯಗಳು ಅನುವಾದದಲ್ಲಿ ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುವುದು. ಪ್ರೊ ಹೆಚ್.ಎಸ್ ಹರಿಶಂಕರ್ ಅವರು 'ಬಾನಾಡಿ' ಕವನವನ್ನು ತೌಲನಿಕವಾಗಿ ವಿವೇಚಿಸಿರುವುದನ್ನು ಮಾದರಿಯಾಗಿಟ್ಟುಕೊಂಡು ಉಳಿದ ಎಲ್ಲ ಕವನಗಳನ್ನು ವಿಶ್ಲೇಷಿಸಲಾಗುವುದು. ಆದರೆ ಪುಟಮಿತಿ ಮೀರುವ ಕಾರಣದಿಂದ ಕವನಗಳ ಭಾಗಗಳನ್ನು ಪ್ರತ್ಯೇಕವಾಗಿ ಉದ್ಧರಿಸಿಲ್ಲ.

## ಪ್ರಕೃತಿ ಗೀತೆಗಳು

ಪ್ರಕೃತಿ ಸುಂದರ ದೃಶ್ಯಗಳು ಕವಿಯ ಚೇತನದಲ್ಲಿ ಭಾವ ಪೂರ್ಣವಾಗಿ ವ್ಯಕ್ತವಾಗುತ್ತವೆ. 'ಇಂಗ್ಲೀಷ್ ಗೀತಗಳ' ಕೃತಿಯಲ್ಲಿ ಪ್ರಕೃತಿಗೀತೆಗಳು ಇದ್ದು, ಅವುಗಳ ಅನುವಾದದ ಸ್ವರೂಪವನ್ನು ಈ ಮುಂದಿನಂತೆ ಕಾಣಗಬಹುದು.

### ಬಾನಾಡಿ

ಇದು ಇಂಗ್ಲಿಷ್ ಕವಿ ಪರ್ಸಿಬಿಷೆ ಷೆಲ್ಲಿಯ 'To a Skylark' ಎಂಬ ಇಂಗ್ಲಿಷ್ ಕವನದ ಅನುವಾದ ಈ ಕವನವನ್ನು ಕನ್ನಡದಲ್ಲಿ ಬಿ.ಎಂ.ಶ್ರೀಯವರು ಮತು ಎಂ.ಗೋವಿದ ಪೈ ಅವರೂ ಅನುವಾದಿಸಿದ್ದಾರೆ. 'ಬಾನಾಡಿ' ಮತ್ತು 'ಬಾನಕ್ಕಿ'ಗೆ ಎಂದು ಇದನ್ನು ಕ್ರಮವಾಗಿ ಇವರು ಕರೆದಿದ್ದಾರೆ. ಶ್ರೀಯವರ ಕವನವನ್ನು ಮೂಲದ ಕವನದೊಡನೆ ಇಲ್ಲಿ ಹೋಲಿಸಿ ನೋಡುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ. ಅಲ್ಲಲ್ಲಿ ಗೋವಿಂದ ಪೈ ಅವರ ಕವನವನ್ನೂ ಈ ತೌಲನಿಕ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಷೆಲ್ಲಿಯ ಈ ನೀಳ್ಗವನದಲ್ಲಿ ಐದು ಸಾಲಿನ 21 ಪದ್ಯಗಳಿವೆ. ಷೆಲ್ಲಿ ಮೂಲದಲ್ಲಿ ಯಾವ ಬಗೆಯ ಛಂದಸ್ಸನ್ನು ಬಳಸಿದ್ದಾನೆಯೋ, ಅದೇ ಮಾದರಿಯಲ್ಲೂ ಶ್ರೀಯವರು ಅಂತಹ ಬಗೆಯ ಛಂದಸ್ಸನ್ನೇ ಬಳಸಲು ಪ್ರಯತ್ನಿಸಿದ್ದಾರೆ. ಹಾಗೆ ಮೂಲ ಛಂದಸ್ಸನ್ನು ಉಳಿಸಿಕೊಳ್ಳುವುದರ ಮೂಲಕ ಷೆಲ್ಲಿಯ ಕವನಗಳ ಮುಖ್ಯ ಗುಣಗಳಾದ ನಾದ ಮಾಧುರ್ಯ, ಸುಕೋಮಲ ಭಾವಗಳನ್ನು ಅನುವಾದದಲ್ಲೂ ತಕ್ಕ ಮಟ್ಟಿಗೆ ತರಲು ಸಾಧ್ಯವಾಗಿದೆ. 3+4 ಗಣಗಳ ಲಯವನ್ನು ಈ ಕವನದುದ್ದಕ್ಕೂ ಶ್ರೀಯವರು ಬಳಸಿ ಬಲು ಮಟ್ಟಿಗೆ ಯಶಸ್ವಿಯಾಗಿದ್ದಾರೆ''[12]

---

[11] 'ವಿಶ್ವಕವಿತಾ ವಿಷಯಗಳು' ಈ ಪದವನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ವತಿಯಿಂದ 1985 ರಲ್ಲಿ ಪ್ರಕಟವಾದ 'ಇಂಗ್ಲಿಷ್ ಗೀತಗಳು' ಕೃತಿಯಲ್ಲಿ ಪುನರ್ ಮುದ್ರಣಕ್ಕೆ ಬರೆದ ಮುನ್ನುಡಿಯಲಿ ಎಂ.ವೀ.ಸೀ.ಯವರು ಬಳಸಿದ್ದಾರೆ. ತೌಲನಿಕ ವಿವೇಚನೆಯ ಶೀರ್ಷಿಕೆಗೆ ಇದೇ ಯುಕ್ತವೆಂದು ಭಾವಿಸಿ ಬಳಸಿರುತ್ತೇನೆ.

[12] 'ಬಾನಾಡಿ' ಎಚ್.ಎಸ್. ಹರಿಶಂಕರ್ ಪ್ರಬುದ್ಧ ಕರ್ನಾಟಕ ಪುಟ 277–292

1ನೆಯ ಪದ್ಯ:

ಬಾಗಿಲು ತಟ್ಟಿದ ಬಂಧುವನ್ನೋ ಗೆಳೆಯನ್ನೋ 'ಹಾ! ನೀವಾ!ಬನ್ನಿ, ಬನ್ನಿ! ಎಂದು ಆಶ್ಚರ್ಯ ಸಂಭ್ರಮ ಸಂತೋಷಗಳೊಂದಿಗೆ ಸ್ವಾಗತಿಸುವುದಕ್ಕೆ ಬದಲಾಗಿ ಯಾರು ನೀವು? ಯಾರು ಬೇಕಾಗಿತ್ತು? ಎಂದು ಕೇಳಿದಾಗ, ಬಂದ ಆಗಂತುಕನ ಮನಸ್ಸಿನಲ್ಲಾಗಲೀ ಮನೆಯೊಡೆಯನಲ್ಲಾಗಲೀ ಮೂಡುವಂಥ ಅಸಂತೃಪ್ತ ಮತ್ತು ಅಸಂಪೃಕ್ತ ಭಾವನೆಯೇ ಇಲ್ಲಿಯೂ ಉಂಟಾಗುತ್ತದೆ.''[13]

ಯಾವುದು ಮೂಲಕವಿಯಲ್ಲಿ ಆಶ್ಚರ್ಯ ಸೂಚಕವಾಗಿದೆಯೊ ಅದು ಅನುವಾದದಲ್ಲಿ ಪ್ರಶ್ನಾರ್ಥವಾಗಿ ರೂಪುಗೊಂಡಿದೆ. 'Hail to thee' ಎಂಬ ಪದಪುಂಜ ಅನುವಾದದಲ್ಲಿ ಮಾಯವಾಗಿದೆ; ಅನುವಾದ ತೀರ ಸಪ್ಪೆಯಾಗಿದೆ. ಆದರೆ ಗೋವಿಂದ ಪೈ ಅವರು ಈ ಮಾತುಗಳನ್ನೇ 'ಸೊಗಯಿಸೈ ಸುಖಜೀವಿ' ಎಂದು ಅನುವಾದಿಸಿದ್ದಾರೆ. ಇದು ಮೂಲಕ್ಕೆ ಹೆಚ್ಚು ಹತ್ತಿರವಾಗಿದೆ. ಮುಂದಿನ ಸಾಲು 'Bird thou never wert' ಎಂಬುದು ಶ್ರೀಯವರು ಅನುವಾದದಲ್ಲಂತೂ 'ಹಕ್ಕಿಯೆಂಬರೆ ನಿನ್ನನು' ಎಂದು ತೀರ ಸರಳಗೊಂಡಿದೆ ಆದರೆ ಪೈಯವರು ಇದನ್ನು 'ನೆಗೆವಕ್ಕಿ ನೀನಲ್ಲ' ಎಂದು ಉಚಿತವಾಗಿಯೇ ಅನುವಾದಿಸಿದ್ದಾರೆ 'The from heaven, or near it; pourest thy ful heast' ಎಂಬುದನ್ನು 'ತೋರಿ ದಿವಿಜರು.. ನಿನ್ನೆದೆಯನು' ಎಂದು ಭಾಂಷಾಂತರಿಸಿದ್ದಾರೆ. ಇಲ್ಲಿ ಸ್ವರ್ಗದಿಂದ ಎಂಬರ್ಥ ಕೊಡುವ ಮೂಲದ ಪದಕ್ಕೆ ದೇವತೆಗಳು ಎಂದು ಬದಲಾಯಿಸಿರುವುದರ ಔಚಿತ್ಯವೇನೋ ತಿಳಿಯದು. ಗೋವಿದ ಪೈಗಳು ಇದನ್ನೆ 'ಗಗನದಿಂದಲೊ ಗಗನದರುಗಿಂದಲೊ ವೊಗೆವೆ ತುಂಬೆದೆಯ...' ಎಂದು ಅನುವಾದಿಸಿದ್ದರೆ. ಇದು ಮೂಲಕ್ಕೆ ಹೆಚ್ಚು ಸಮೀಪವಾಗಿದೆ. ಈ ಪದ್ಯದ ಕೊನೆಯ ಸಾಲಾದ 'The profuse ... art' ಎಂಬುದು ಅನುವಾದದಲ್ಲಿ 'ಹಾರಿ ನೆನೆಯದ ಭೂರಿಗಾನದೊಳೆರೆಯುವೆ' ಎಂದು ಸಮರ್ಥವಾಗಿ ಅನುವಾದಗೊಂಡಿದೆ. ಆದರೆ ಪೈ ಅವರು ಇದನ್ನೇ 'ಬಿನ್ನಣಿಗೆಯಗುವುದಾರ ಗಾಯನದ ಝರಿಯಿಂ' ಎಂದು ಅನುವಾದಿಸಿದ್ದಾರೆ. ಇದು ಅಷ್ಟು ಸಮರ್ಪಕವಾಗಿಲ್ಲ.

2ನೆಯ ಪದ್ಯ :

ಇಲ್ಲು ಶ್ರೀಯವರು 'From the earth thou springest' ಎಂಬುದನ್ನು 'ನೆಲವೆನ್ನೊಲ್ಲದೆ ಚಿಗಿದು ಚಿಮ್ಮುತ' ಎಂದು ಅನುವಾದಿಸಿದ್ದಾರೆ. 'ನೆಲೆವನೊಲ್ಲದೆ' ಎಂಬುದು ಸರಿಯಾದ ಭಾಷಾಂತರವಲ್ಲ. ಮೂಲದಲ್ಲಿ 'ನೆಲದಿಂದ' ಎಂಬ ಸಾಮಾನ್ಯಾರ್ಥವೇ ಇದೆ. ಆದರೆ ಅನುವಾದದಲ್ಲಿರುವಂತೆ ನೀಷೇಧಾತ್ಮಕ ಅರ್ಥವಲ್ಲ. ಆದರೆ ಪೈ ಅವರ ಅನುವಾದವನ್ನು ಗಮನಿಸಿ.

ಉನ್ನತಂ ಮೇಣದರಿ
ನುನ್ನತಂ ಭುವಿಯಿಂದ

---

[13] 'ಶ್ರೀಸಿಧಿ' – ಸಂಪಾದಕರು ಜಿ.ಎಸ್.ಎಸ್.1985 ಪುಟ 220

ಎಂಬಸಾಲುಗಳು ಮೂಲಕ್ಕೆ ಹತ್ತಿರವಗಿವೆ. ಅಷ್ಟೇ ಅಲ್ಲ ಪೈಗಳು ಮೂಲದ 'Like a cloud of fire' ಎಂಬ ಸಾಲನ್ನು ಬಹಳ ಮೋಹಕವಾಗಿ 'ಕೆಂಡದುರಿ ಮೋಡದಂತೆ' ಎಂದು ಅನುವಾದಿಸಿದ್ದಾರೆ, ಆದರೆ ಶ್ರೀಯವರಾದರೋ 'ದಳ್ಳುಂ ನೆಗೆದು' ಎಂದು ಅನುವಾದಿಸಿ ಮೂಲದಿಂದ ದೂರ ಸರಿದಿದ್ದಾರೆ. ಆದರೆ ಮುಂದಿನ ಸಾಲಾದ 'And singing .... singest' ಎಂಬುದನ್ನು ಬಹಳ ಸೊಗಸಾಗಿ 'ನಲಿದು ಹಾಡುತ ಹಾಡುವೆ' ಎಂದು ಅನುವಾದಿಸಿದ್ದಾರೆ ಪೈ ಅವರು 'ಗಗನದೂಳೇರುತಿನ್ನ ಹಾಡುವೆ ಹಾಡುತಿನ್ನೇರುವ' ಎಂದು ಸಾಧಾರಣವಾಗಿ ಅನುವಾದಿಸಿದ್ದಾರೆ.

3ನೆಯ ಪದ್ಯ:

ಮುಳುಗಿದ್ದ ಸೂರ್ಯನ ಚಿತ್ರಣವನ್ನು ಷೆಲ್ಲಿ ನೀಡಿದರೆ ಶ್ರೀಯವರು ಅದನ್ನೇ ಮುಳುಗಿತ್ತಿರುವ ಸೂರ್ಯನೆಂದು ಪರಿಭಾವಿಸಿದ್ದಾರೆ. ಗೋವಿಂದ ಪೈಗಳಾದರೂ 'ನೇಸರು ಮುಳುಂಗಿದಾ' ಎಂದು ಸಮರ್ಪಕವಾಗಿ ಅನುವಾದಿಸಿದ್ದಾರೆ. 'Golden lightning' ಎಂಬುದನ್ನು 'ಕಾಂಚನದ ಮಿಂಚು' ಎಂದು ಅನುವಾದಿಸಿ ಪೈಗಳು ಭಾವಲೋಕವನ್ನೇ ಸೃಷ್ಟಿಸಿದ್ದಾರೆ ಈ ಪದ್ಯದ ಕೊನೆಯ ಸಾಲಾದ 'Like an unbodind joy whose race is just begun' ಎಂಬುದನ್ನು 'ಕಳಚಿ ದೇಹವ ದಿವಕೆ ಹರಿಯುವ ಭೋಗಿಯೋಲಾಟದವೊಲು' ಎಂಬುದಾಗಿ ಬಹಳ ನೀರಸವಾಗಿ ಅನುವಾದಿಸಿದ್ದಾರೆ. ಇಲ್ಲಿ ಪೈಗಳ ಅನುವಾದವೇ ಮೂಲಕ್ಕೆ ಹೆಚ್ಚು ಹತ್ತಿರವಾಗಿದೆ.

4ನೆಯ ಪದ್ಯ:

'Like a star ... daylight' ಎಂಬುದನ್ನು 'ತಾರೆ ನಡುಹಗಲಿಲ್ಲಿ.....ಪರಿಯೊಳು' ಎಂದು ಬಹಳ ಸುಂದರವಾಗಿ ಅನುವಾದಗೊಂಡಿದೆ. ಕೊನೆಯ ಸಾಲಂತೂ ಉತ್ತಮ ಭಾಷಾಂತರಕ್ಕೆ ಉದಾಹರಣೆಯಾಗಿದೆ.'Thou art unseen ... delight' 'ತೋರೆಯಾದರು.....ನಲಿವನು'. ಆದರೆ ಪೈಅವರ ಭಾಷಾಂತರ ನೀರಸವಾಗಿದೆ, '....ಕಾಣದೊಡೆ ಕಿವಿಯ ಹುಗು ಹುಗುತ್ತವಿದೊ ನಿನ್ನ ಕೆಲೆವ ನಲಿವು' ಎಂದು ಪೈಯವರುಅನುವಾದಿಸಿದ್ದಾರೆ.

5ನೆಯ ಪದ್ಯ:

ಮೂಲದ ಸೊಗಸನ್ನು ಶ್ರೀಯವರಾಗಲಿ ಇಲ್ಲವೇ ಪೈಗಳಾಗಲೀ ಅನುವಾದದಲ್ಲಿ ಹಿಡಿದಿಡಲು ಸಮರ್ಥರಾಗಿಲ್ಲ. ಇವರ ಅನುವದಗಳಲ್ಲಿ ಮೂಲದ ಭಾವನೆಗಳು ಸಂಗ್ರಹವಾಗಿ ಬಿಟ್ಟಿವೆ. ಮೂಲದ 'Silver sphere,' ಎಂಬುದನ್ನು 'ಬೆಳ್ಳಿಬಿಂಬ' ಎಂಬುದಾಗಿ ಶ್ರೀಯವರು ಅನುವಾದಿಸಿದ್ದಾರೆ. ಇದನ್ನೇ ಪೈ ಅವರು 'ಬೆಳ್ಳಿಯ ಬಟ್ಟಲು' ಎಂದು ಅನುವಾದಿಸಿದ್ದಾರೆ. ಪೈಗಳ ಈ ಪದ್ಯವನ್ನು ಓದಿದಾಗ ಹಳಗನ್ನಡ ಪದ್ಯವನ್ನು ಓದಿದಂತೆ ಭಾಸವಾಗುತ್ತದೆ.

6ನೆಯ ಪದ್ಯ:

ಇದರಲ್ಲಿ ಅನುವಾದ ತುಂಬ ಸೊಗಸಾಗಿ ಬಂದಿದೆ. 'The moon rains out her beams ....' ಎಂಬುದನ್ನು

ಕನ್ನಡದಲ್ಲಿ ಸಹಜವಾಗಿ 'ತಿಂಗಳು ಬೆಳಕು ಮಳೆಯನ್ನು ಕರೆದು ಎಂದು ಮೂಡಿ ಬಂದಿದೆ ಎಂಬುದು ಅಚ್ಚಗನ್ನಡದ ತಿಂಗಳು ಎಂದಾಗಿದ್ದು ಅರ್ಥಗರ್ಭಿತವಾಗಿದೆ. ಹಾಗೆಯೇ ಮೂಲದ ' When night is bare from one lonely cloud' ಎಂಬುದು 'ತೊಳೆದ ಬಾನೊಳಗೊಂಟಿ ಮೋಡದ' ಎಂದು ಅನುವಾದಗೊಂಡಿದ್ದು ಮೂಲಕ್ಕೆ ಹೆಚ್ಚು ಹತ್ತಿರವಾಗಿದೆ. ಪೈಗಳ ಅನುವಾದ ಮೂಲಕ್ಕೆ ಹತ್ತಿರವಾಗಿದ್ದರೂ ಬಹಳ ಪೆಡುಸಾಗಿದೆ.

7 ನೆಯ ಪದ್ಯ:

ಮೂಲದ ಸಾಲುಗಳು ಬಹಳ ಧ್ವನಿಯುಕ್ತವಾಗಿ ಅನುವಾದಗೊಂಡಿವೆ. '....ಧಾರೆಯೊರೆದು ಮುರುವನಿಗಳನ್ನೆರಚಿದಾ ಮಳೆಬಿಲ್ಲನಾಂತ ಮುಗಿಲು ಎಂದು ಯಥಾವತ್ತಾಗಿ ಅನುವಾದಿಸಿದ್ದಾರೆ.

8ನೆಯ ಪದ್ಯ :

ಮೂಲದಲ್ಲಿ ಕವಿಯಂದದಲಿ (like a poet) ಎಂಬ ಭಾವನೆಯಿದ್ದರೆ ಶ್ರೀಯವರು ಅದನ್ನೇ 'ಕವಿಗೆ ಹೋಲಿಸಿ' ಎಂಬುದಾಗಿ ಅನುವಾದಿಸಿದ್ದಾರೆ. ಪೈಗಳು 'ಹಾಡುವ ಕವಿಯೋ ನೀನು?' ಎಂದು ಪ್ರಶ್ನಿಸಿದ್ದಾರೆ. ಇಬ್ಬರೂ ಅನುವಾದಕರೂ ಮೂಲದಿಂದ ದೂರ ಸರಿದಿದ್ದಾರೆ. ಹಾಗೆಯೇ ಶೀಯವರು ' Singing hymns unbidden' ಎಂಬುದನ್ನು 'ತಡೆಯಲಾರದೆ ಹಾಡುತ, ಎಂದು ಅನುವಾದಿಸಿದ್ದಾರೆ ಪೈಯವರು 'ತನ್ನೊಸೆಗಳಂ ಸ್ವಚ್ಛಂದಮಾಗೆ ತಂದು ಹಾಡುವ' ಎಂದು ಅನುವಾದಿಸಿದ್ದಾರೆ. ಇಲ್ಲೂ ಕೂಡ ಈ ಇಬ್ಬರು ಸ್ವಲ್ಪಮಟ್ಟಿನ ಸ್ವಾತಂತ್ರ್ಯವಹಿಸಿದ್ದಾರೆ.

9 ನೆಯ ಪದ್ಯ:

ಶ್ರೀಯವರು 'like a high-born maiden' ಎಂಬುದನ್ನು 'ದೊರೆ ಮಗಳು' ಎಂದು ಅನುವಾದಿಸಿದ್ದಾರೆ. ಮೂಲದಲ್ಲಿಲ್ಲದ 'ಕೆಳದಿ ಸುಳಿಯದ' ಎಂಬ ಪದಗುಚ್ಛವನ್ನು ಹೊಸದಾಗಿ ಸೇರಿಸಿದ್ದಾರೆ. ಈ ಸಣ್ಣ ಬದಲಾವಣೆಯನ್ನು ಬಿಟ್ಟರೆ ಈ ಪದ್ಯ ಮೂಲಕ್ಕೆ ಹೆಚ್ಚು ಹತ್ತಿರವಾಗಿದೆ. ಪೈಯವರು ಈ ಹೆಣ್ಣನ್ನು 'ಕುಲೀನ ಕನ್ನೆ'ಯೆಂದು ಅನುವಾದಿಸಿದ್ದರೆ. ಇದೂ ಕೂಡ ಮೂಲಕ್ಕೆ ಹತ್ತಿರವಾಗಿಯೇ ಇದೆ.

10 ನೆಯ ಪದ್ಯ:

ಕವಿ ಬಾನಾಡಿಯನ್ನು ಇಲ್ಲಿ ಮಿಂಚುಹುಳಕ್ಕೆ ಹೋಲಿಸಿದ್ದಾರೆ. ಇದು ಯಥಾನುವಾದ 'Among... view' ಎನ್ನುವುದನ್ನೇ ಪೈಯವರು ಮತ್ತಷ್ಟು ಸುಂದರವಾಗಿ 'ತನ್ನೊಡಲ ಮರೆಗೊಳಿಪ ಹೂವುಲ್ಲುಗಳ ಬಾಸಣಿಯೊಳು' ಎಂದು ಅನುವಾದಿಸಿದ್ದಾರೆ.

11ನೆಯ ಪದ್ಯ:

ಮೂಲದ ಎಲ್ಲ ಭಾವಾರ್ಥಗಳು ಎಲ್ಲಿ ಇಡಿಯಾಗಿ ಮೂಡಿ ಬಂದಿವೆ.`The scent it gives` ಎಂಬುದು ಬಹಳ

ಸುಂದರವಾಗಿ 'ಸೊಗಡುಗಂಪನು ಸುರಿಸುತ' ಎಂದು ಅನುವಾದಗೊಂಡಿದೆ. ಕೊನೆಯ ಸಾಲಂತೂ ಕನ್ನಡದಲ್ಲಿ ಬಹಳ ಸಹಜವಾಗಿ ಸೊಗಸಾಗಿ ಅನುವಾದಗೊಂಡಿದೆ. ಆದರೆ ಪೈ ಅವರ ಅನುವಾದದಲ್ಲಿ 'ಗುಲಾಬಿ' ಹೂ 'ತಾವರೆ'ಯಾಗಿ ಮಾರ್ಪಟ್ಟಿದೆ. ಹೀಗೆ ಅವರು ಅದನ್ನು ಬದಲಾಯಿಸಿಕೊಂಡಿದ್ದರ ಔಚಿತ್ಯ ತಿಳಿಯದು.

12ನೆಯ ಪದ್ಯ

ಮೂಲದ ಮೊದಲು ಎರಡು ಸಾಲುಗಳು 'ಹೊಳೆವ ಗರುಕೆಯ ಮೇಲೆ....' ಎಂದು ಬಹಳ ನಿರ್ದಿಷ್ಟವಾಗಿ ಅನುವಾದಗೊಂಡಿದೆ. 'Rain awaken'd flowers' ಎಂಬುದಂತೂ 'ಮಳೆಗೆ ಕಣ್ಬಿಡುವರಳು' ಎಂದು ಮೂಲದ ಅರ್ಥಸಾಮ್ಯ ಮತ್ತು ಧ್ವನಿಸಾಮ್ಯಗಳೊಂದಿಗೆ ಅನುವಾದದಲ್ಲಿ ಮೂಡಿಬಂದಿದೆ. ಅದೇ ರೀತಿ 'The music doth surpass' ಎಂಬುದೂ ಕೂಡ 'ನಿನ್ನ ಗಾನವೇ ಮೆರೆವುದು' ಎಂದು ಯಥಾವತ್ತಾಗಿ ಅನುವಾದಗೊಂಡಿದೆ. ಆದರೆ ಪೈಗಳು ಅನುವಾದಿಸಿರುವ ಈ ಪದ್ಯ ಶ್ರೀಯವರ ಪದ್ಯದ ಮುಂದೆ ಸಪ್ಪೆಯಾಗಿದೆ.

13ನೆಯ ಪದ್ಯ

ಮೂಲದ ಸೊಗಸನ್ನು ಯಥಾವತ್ತಾಗಿ ತರಲು ಪ್ರಯತ್ನಿಸಿದ್ದರೂ ಅನುವಾದಕರು ಇಲ್ಲೊಂದು ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಸಾಮಾನ್ಯ ಹೇಳಿಕೆಯನ್ನು ಶ್ರೀಯವರು ಇಲ್ಲಿ ಪ್ರಶ್ನಾರ್ಥಕವಾಗಿ ಬದಲಾಯಿಸಿದ್ದಾರೆ. ಈ ಬದಲಾವಣೆಯನ್ನು ಬಿಟ್ಟರೆ ಅಂತಹ ಹೆಚ್ಚಿನ ಬದಲಾವಣೆ ಕಾಣಿಸುವುದಿಲ್ಲ. ಆದರೆ 2ನೆಯ ಸಾಲಿನಲ್ಲಿ 'what sweet thoughts are thine' ಎಂಬುದನ್ನು 'ಕಲಿಸು ನಮಗೀ ಹರುಷವ' ಎಂದು ಬದಲಾಯಿಸಿರುವುದರ ಔಚಿತ್ಯವೇನೊ ತಿಳಿಯದು. ಪೈಯವರು ಅನುವಾದಿಸಿರುವ ಈ ಪದ್ಯ ಮೂಲದಿಂದ ಬಹಳ ದೂರವಾಗಿದೆ, ಜೊತೆಗೆ ಸ್ವಲ್ಪಮಟ್ಟಿನ ಪೆಡಸಿನಿಂದಲೂ ಕೂಡಿದೆ.

14 ನೆಯ ಪದ್ಯ

ಇಲ್ಲಿಯೂ ಶ್ರೀಯವರ ಅನುವಾದ ಮೂಲಕ್ಕೆ ಹೆಚ್ಚು ಸಮೀಪವಾಗಿದೆ. ಮೊದಲೆರಡು ಸಾಲುಗಳು ಬಹಳ ಸೊಗಸಾಗಿ ಅನುವಾದಗೊಂಡಿವೆ. ಮೂಲದ 'But an Empty vaunt' ಎಂಬುದನ್ನು ಶ್ರೀಯವರು 'ಹುಸಿಮಯದ ಹೆಮ್ಮೆಯ ಕೊಸರಿಕೆ' ಎಂದು ಅನುವಾದಿಸಿದ್ದರೆ. ಪೈಯವರು ಅದನ್ನು ಮತ್ತಷ್ಟು ಮೋಹಕವಾಗಿ "ಬಣಗು ಹೆಮ್ಮೆಯದಲ್ಲ" ಎಂದು ಅನುವಾದಿಸಿದ್ದಾರೆ. ಪೈರವರ ಈ ಸಾಲು ಮೂಲಕ್ಕೆ ಯಥಾರ್ಥವಾಗಿದೆ.

15 ನೆಯ ಪದ್ಯ :

ಶ್ರೀಯವರ ಮತ್ತು ಪೈಯವರ ಈ ಪದ್ಯದ ಅನುವಾದಗಳು ಮೂಲಕ್ಕೆ ಹೆಚ್ಚು ಹತ್ತಿರವಾಗಿವೆ. ಮೂಲದ 'What fields, or waves, or mountains?' ಎಂಬುದನ್ನು ಶ್ರೀಯವರು 'ಆವ ತೆರೆಗಳೊ, ಬಯಲೊ, ಬೆಟ್ಟವೊ?'

ಎಂದು ಸ್ವಲ್ಪ ಮಟ್ಟಿಗೆ ವಿಷಯ ಸ್ಥಾನಪಲ್ಲಟ ಮಾಡಿದ್ದರೆ, ಪೈಗಳು 'ಯಾವ ಹೊಲವೊ ಯಾವಲೆಯೊ ಮಲೆಯೊ?' ಎಂದು ಬಹಳ ಸುಂದರವಾಗಿ ಅನುವಾದಿಸಿದ್ದಾರೆ. ಒಟ್ಟಿನಲ್ಲಿ ಈ ಪದ್ಯ ಇಬ್ಬರಲ್ಲಿಯೂ ಬಹಳ ಚೆನ್ನಾಗಿ ಅನುವಾದಗೊಂಡಿದೆ ಎಂದು ಹೇಳಬಹುದು.

16 ನೆಯ ಪದ್ಯ:

ಈ ಪದ್ಯವನ್ನಂತೂ ಶ್ರೀಯವರು ತುಂಬ ಸೊಗಸಾಗಿ ಕನ್ನಡಿಸಿದ್ದಾರೆ. ಮೂಲದಲ್ಲಿರುವಂತೆಯೇ ಕನ್ನಡದಲ್ಲೂ ಪ್ರಾಸವನ್ನು ಉಳಿಸುವ ಕಾರ್ಯವನ್ನು ಕೈಗೊಂಡಿದ್ದಾರೆ. ಸಂದರ್ಭಕ್ಕೆ ತಕ್ಕಂತೆ ಪದಗಳೂ ಒಂದನ್ನೊಂದು ಅನುಸರಿಸಿ ಬಂದಿವೆ. ಓದಿಸಿಕೊಂಡು ಹೋಗುವ ಗುಣದ ಜೊತೆಗೆ ಲಯ ಮಾಧುರ್ಯ ಕೂಡ ಬಂದಿದೆ. ಆದರೆ ಪೈಗಳ ಈ ಪದ್ಯದ ಅನುವಾದ ತುಂಬ ಪೆಡುಸಾಗಿದೆ. ಉದಾ: ಕೊನೆಯ ಸಾಲನ್ನು ಶ್ರೀಯವರು 'ಒಲಿವೆ___ ತಿಳಿಯದು' ಎಂದು ಅನುವಾದಿಸಿದ್ದರೆ ಇದ್ದನ್ನೇ ಪೈಗಳು 'ನೀಂ ತಿಳಿಯೇ ಕೂರ್ಮೆಯುಮ್ಮಳಿಕೆಯಳಲಂ' ಎಂದು ಅನುವಾದಿಸಿದ್ದಾರೆ.

17 ನೆಯ ಪದ್ಯ

ಈ ಪದ್ಯದ ಒಟ್ಟರ್ಥ ಅನುವಾದದಲ್ಲಿ ಮೂಡಿದ್ದರು ಮೂಲದಲ್ಲಿ 'Waking of asleep' ಎಂಬ ಉನ್ನತ ಭಾವನೆಯೇ ಅನುವಾದದಲ್ಲಿ ಮಾಯವಾಗಿರುತ್ತಿದೆ. ತರ್ಕದ ಪ್ರಶ್ನೆಯೇ ಮೂಲದಲ್ಲಿ ಏಳದಿದ್ದಾಗ ಇಲ್ಲಿ 'ತರ್ಕಿಸಿ' ಎಂಬುದನ್ನು ಶ್ರೀಯವರು ಸೇರಿಸಿರುವ ಔಚಿತ್ಯವೇನೋ ತಿಳಿಯದು. ಮೂಲದಲ್ಲಿ 'ನಾವು ಮರ್ತ್ಯರು' ಕನಸು ಕಾಣುವುದಕ್ಕಿಂತ 'ಮರಣ'ವೇ ಹೆಚ್ಚು ಸತ್ಯದಿಂದ ಮತ್ತು ಆಳವಾಗಿ ವಸ್ತುಗಳನ್ನು ಪರಿಭಾವಿಸಬಲ್ಲದು ಎಂಬ ಆಶಯವಿದ್ದರೆ, ಅನುವಾದದಲ್ಲಿ ಇದು ಬೇರೆಗತಿಯನ್ನು ಹಿಡಿದಂತೆ ತೊರುತ್ತದೆ. ಕೊನೆಯ ಸಾಲು ಉತ್ತಮವಾಗಿ ಅನುವಾದಗೊಂಡಿದೆ. ಪೈಯವರ ಅನುವಾದವನ್ನು ಗಮನಿಸಿದಾಗ ಅವರ ಅನುವಾದವು ಹೆಚ್ಚೂ ಕಡಿಮೆ ಹೀಗೆಯೇ ಇದೆ. ಮೊದಲನೆಯ ಸಾಲುಗಳನ್ನು ಪೈಯವರು 'ತನುವಳಿನ ನಾವೆಂದೂ, ಕನಗಾಂಬ ವಿಷಯದಿಂ' ಎಂದು ಅಷ್ಟೇ ಅರ್ಥವಾಗದ ರೀತಿಯಲ್ಲಿ ಭಾಷಾಂತರಿಸಿದ್ದಾರೆ.

18 ನೆಯ ಪದ್ಯ:

ಮೂಲದ ಮೊದಲೆರಡು ಸಾಲುಗಳು ಶ್ರೀಯವರ ಅನುವಾದದಲ್ಲಿ ಯಥಾವತ್ತಾಗಿ ಅನುವಾದಗೊಂಡಿರುವುದರ ಜೊತೆಗೆ ಮೋಹಕವಾಗಿವೆ, ಬಹಳ ಸೊಗಸಾಗಿವೆ, ಸಹಜವಾಗಿವೆ. ಮೂಲದ 'our sweetest.. thought' ಎಂಬುದನ್ನು ಶ್ರೀಯವರು 'ನೊಂದಗೋಳನು ..ಕವನಗಳೆಮ್ಮೊಳು' ಎಂದು ಭಾಷಾಂತರಿಸಿರುವುದು ಅಷ್ಟೇನೂ ಹಿತವಾಗಿಲ್ಲ. ಮೂಲದ ಧ್ವನಿಯನ್ನು ಅದು ಅಷ್ಟಾಗಿ ಪ್ರತಿಧ್ವನಿಸುವುದಿಲ್ಲ. ಪೈ ಯವರ ಅನುವಾದ ಕೂಡ ಅಷ್ಟೇ ನೀರಸವಾಗಿದೆ. ಇದನ್ನೇ ಅವರು 'ಮನಂ ಸಂದ ಬೇವಸವ ಬಗೆ ತಂದೊರೆವುವೆಮ್ಮ ಸ್ವಾದಿಷ್ಠಗೀತಂ' ಎಂದು ಅನುವಾದಿಸಿದ್ದಾರೆ.

19 ನೆಯ ಪದ್ಯ:

ಇಲ್ಲಿಯೂ ಕೂಡ ಶ್ರೀಯವರ ಅನುವಾದ ಮೂಲಕ್ಕೆ ಹತ್ತಿರವಾಗಿದೆ.'I know not …near' ಎಂಬುದನ್ನು ಸೊಗಸಾಗಿ ಅನುವಾದಿಸಿದ್ದರೆ. ಪೈಯವರು ಇದನ್ನು '__ ತಿಳಿಯೆ ನಾನೆಂತಕಟ ನಿನ್ನ ಹಳಸದೀ ನಲಿವಿನುಲಿವಿನ ಸನಿಹಕೆ' ಎಂದು ಅನುವಾದಿಸಿದ್ದಾರೆ. ಇದು ಮೂಲದಿಂದ ತುಸು ಭಿನ್ನವಾಗಿದೆ. ಶ್ರೀಯವರು '__ ಭೂಮಿಗೆ ಬಂದೆವು' ಎಂಬ ಮೂಲದಲ್ಲಿಲ್ಲದ ಭಾವವನ್ನು ಅನುವಾದದಲ್ಲಿ ಹೊರಡಿಸುತ್ತದೆ. ಈ 'ಧ್ವನಿ'ಯ ಔಚಿತ್ಯವೇನೋ ಅರ್ಥವಾಗುವುದಿಲ್ಲ.

20 ನೆಯ ಪದ್ಯ:

ಮೂಲದಲ್ಲಿ 'Better than …. found' ಎಂದಿದ್ದರೆ ಅದನ್ನು ಶ್ರೀಯವರು 'ಕವನ ಕೋಶದೊಳಿರುವ' ಎಂದು ಅನುವಾದಿಸಿ ಮೂಲದ ಅರ್ಥ ಛಾಯೆಯನ್ನೇ ಬದಲಾಯಿಸಿದ್ದಾರೆ. ಪೈಯವರು 'ಕವಿತೆಯೊಳಗವಿತಿರುವ' ಎಂದು ಅನುವಾದಿಸಿದಾರೆ.

ಕೊನೆಯ ಪದ್ಯ:

ಈ ಪದ್ಯ ಮೂಲಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಮೂಲದ ಭಾವಗಳನ್ನು ಇಲ್ಲೂ ಕೂಡ ಶ್ರೀಯವರು ಸ್ವಲ್ಪಮಟ್ಟಿಗೆ ಬದಲಾಯಿಸಿದ್ದಾರೆ. ಈ ಬದಲಾವಣೆಯ ಬಗ್ಗೆ ವಿವರಗಳಿಲ್ಲ. ಈ ಪದ್ಯದ 'The world should listen…now' ಎಂದು ಕವಿಲೋಕವೂ ತಾನು ಹೇಳುವುದನ್ನು ಕೇಳಬಯಸಲಿ ಎಂದು ಹೇಳುವ ಉಪದೇಶದ ಮಾತನ್ನು ಶ್ರೀಯವರು ಬಹಳ ಯಾಂತ್ರಿಕವಾಗಿ 'ಈಗ ಕೇಳುವೆ … ಕೇಳದೆನ್ನನು' ಎಂದು ತೀರಾ ಸಪ್ಪೆಯಾಗಿ ಅನುವಾದಿಸಿದ್ದಾರೆ. ಆದರೆ ಇದನ್ನೆ ಪೈಯವರು ಬಹಳ ಅರ್ಥಪೂರ್ಣವಾಗಿ '… ತಿರೆಯದು ಕೇಳಿ ಕಿವಿದೆರೆವುದಂದೀಗಳಾಂ ಕೇಳುವಂತೆ' ಎಂಬು ಭಾಷಾಂತರಿಸಿದ್ದಾರೆ.

'ಬಾನಾಡಿ' ಕವನವನ್ನು ತೌಲನಿಕವಾಗಿ ಇಂಗ್ಲಿಷ್ ಮೂಲದೊಡನೆ ಹೋಲಿಸಿ ನೋಡಿದಾಗ ಅನುವಾದ ಸಿದ್ಧಿ ಈ ಕವನದಲ್ಲಿ ದೊರೆತಿಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ ಮೂಲದೊಡನೆ ಹೋಲಿಸದೇ ಪ್ರತ್ಯೇಕವಾಗಿ ಈ ಕವನವನ್ನು ಓದಿದಾಗ ಕನ್ನಡದಲ್ಲಿ ಸಹಜವಾಗಿ ರಚಿತವಾದ ಸ್ವತಂತ್ರಕವನವೇನೋ ಎಂಬಷ್ಟರ ಮಟ್ಟಿಗೆ ಸಹಜವಾಗಿದೆ. ಕವನ ನಡುನಡುವೆ ಉತ್ತಮ ಭಾಷಾಂತರ ಒಪ್ಪುವಂತೆ ನಡೆದಿದ್ದು ಶ್ರೀಯವರು ಇದನ್ನು ಇನಷ್ಟು ಪರಿಷ್ಕರಿಸಿದ್ದರೆ ಬಹುಶಃ ಮೂಲಕ್ಕೆ ಇದು ಮತ್ತಷ್ಟು ಹತ್ತಿರ ಸರಿಯುತ್ತಿತ್ತೆಂದು ತೋರುತ್ತದೆ.

ಇಷ್ಟಾಗಿಯೂ ಈ ಕವನವನ್ನು ಕುರಿತಂತೆ ಇರುವ "ಇದರಲ್ಲಿನ ಪದ ಪ್ರಯೋಗ ಹಾರುವ ಹಕ್ಕಿಯ ಹಾಡುತ ಏರುವ ಹಕ್ಕಿಯ ಏರುತ ಹಾಡುವ ಹಕ್ಕಿಯ ಒಂದೊಂದು ಚಲನೆಯನ್ನು ಕಾವ್ಯವಾಗಿಸಿದೆ. ವಾಗರ್ಥಪ್ರತಿಪತ್ತಿಯ

ಸಾರ್ಥಕ್ಯವನ್ನು ಈ ಕವನದ ಸಾಲು ಸಾಲಿನಲ್ಲಿಯೂ ಕಾಣಬಹುದು"[14] ಈ ಅಭಿಪ್ರಾಯವು ಲಕ್ಷ್ಯಾರ್ಹ, ಈ ಕವನ ತ್ರಿಮಾತ್ರ ಲಯದಲ್ಲಿ ಇದೆ.

**ಮಳೆಬಿಲ್ಲು**

ವರ್ಡ್ಸ್‌ವರ್ತ್‌ನ 'My heart leaps up when I behold' ಕವಿತೆಯ ಅನುವಾದ 'ಮಳೆಬಿಲ್ಲು'. ವರ್ಡ್ಸ್‌ವರ್ತ್ ಈ ಕವಿತೆಗೆ ಮಳೆಬಿಲ್ಲನ್ನು ಕಂಡು ತನಗಾದ ಅನುಭವದ ಔನ್ನತ್ಯವನ್ನು ಬಿಂಬಿಸುವ ಶೀರ್ಷಿಕೆ ನೀಡಿದ್ದರೆ. ಶ್ರೀಯವರು ಕವನದ ವಸ್ತುವಾದ 'ಮಳೆಬಿಲ್ಲ'ನ್ನೇ ಕವನದ ಶೀರ್ಷಿಕೆಯನ್ನಾಗಿಸಿದ್ದಾರೆ. ಮೂಲದಂತೆಯೇ ಇಲ್ಲಿಯೂ 9 ಸಾಲುಗಳಿವೆ. ಈ 9 ಸಾಲುಗಳಂತೂ ಮೂಲಕ್ಕೆ ಸಂಪೂರ್ಣವಾಗಿ ಹೇಳಿ ಮಾಡಿಸಿದಂತಿದೆ. ಮೂಲದಲ್ಲಿರುವ ಯಾವುದೋ ಅವ್ಯಕ್ತ ಭಾವೋನ್ಮಾದ ಇಲ್ಲಿ ಹೊಮ್ಮಿ ಸೊಗಸಾಗಿದೆ. ಪ್ರಕೃತಿಯ ಬಹು ಅದ್ಭುತ ಕ್ರಿಯೆಯೊಂದರ ಕುರಿತ ಆಶ್ಚರ್ಯವು ಇಲ್ಲಿ ಎಡೆಪಡೆದಿದೆ. 'ಮನುಜನಿಗೆ ಮಗು ತಂದೆ' ಎಂಬ ತತ್ತ್ವವನ್ನು ಕನ್ನಡಿಗರಿಗೆ ಸಾರಿದೆ. 'ಅಂತಿರದೆ, ಸಾಲು ಬರಲಂದೆ' ಎಂಬ ಸಾಲು ಮೂಲದಲ್ಲಿ ಕಾಣದ ನಿಶ್ಚಯವನ್ನು ಬಿಂಬಿಸಿದೆ. ಕ್ಷಣಿಕವಾದರು ಇದಷ್ಟುದಿನ ತನ್ನ ಸೊಗಸಿನಿಂದ ಕಾಣುವ ಹೃನ್ಮನಗಳಿಗೆ ಆನಂದವನ್ನುಂಟುಮಾಡಿ ಸಾರ್ಥಕ್ಯ ಪಡೆಯುವ ಧ್ವನಿ ಶ್ರೀಯವರಲ್ಲಿ ಔಚಿತ್ಯ ಪೂರ್ಣವಾಗಿ ಹೊಮ್ಮಿದೆ. ಕೊನೆಯ ಮೂರು ಸಾಲುಗಳಲ್ಲಿ ಪ್ರಕೃತಿಯೊಂದಿಗೆ ಮುಗ್ಧತೆಯನ್ನು ಬೆಸೆದು ಸಂಕುಚಿತ ಮನೋಭಾವವನ್ನು ಕಳೆದುಕೊಳ್ಳುವ ತುಡಿತ ಭರವಸೆಗಳು ಹೊಮ್ಮಿವೆ ಈ ಕವನ ಪಂಚಮಾತಾಲಯದಲ್ಲಿದೆ.

**ಇರುಳದೇವಿ**

ಪರ್ಸಿ ಬಿಷೆ ಷೆಲ್ಲಿಯ 'To the night' ಕವನದ ಅನುವಾದ 'ಇರುಳದೇವಿ'. ಮೂಲದಂತೆಯೇ ಇಲ್ಲಿಯೂ 7 ಸಾಲುಗಳ 5 ಪದ್ಯಗಳಿವೆ. ಮೂಲದ ಬಹಳ ಸಾಮಾನ್ಯರ್ಥವನ್ನು ಕೊಡುವ ಶೀರ್ಷಿಕೆ ಶ್ರೀಯವರಲ್ಲಿ ಬಹಳ ಅರ್ಥವತ್ತಾಗಿ 'ಇರುಳದೇವಿ' ಎಂದು ಕನ್ನಡೀಕರಣಗೊಂಡಿದೆ. ಕವನದ ಭಾವಗತಿಯನ್ನು ಅನುಸರಿಸುವ ಛಂದಸ್ಸನ್ನು ಶ್ರೀಯವರು ಆರಿಸಿಕೊಂಡಿಲ್ಲ ಎನಿಸುತ್ತದೆ. ಅಲ್ಲದೆ ಎಷ್ಟೋ ಸೊಗಸಾದ ಮಾತುಗಳನ್ನು "The wander o'er city, end sea and land, touching all with thine opiate wand", Thy sweet child sleep, the filmy –eyed, murmur'd like a noonilide bee", ಇವುಗಳನ್ನು ಅವು ನಿರೀಕ್ಷಿಸುವ ಸೊಗಸಿನೊಂದಿಗೆ ಅನುವಾದ ಮಾಡಿಲ್ಲ. "ಸುತ್ತು ಸುಳಿದು, ನಾಡಿನಲ್ಲಿ ಮಮ್ಮುತಳಿದು, ಶಂಕೆಯಳಿದು ಅರಸುವೆನೆಗೆ ಬಾ", "ಕಣ್ಣ ಹೊಸಕಿ, ಜೇನ ಮುಸುಕಿ" ಎಂದನುವಾದವಾಗಿವೆ.

ಪಾಶ್ಚಾತ್ಯರಿಗೆ ಪಗಲು, ರಾತ್ರಿ, ಮಳೆ ಸೂರ್ಯ ಎಲ್ಲವೂ ಕೇವಲ ಸಹಜ ಪ್ರಕ್ರಿಯೆಗಳು. ಆದರೆ ಪೌರ್ವಾತ್ಯರಿಗೆ ಅದರಲ್ಲೂ ಭಾರತೀಯ ಮನಸ್ಸುಗಳು ಮೊದಲಿನಿಂದಲೂ ಎಲ್ಲದರಲ್ಲೂ ದೈವತ್ವವನ್ನು ಕಾಣುವ ದೃಷ್ಟಿಕೋನಕ್ಕೆ ಬೆಲೆಯಿತ್ತಿವೆ. ಇದು ಕವನದ ಶೀರ್ಷಿಕೆಯಲ್ಲೇ ಗೋಚರವಾಗುತ್ತದೆ.

---

[14] ಜಿ.ಎಸ್.ಎಸ್(ಸಂ): ಶ್ರೀನಿಧಿ ಪುಟ 185

ಉಳಿದ ಪದ್ಯಗಳಲ್ಲಿ ಮೂಲದ ಭಾವಗತಿಯನ್ನು ಸ್ವಲ್ಪಮಟ್ಟಿಗೆ ಕಾಣಬಹುದು. ಅನುವಾದವು ಇಲ್ಲಿ ' ವಿಧೇಯತೆ'ಯ ಗುಣದಿಂದಾಗಿ ಸೊಗಸಾಗಿದೆ. ಈ ಕವನ ತ್ರಿಮಾತ್ರಾಲಯದಲ್ಲಿದೆ. ಉದಾ: ಬೇಗ, ಪಡುವ, ತೆರೆಯು ತುಳಿದು ಇರುಳ ದೇವಿ ಬಾ 'ಬಾ' ಅಕ್ಷರ ಪ್ಲುತದ ಬೆಲೆಯನ್ನು ಪಡೆದಿದೆ.

**ವಸಂತ**

ಥಾಮಸ್ ನ್ಯಾಶ್ ಕವಿಯ ' Spring' ಕವಿತೆಯ ಅನುವಾದ ಈ ಕವನ. ಮೂಲದಂತೆಯೇ ಇಲ್ಲಿಯೂ 4 ಸಾಲುಗಳ 3 ಪದ್ಯಗಳಿವೆ. ಆದರೆ ಶ್ರೀಯವರಲ್ಲಿ ಕೊನೆಗೆ ಎರಡು ಸಾಲುಗಳು ಅಧಿಕವಾಗಿ ಬಂದಿವೆ. ಈ ಸಾಲುಗಳು ಮೂಲದಲ್ಲಿಲ್ಲದ ಭಾವೋದ್ವೇಗವನ್ನು ಸ್ಫುರಿಸುತ್ತವೆ.

'Sweet spring' ಎಂಬುದು ಅನುವಾದದಲ್ಲಿ ಮಾಯವಾಗಿದೆ. 'then maids dance in a ring ಎಂಬುದಕ್ಕೆ 'ಹೆಣ್ಗಳ ಕುಣಿಸುತ ನಿಂದ' ಎಂದನುವಾದವಾಗಿದ್ದು ಅನುವಾದ ಎಡವಿದೆ ಎನ್ನಬಹುದು. 'ಹಕ್ಕಿಗಳುಲಿಗಳೆ ಚೆಂದ' ಎಂಬುದು ಸಮರ್ಪಕವಾಗಿ ಅನುವಾದವಾಗಿಲ್ಲ. ಹಕ್ಕಿಗಳಿಗೆ ಉಲಿಯಲು ಪ್ರೇರಣೆಯಿತ್ತ ಎಂಬರ್ಥ ಮೂಲದಲ್ಲಿದ್ದು ಅನುವಾದದಲ್ಲಿ ಇಲ್ಲವಾಗಿದೆ.

2 ನೆಯ ಪದ್ಯ:

ಮೂಲದ ಮೊದಲೆರಡು ಸಾಲುಗಳಿಗೆ ಶ್ರೀಯವರು ಹೊಸ ಸಾಲುಗಳನ್ನೆ ಸೇರಿಸಿದ್ದಾರೆ. ಆದರೆ ಮೂಲದ ಭಾವವೇ ಇಲ್ಲಿಲ್ಲ. ಮೂಲದ 3 ನೆಯ ಪದ್ಯದ 2 ನೆಯ ಸಾಲಿನ 'young lovers meet' ಎಂಬುದು ಇಲ್ಲಿಯ 2 ನೆಯ ಸಾಲಿನಲ್ಲಿ ವರ್ಗಾವಣೆಗೊಂಡಿದೆ.

3 ನೆಯ ಪದ್ಯ:

ಮೊದಲ ಸಾಲಿನಲ್ಲಿ ನೆಲವು ಹೊಸ ಸವಿಯನ್ನು ಉಣಲು ಸಿದ್ಧವಾಗಿ, ತನ್ನನ್ನು ಸ್ಪರ್ಶಿಸುವ ಪಾದಗಳಿಗೆ ಮುತ್ತಿಡಲು ಅಣಿಯಾಗಿ ನಿಂತಿರುವ ಭಾವವೇ ಹೊಮ್ಮದೇ ಮೂಲಕ್ಕೆ ದೂರವಾಗಿದೆ. 2 ನೆಯ ಸಾಲಿನ ಸಂಪೂರ್ಣವಾಗಿ ಮೂಲಕ್ಕೆ ವಿಧೇಯವಾಗಿಲ್ಲ ಮೂಲದಲ್ಲಿ ವಸಂತಕಾಲವು ಯುವಪ್ರೇಮಿಗಳ ಮಿಲನಕ್ಕೆ , ಮನೆ ಮಡದಿಯರಿಗೆ ಹೊಸ ಉಲ್ಲಾಸ ಜೀವನೋತ್ಸಾಹವನ್ನು ತರುತ್ತದೆ ಎಂಬ ಭಾವ ಅನುವಾದದಲ್ಲಿ ಮಾಯವಾಗಿದೆ. 3ನೆಯ ಸಾಲು ಮೂಲಕ್ಕೆ ಸಮೀಪವಾಗಿದೆ.

ವಸಂತ ಋತುವಿನ ಆಗಮನದೊಂದಿಗೆ ಮೊದಲಿಡುವ ಬದಲಾವಣೆಯ ಚಿತ್ರಕ್ಕೆ ಬದಲಾಗಿ, ಪ್ರಕೃತಿಯಲ್ಲಿ ವಸಂತ ಎಸಗುವ ಅದ್ಭುತ ಪವಾಡಗಳ ಚಿತ್ರಣ ಇಲ್ಲಿದೆ, ಅಲ್ಲಿ ಪ್ರಕೃತಿಯ ಶಕ್ತಿ ಹಿನ್ನೆಲೆಯಾಗಿದ್ದರೆ, ಇಲ್ಲಿ ವ್ಯಕ್ತಿಯಾಗಿ ಮಾಂತ್ರಿಕನಾಗಿ ಮೂಡಿ ನಿಂತಿದೆ. ಇಲ್ಲಿ ಮೂಲದಲ್ಲಿ ಕಾಣದ ಉತ್ಸಾಹ ಪೂರ್ಣವಾದ ನಡೆ ಸ್ತುತ್ಯರ್ಹ.

'Cuckoo' ಎನ್ನುವುದು ಒಂದು ಹಕ್ಕಿಯಾಗಿದ್ದು, ಅದು ತನ್ನ ಮೊಟ್ಟೆಗಳನ್ನು ಇನ್ನೊಂದು ಹಕ್ಕಿಯ

ಗೂಡಿನಲ್ಲಿಡುತ್ತದೆ. ಆದರೆ ಇಲ್ಲಿಯ 'cuckoo, jug, jug,pu-we,to - witta –woo' ಈ ಶಬ್ದಗಳು ಪಕ್ಕಿಗಳ ಉಲುಹುಗಳೇನೊ ಎಂದೆನಿಸುತ್ತದೆ. 'cuckoo' ಎಂಬುದು 'ಕೂವೂ' ಎಂದು ಮಾತ್ರ ಬದಲಾದೆ. ಈ ಅನುಕರಣಾತ್ಮಕ ಶಬ್ದಗಳೇ ಇಡೀ ಪದ್ಯಕ್ಕೆ ಸೊಗಸನ್ನು ತಂದಿಟ್ಟಿವೆ. ಈ ಶಬ್ದಗಳಿಂದ ಇಡೀ ಕವನದಲ್ಲಿ ಜೀವಂತಿಕೆ ಮನೆಮಾಡಿದೆ.

ವಸಂತ ವೈಭವದ ವರ್ಣನೆ ಕವನದಲ್ಲಿ ಯಶಸ್ವಿಯಾಗಿದೆ. ವಸಂತನನ್ನು ಕುರಿತು ನ್ಯಾಶ್‌ನನ್ನು ಶ್ರೀಯವರು ಅನುಕರಣೆ ಮಾಡಲು ಯತ್ನಿಸಿದ್ದರೂ ಅದು ಸ್ವರಚಿತ ಕವನದಂತೆ ಭಾಸವಾಗುತ್ತದೆ. ಅನುವಾದದ ಮೂಲತತ್ವವಾದ 'ವಿಧೇಯತೆ'ಯನ್ನು ಇಲ್ಲಿ ಶಬ್ದಶಃ ಬಳಕೆಯಾಗದಿದ್ದರೂ ಕನ್ನಡದ ಸ್ವಾತಂತ್ರ್ಯವನ್ನು ಕವಿ ಒದಗಿಸಿಕೊಂಡಿದ್ದಾರೆ.

**ಹೊಳೆಕೆರೆ**

ವರ್ಡ್ಸ್‌ವರ್ತ್‌ನ ' Written in March ಕವನದ ಅನುವಾದ 'ಹೊಳೆಕೆರೆ'. ಪದ್ಯದ ಮೊದಲ ಸಾಲಿನಲ್ಲಿ 'Foot of Brother's water' ಎಂಬುದಕ್ಕೆ ಮಳೆಗಾಲಕ್ಕಿಂತ ಮೊದಲು ಬರುವ ಬೇಸಿಗೆಕಾಲದಲ್ಲಿ ನಡೆದ (ಮಳೆಯ ಅಣ್ಣ ಬೇಸಿಗೆ) ಘಟನೆ ಈ ಪದ್ಯದ ವಸ್ತುವನ್ನೇ ಲಕ್ಷಿಸಿಲ್ಲ ಎನಿಸುತ್ತಿದೆ.

ಮೊದಲ ಪದ್ಯದಲ್ಲಿ ಮೂರನೆಯ ಸಾಲು ಮೂಲ ಕವನಕ್ಕೆ ಹತ್ತಿರವಾಗಿರುವುದನ್ನು ಬಿಟ್ಟರೆ ಉಳಿದೆಲ್ಲೆಡೆ ಕವಿ ಮೂಲವನ್ನು ಅನುಸರಿಸಿಯೇ ಇಲ್ಲ.

> "ಕೊರಳೆತ್ತಿ, ಮೈಮರೆತು, ಪರಡಿದೆಳಹಸುರಾದ
> ಗರಕೆಯನು ಮೇಯದೆಯೆ ಮುಂದೆ ಇಹುದು"

"ಈ ಚರಣಗಳು ಅಂದವಾಗಿದ್ದರೂ, ಇವು 'False to wordsworth' ಎಂದು ಶ್ರೀಯವರೇ ಟೀಕಿಸಿದ್ದುಂಟು'' ಎಂದು ತೀ.ನಂ.ಶ್ರೀಯವರು ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಪದ್ಯದ ಶೀರ್ಷಿಕೆ ಮಾತ್ರವಲ್ಲದೇ ಇಡೀ ಪದ್ಯದ ಅನುವಾದವು ಮೂಲದ ಭಾವವನ್ನೇ ಗ್ರಹಿಸಿಲ್ಲ. ಮೂಲದಲ್ಲಿ ಯಾವ ಕೆರೆಯ, ಹೊಳೆಯ ವರ್ಣನೆಯೂ ಇಲ್ಲ. ಅಲ್ಲಿರುವುದು ವಸಂತಕಾಲದಲ್ಲಿ ಇಡೀ ಪ್ರಕೃತಿಯ ಚರಾಚರ ವಸ್ತುಗಳಲ್ಲೆಲ್ಲ ಉಂಟಾಗುವ ಬದಲಾವಣೆಗಳ ವರ್ಣನೆ, ಪ್ರೇಮಿಗಳ ಮಿಡುಕಾಟ, ಆಗಸದ ನೀರವತೆ, ಮಳೆಯ ಅನಿಶ್ಚಿತತೆ, ಚಿಗುರುಂಡ ಪಕ್ಷಿಗಳ ಇನಿದನಿಯ ಕಲರವ, ತುಂಡು ಮುಗಿಲುಗಳ ಚೆಲ್ಲಾಟ ಇವುಗಳಾವುದರ ಕಡೆಗೂ ಶ್ರೀಯವರು ಗಮನಹರಿಸಿಲ್ಲ. ಮೂಲದ ಭಾವ-ರಸ-ಧ್ವನಿ. ಔಚಿತ್ಯಗಳು ಇಲ್ಲಿಲ್ಲ. "ಅದು ಮೂಲವನ್ನು ಪೂರ್ತಿ ಅನುಸರಿಸಿಲ್ಲ. ಅದರ ಛಂದಸ್ಸು ಹೊಸದಲ್ಲ. ಆದರೂ ಪದಗಳ ಮತ್ತು ಶೈಲಿಯ ಸೌಂದರ್ಯವೂ ಭಾವ ಪ್ರಚೋದನ ಶಕ್ತಿಯೂ ನಮ್ಮ ಮನಸ್ಸನ್ನು ಸೆಳೆಯುತ್ತದೆ."[15]

---

[15] ಬಿ.ಎಂ.ಶ್ರೀ – ಎ.ಎನ್. ಮೂರ್ತಿರಾಯರು. ಪುಟ 50

## ಪ್ರೇಮಗೀತೆಗಳು

ಪ್ರೇಮ ಒಂದು ಪವಿತ್ರಮಯವಾದ ಮಧುರ ಭಾವನೆ. ನಿಸ್ವಾರ್ಥ, ತ್ಯಾಗ, ಕರ್ತವ್ಯಪರತೆ, ಸೇವಾಮನೋಭಾವ ಈ ಮಾನವೀಯ ಮೌಲ್ಯಗಳೊಂದಿಗೆ ಮಿಳಿತವಾಗಿರುವ ಆತ್ಮ ಸಂಸ್ಕಾರ. 'ಭಾರತೀಯತೆ'ಯಲ್ಲಿ ಇದು ಸರ್ವಸ್ವ ಸ್ವರೂಪದ್ದಾಗಿದೆ. ಮಾನವನ ಬದುಕನ್ನು ಹಸನುಗೊಳಿಸಲಿರುವ ದೈವದ ಪ್ರೇಮದ ಕಾಣಿಕೆಯೇ ಪ್ರೇಮ. ಅದು ಅಮರಸ್ವರ; ಅಜರಾಮರ. ಒಲವಿಗೆ ಒಲಿಯದ ಹೃದಯವೊಂದು ಇರಲು ಸಾಧ್ಯವಿಲ್ಲ.

ಪ್ರೇಮವಿಲ್ಲದ ಅಥವಾ ಪ್ರೀತಿಯ ಛಾಯೆಯೇ ಇಲ್ಲದ ಕಿರುಕವನವೊಂದು ಜಗತ್ತಿನ ಸಾಹಿತ್ಯದಲ್ಲಿ ಇಲ್ಲವೇ ಇಲ್ಲ. ಕವಿಗಳ, ವಿದ್ವಾಂಸರ, ಲೇಖಕರ ರಚನೆಗಳಲ್ಲಿ ಒಂದೊಮ್ಮೆಯಾದರೂ ಇಣುಕಿ, ಮಿಂಚಿ ಸೊಗಸನ್ನು ಬೀರದೆ ಇರದು. ಹಾಗೆಯೇ ಶ್ರೀಯವರ ಇಂಗ್ಲಿಷ್ ಗೀತಗಳಲ್ಲಿ ಪ್ರೇಮಗೀತೆಗಳೂ ಇವೆ. ಮತ್ತು ಸೂಕ್ಷ್ಮವಾಗಿ ಗಮನಿಸಿದರೆ ಈ ಸಂಕಲನದ ಒಟ್ಟು 60 ಕವನಗಳಲ್ಲಿ ಪ್ರೇಮಗೀತೆಗಳೇ ಅಧಿಕವಾಗಿವೆ.

### ಹೆದರುವೆನು ನಾ ನಿನ್ನ ಬಿನ್ನಾಣಕೆಲೆ ಹೆಣ್ಣೆ

ಷೆಲ್ಲಿಯ 'To' ಕವನದ ಅನುವಾದವಿದು. 4 ಸಾಲುಗಳುಳ್ಳ 2 ಪದ್ಯಗಳನ್ನು ಉಭಯ ಕವನಗಳಲ್ಲಿ ಕಾಣಬಹುದು. ಅನುವಾದದಲ್ಲಿ ಭಾವವನ್ನು ಗ್ರಹಿಸಿದ್ದರೂ ಧ್ವನಿ ಮಾತ್ರ ಮಾಸಿ ಹೋದಂತೆ ತೋರುತ್ತದೆ. 'Gentle maiden' ಎಂಬುದು ಬಹಳ ಧ್ವನಿ ಪೂರ್ಣವಾಗಿದೆ. ಅದರಲ್ಲಿಯಾ 'Gentle maiden' ಬಗ್ಗೆ ಆತ 'I fear' ಎಂದು ಹೇಳುವ ರೀತಿ ರಮ್ಯವಾಗಿದೆ. ಕನ್ನಡದಲ್ಲಿ ಈ ಧ್ವನಿ ಕಾಣುವುದಿಲ್ಲ. ' Thou needs not fearmine ಎಂದು ಮೂಲದಲ್ಲಿರುವುದು ಅನುವಾದದಲ್ಲಿ 'Me' ಯಾಗಿದೆ ಮೂಲದ 'Mine' ಇದ್ದದ್ದು 'ನನಗೆ' ಯಾಗಿದೆ ಮೂಲದ 'Kisses' ಎಂಬ ಪದ ಇಲ್ಲಿ 'ಬಿನ್ನಾಣ'ವಾಗಿದೆ. 'fair', kisses' ಎಂಬ ಪದಗಳ ಧ್ವನಿಯೇ ಬೇರೆ. 'ಬಿನ್ನಾಣ' ಎಂಬ ಪದದ ಧ್ವನಿಯೇ ಬೇರೆ. 'ಬಿನ್ನಾಣಗಾತಿ' ಪದಕ್ಕೆ 'A clever woman' ಎಂಬ ಅರ್ಥವಿದೆ. 'ಬಿನ್ನಾಣ' ಎಂಬ ಪದವನ್ನು ಬಳಸಿರುವುದು ಮೂಲ ಕವಿತೆಯ ಧ್ವನಿಗೆ ವಿರೋಧವಾಗಿರುವಂತೆ ತೋರುತ್ತದೆ. ಕೊನೆಯ ಸಾಲಿನಲ್ಲಿರುವ ಪ್ರೇಮದ ಶರಣಾಗತಿ ಮೇಲಿನ ಎಲ್ಲ ಕೊರತೆಯನ್ನು ಮರೆಸಿಬಿಡುತ್ತದೆ. ಸಂಭೋಗ ಶೃಂಗಾರ ರಸ ಸೂಚ್ಯವಾಗಿದ್ದು ಹೃದ್ಯವಾಗಿದೆ.

ಮೊದಲ 4 ಸಾಲುಗಳನ್ನು– "ಹೆದರುವೆನು ಚುಂಬಿಸಲು ಎಲೆ ಕೋಮಲೆ

ಅನಗತ್ಯವೀ ನನ್ನ ಭಯವು
ಚೈತನ್ಯ ಉಡುಗಿ ಹೋಗುತಿಹುದು
ಈ ಪರಿಯ ಎದೆ ಭಾರವ ಹೊತ್ತುದಿಲ್ಲ"

ಎಂದು ಸರಳವಾಗಿ ಅನುವಾದಿಸಿದ್ದರೆ ಸೊಗಸಾಗಿರುತ್ತಿತ್ತು. ಶ್ರೀಯವರು ಹೀಗೆ ಮಾಡಿಲ್ಲ ಎಂದು ಬೆರಳು ತೋರಿಸುವ ಅಹಂಭಾವ ನನ್ನಲಿಲ್ಲ. ಹೀಗೂ ಮಾಡಲು ಸಾಧ್ಯವಿದೆ ಎಂದು ತೋರಿಸುವ ಪ್ರಾಮಾಣಿಕ ಪ್ರಯತ್ನ ನನ್ನೀ ಭಾಷಾಂತರದ ಉದ್ದೇಶವಷ್ಟೇ. ಕವನವು ಪಂಚಮಾತ್ರಾಲಯದಲ್ಲಿದೆ.

## ಗಾನ ಮೆಲುಪಿನ ಕೊರಲು ಕುಗ್ಗಲು

ಷೆಲ್ಲಿಯ 'To' ಕವನದ ಅನುವಾದವಿದು. ಮೂಲದಲ್ಲಿರುವಂತೆ 4 ಸಾಲುಗಳ 2 ಪದ್ಯಗಳು ಇಲ್ಲಿಯೂ ಇವೆ. ಮೊದಲ ಪದ್ಯದ ಎಲ್ಲ ಸಾಲುಗಳು ಮೂಲಕ್ಕೆ ಸಮೀಪವಾಗಿ ಅನುವಾದಗೊಂಡಿವೆ. 2ನೆಯ ಪದ್ಯದ 'ಕಳಚಿದ ಎಸಳೆ'ಗೂ 'ಕುಂದಿದ ಗುಲಾಬಿ'ಗೂ ಇರುವ ಸಂಬಂಧ ಸ್ಪಷ್ಟವಾಗಿಲ್ಲ. ಮೂಲದಲ್ಲಿ ಅರ್ಥ, ಭಾವ, ಸಂಬಂಧಗಳಲ್ಲಿ ಸಂದಿಗ್ಧತೆಯಿಲ್ಲ. 'Rose' ಪದ ಪುನಾರವರ್ತನೆಗೊಂಡರೂ ಮೂಲದಲ್ಲಿ ಒಂದು ಬಗೆಯ ಸೊಗಸನ್ನು ಹೊಂದಿದೆ. 'ಬಗೆಗಳೊ' ಬದಲಿಗೆ 'ಯೋಚನೆ' ಎಂದನುವಾದವಾಗಬೇಕಿತ್ತು. ಹಾಗಾಗದೆ ಮೂಲದ ಭಾವಕ್ಕೆ ಇಲ್ಲಿ ಚ್ಯುತಿಯಾಗಿದೆ.

ಗಾನವಡಗಿದರೂ ನಾದ ಹೊಮ್ಮುತ್ತಲೇ ಇರುತ್ತದೆ ಎಂಬ ವಾಚ್ಯಾರ್ಥಕ್ಕೆ ಕವನದ ಕೊನೆಯ ಸಾಲು 'ನೀನು ಹೋಗಲು, ಒರಗೆ ಒಲುಮೆಯ ಬಗೆವುದು' ಪುಷ್ಟಿನೀಡಿ ಪ್ರೇಮದ ಶಾಶ್ವತತೆಯನ್ನು ಧ್ವನಿಪೂರ್ಣವಾಗಿಸಿದೆ. ಶೃಂಗಾರ ರಸವು ವಾಚ್ಯವಾಗದೆ ಸೂಚ್ಯವಾಗಿ ಹೊಮ್ಮಿ ರಮ್ಯವಾಗಿದೆ. 'ಕಳಚಿದೆಸಳು' ಎಂಬಲ್ಲಿ ಮೂಲದಲ್ಲಿಲ್ಲದ ಚಿತ್ರಕ ಶಕ್ತಿಯಿದೆ. 3,4 ಮಾತ್ರೆಗಳ ಮಿಶ್ರಲಯವಿದೆ.

## ಮುಪ್ಪು ಯೌವ್ವನ

ವಿಲಿಯಂ ಷೇಕ್ಸ್‌ಪಿಯರ್‌ನ 'Crabbed age and youth' ಕವನದ ಅನುವಾದ. ಮೂಲ ಕವನದಲ್ಲಿ 12 ಸಾಲುಗಳಿದ್ದರೆ, ಇಲ್ಲಿ 20 ಸಾಲುಗಳಿವೆ. 'ಮುಪ್ಪಿಗುಸಿರೆಳೆದಾಟ' ಮೂಲದಲ್ಲಿಲ್ಲದ ಸೊಗಸನ್ನು ಹೊಂದಿದೆ. 'Summer Morn'- 'ಸಿರಿಸುಗ್ಗಿ'ಯಾಗಿ ಚೆಂದವಾಗಿದೆ. ಬೇಸಿಗೆಯ ಕಾಲದಲ್ಲಿ ಜನರ ಚಟುವಟಿಕೆಗಳು ಉಳಿದಕಾಲಗಳಿಗಿಂತ ಹೆಚ್ಚು. ಮೂಲದಲ್ಲಿ ಮುಂದಿನ ಮಳೆಗಾಲ, ಚಳಿಗಾಲಗಳಿಗೆ ಬೇಕಾದ ಪದಾರ್ಥಗಳ ಶೇಖರಣೆ, ಬೆಚ್ಚನೆಯ ವಸ್ತ್ರಗಳ ಸಿದ್ಧತೆ, ಪ್ರವಾಸಕ್ಕೆ ಹೋಗುವುದು ಹೀಗೆ ಅನೇಕ ಕಾರ್ಯಗಳಲ್ಲಿ ನಿರತರಾಗಿ ಜನ ಕ್ರಿಯಾಶೀಲರಾಗಿರುತ್ತಾರೆ. ಹೀಗೆ ಯೌವನವು ಕ್ರಿಯಾಶೀಲತೆ, ಅತ್ಯುತ್ಸಾಹಗಳಿಂದ ಕೂಡಿದ್ದರೆ, ಮುಪ್ಪು ಚಳಿಗಾಲದಲ್ಲಿ ಮುದುರಿ ಮಲಗಿಸಿಕೊಳ್ಳುವ ಮಂಪರುತನದಂತೆ ಇರುವುದು ಎಂಬ ಭಾವವಿದೆ. 'ಯೌವ್ವನವು ಶೃಂಗಾರಿ; ಮುಪ್ಪು ತಲೆದೂಗಿ' ಎಂದಿರುವುದು ಅವರ ರಸಜ್ಞತೆಗೆ ಸಾಕ್ಷಿಯಾಗಿದೆ.'Nimble' ಗೆ ಚುರುಕು ಎಂದು ಭಾಷಾಂತರ ಮಾಡಬಹುದಾದರೂ ಶ್ರೀಯವರು 'ಚೆಲ್ಲಾಟ' ಎಂದು ಚುರುಕಿಗೂ ಮೀರಿದ ಚಲನಶೀಲತೆ ಎಂಬುದಾಗಿ ಅನುವಾದಿಸಿದ್ದಾರೆ Lame - ಹೆಳವು ಎಂದು ಸೂಕ್ತವಾಗಿ ಭಾಷಾಂತರವಾಗಿದೆ. wild-ಎದೆಗಚ್ಚು ಆಗಿರುವುದು ಗಮನಾರ್ಹ. ಭಾಷಾಶಾಸ್ತ್ರದ ದೃಷ್ಟಿಯಿಮ್ದ ಇದು 'ಉತ್ಪಾದಕತೆ'ಗೆ ಅತ್ಯುತ್ತಮ ಉದಾಹರಣೆ. Fame- ಪೆಚ್ಚು (<ಪೆರ್ಚು) ಅತ್ಯಂತ ಯುಕ್ತವಾದ ಅನುವಾದ. ಯೌವ್ವನವು ಒಲವಿನ ಸಾಕ್ಷಾತ್ಕಾರಕ್ಕೆ ಪುಟಗೊಟ್ಟ ಭಾವ ಬಹಳ ನವಿರಾಗಿ 'ಬರುವಳದೋ ಚಿಕ್ಕವಳು ನನ್ನ ಚೆಲುವೆ' ಎಂಬಲ್ಲಿ ಬಂದಿರುವುದು ಗಮನಾರ್ಹ.

ಶೃಂಗಾರ ರಸ ಪ್ರಧಾನವಾಗಿದೆ. ಈ ಕವನದಲ್ಲಿ ಯೌವ್ವನದ ಹೆಗ್ಗಳಿಕೆಯನ್ನು ಸಾರುವುದು ಇಲ್ಲಿಯ ಧ್ವನಿ. ಪದಗಳ ಬಳಕೆಯಲ್ಲಿ ಔಚಿತ್ಯವಿದೆ. ಮೂಲಕ್ಕೆ ವಿಧೇಯವಾಗಿ ಅನುವಾದ ಸಾಗಿದ್ದರೂ ಈ ಕವನ ಸ್ವೋಪಜ್ಞತೆಯಿಂದ ಕೂಡಿದ್ದು 'ಪುನಃ ಸೃಷ್ಠಿಯೊ' ಎಂಬ ಭ್ರಮೆ ಹುಟ್ಟಿಸುತ್ತದೆ. ಪಂಚಮಾತ್ರೆಗಳ ಲಯ ಪ್ರಧಾನವಾಗಿದೆ.

**ಮಾದ ಮಾದಿ**

Robert Burns ಕವಿಯ ಕವನದ 'Duncan Gray' ಅನುವಾದ 'ಮಾದ ಮಾದಿ' Duncan ಮತ್ತು Maggie ಇಲ್ಲಿ ಮಾದ ಮಾದಿಯರಾಗಿದ್ದಾರೆ. ಇಡೀ ಕವನದಲ್ಲಿ ಎಲ್ಲಿಯೂ ಅಸಹಜತೆಯ ಅನುಭವವಾಗದಂತೆ Lad'o grace- ಚಿನ್ನದಂಥ ಹುಡುಗ, couldna be her death- ಸಾಯಲಾದ ಹುಡುಗಿ, crocse and canty baith- ಹಿಡಿಯದವರ ಮೋದ ಎಂದು ಅನುವಾದವಾಗಿರುವಲ್ಲಿ ಸಹಜತೆ ಕಾಣುತ್ತದೆ. ಈ ಪದಗಳೇ ಓದುಗನಿಗೆ ಮೋಡಿ ಹಾಕಿ ಸೆರೆಹಿಡಿಯುತ್ತವೆ. 'on blythe yule night when we were fou' ಎಂಬಲ್ಲಿ yule night ಎಂದರೆ ಕ್ರಿಸ್ ಮಸ್ ಹಬ್ಬದ ರಾತ್ರಿ ಎಂದರ್ಥ. when we were free fou ಎಂದರೆ ನಾವು ಪೂರ್ತಿ ಕುಡಿದಿದ್ದಾಗ ಎಂದರ್ಥ. ಇದು ಕನ್ನಡದ ಜಾಯಮಾನಕ್ಕೆ ಹೊಂದುವುದಿಲ್ಲವಾದ ಕಾರಣ ಶ್ರೀಯವರು ಈ ಸಾಲನ್ನು ಕೈಬಿಟ್ಟಿದ್ದಾರೆ. ಅವರು ಕೈಬಿಟ್ಟಿರುವ ಇನ್ನೊಂದು ಸಾಲು Meg was deaf as Ailsa craig ಎಂಬುದು. ಮ್ಯಾಗಿ ಎಂಬ ಹುಡುಗಿ ಐಲ್ಸಾ ಬಂಡೆಯಂತೆ ಕಿವುಡಾಗಿದ್ದಳು ಎಂದು ಅದರರ್ಥ. ಬಹುಶಃ ಈ ಬಂಡೆ ಕನ್ನಡನಾಡಿನಲ್ಲಿ ಇಲ್ಲದ ಕಾರಣ ಅದನ್ನು ಕೈಬಿಟ್ಟಿರ ಬಹುದೆನಿಸುತ್ತದೆ. ಈ 2 ಸಾಲುಗಳನ್ನು ಬಿಟ್ಟರೂ ಹೊಸದಾಗಿ 2 ಸಾಲುಗಳನ್ನು ಸೇರಿಸಿ ಕವನದ ಸ್ವಾರಸ್ಯ ಹೆಚ್ಚುವಂತೆ ಮಾಡಿದ್ದಾರೆ. ಅವು ಯಾವುದೆಂದರೆ

'ಬೇಡಿ ಸತ್ತು ಸುಣ್ಣವಾದ<br>ರೊಯ್ಯನೊದೆಯೆ, ಹಲ್ಲ ಕಡಿದ'

ಪ್ರೇಮದ ಕಥೆ, ಹಿಗ್ಗು, ಕವಿಯ ಸಂತೋಷ, ಹೆಣ್ಣಿನ ಗರ್ವ, ಗಂಡಿನ ಪೇಚುತನ ಎಲ್ಲವೂ ಇಲ್ಲಿ ಸೊಗಸಾಗಿ ಧ್ವನಿತವಾಗಿದೆ. ಆಡುಭಾಷೆ ಸರಾಗವಾಗಿ ಸುಲಲಿತವಾಗಿದೆ.

"ಈ ಕವನ ಸ್ಕಾಟ್ಲೆಂಡಿನ ಆಡುಮಾತಿನಲ್ಲಿದೆ... ಜಾನಪದ ರೀತಿಯ ಪ್ರೇಮನಿರೂಪಣೆಯಲ್ಲಿ ಅನೇಕ ಬಗೆಯ ಸೊಗಸಿದೆ. ಕೋಲಾಟದ ಪದದಂತೆ ಇದನ್ನು ಹಾದಿ ಕೋಲು ಹಾಕಬಹುದು! ಪ್ರಾರಂಭದಲ್ಲಿನ ಗಂಡಿನ ದುಃಖ ಕ್ರಮವಾಗಿ ಹೆಣ್ಣಿನ ದುಃಖವಾಗಿ ಪರಿಣಮಿಸಬಹುದು, ಬಳಿಕ ಅದು ಎಲ್ಲ ಸಾಮನ್ಯ ಕಥೆಗಳಂತೆ ಸುಖದಲ್ಲಿ ಪರಿಣಮಿಸುವುದು ಈ ಬಗೆಯ ಧಾಟಿಯಲ್ಲಿ ಒಂದು ನಿರಾಭರಣ ಸೌಂದರ್ಯವಿದೆ. ಹಾಸ್ಯರಸವೂ ಮಿತವಾಗಿ ಮಿಶ್ರವಾಗಿದೆ[16] ಎಂಬ ಅಭಿಪ್ರಾಯ ಲಕ್ಷ್ಮ್ಯರ್ಹ. ಇದು ತಿಮಾತ್ರಾಲಯದಲ್ಲಿದೆ.

---

[16]ಲೋಚನ– ಶ್ರೀ ವಿಶೇಷಾಂಕ, ಸಂ 2 ಸಂಚಿಕೆ 2 ಪುಟ 160

## ಅಡವಿ ಮರದಡಿಯಲ್ಲಿ

ಶ್ರೀಯವರು ಷೇಕ್ಸ್‌ಪಿಯರ್ 'Under the Green wood Tree' ಕವನವನ್ನು 'ಅಡವಿಮರದಡಿಯಲ್ಲಿ' ಎಂಬುದಾಗಿ ಅನುವಾದಿಸಿದ್ದಾರೆ. ಮೂಲದ ಮತ್ತು ಅನುವಾದ ಕವನಗಳ ಶೀರ್ಷಿಕೆಯಲ್ಲಿ ಮುಂದೆ ನಡೆಯಲಿರುವ ಘಟನೆಯ ಬಗೆಗಿನ ಕುತೂಹಲ ಭಾವವಿದೆ. ಮೂಲದ ಕವನದಲ್ಲಿ 7 ಸಾಲಿನ 2 ಪದ್ಯಗಳು, 6 ಸಾಲಿನ ಒಂದು ಪದ್ಯ, 10 ಸಾಲಿನ ಒಂದು ಪದ್ಯವಿದೆ. ಆದರೆ ಶ್ರೀಯವರು ಮೊದಲ 7 ಸಾಲುಗಳುಳ್ಳ 2 ಪದ್ಯಗಳನ್ನು ಮಾತ್ರವೇ ಭಾಷಾಂತರಿಸಿ ಉಳಿದವುಗಳಿಗೆ ಕೈಚೆಲ್ಲಿದ್ದಾರೆ. Who loves to lie with me, and turn his merry note unto the sweet bird's throat- ಈ ಸಾಲುಗಳಲ್ಲಿನ ಆಸರಿಕೆ ಬೇಸರಿಕೆಗಳು ಅನುವಾದದಲ್ಲಿ ಬಂದೇ ಇಲ್ಲ. ಇನಿಯನ ಬರುವಿಕೆಗಾಗಿ ಕಾದು ಕುಳಿತ ಮನಸ್ಸೊಂದು ಅವನು ಬೇರೆಡೆಗೆ ಸಾಗಿದುದರ ಬಗೆಗಿನ ಯಾತನೆ ಅನುವಾದಗೊಂಡಿರುವ ಸಾಲುಗಳಲ್ಲಿ ಬರದೆ ಸಪ್ಪೆಯಾಗಿದೆ.

'Here shall he see ...' ಈ 3 ಸಾಲುಗಳಲ್ಲಿ ಪ್ರೇಮಿಗಳ ಶತ್ರುಗಳಾಗಿರದ ಚಳಿ ಮತ್ತು ಗಾಳಿಯ ಬಗೆಗಿನ ಅವ್ಯಕ್ತ ಒಲವು ಶ್ರೀಯವರ ಅನುವಾದದಲ್ಲಿ ಜಾಳುಜಾಳಾಗಿದೆ. ಮೂಲದ ಮೂರು ಮತ್ತು 4 ನೆಯ ಪದ್ಯಗಳನ್ನು ಶ್ರೀಯವರು ಅನುವಾದಿಸದೆ ಕೈಬಿಟ್ಟಿದ್ದಾರೆ. ಮೂಲದ ಈ ಪದ್ಯಗಳಲ್ಲಿ ಪ್ರೇಮಿಗಳ ಮಿಡುಕಾಟಗಳು, ಅವರ ಇಷ್ಟಾನಿಷ್ಟಗಳು, ಪ್ರೇಮದ ಪಾವಿತ್ರ್ಯತೆ, ಒಲವ ಸಾಕ್ಷಾತ್ಕಾರಗಳನ್ನು ಷೇಕ್ಸ್‌ಪಿಯರ್ ಮನೋಜ್ಞವಾಗಿ ಬಿಂಬಿಸಿದ್ದಾನೆ. ಇಂತಹ ಸಾಲುಗಳನ್ನು ಶ್ರೀಯವರು ಕೈಬಿಡಲು ಕಾರಣವೇನೊ ತಿಳಿಯದು.

ಶೃಂಗಾರ ರಸ ಮೂಲದಲ್ಲಿರುವಷ್ಟು ಮನೋಜ್ಞವಾಗಿ ಇಲ್ಲಿ ಎಡೆಪಡೆದಿಲ್ಲ. ಪ್ರೇಮಿಯ ಉನ್ಮಾದ ಸ್ಥಿತಿಯನ್ನು ವ್ಯಕ್ತಪಡಿಸುವ ಧ್ವನಿಗೆ ಇಲ್ಲಿ ಅವಕಾಶವೇ ಇಲ್ಲದಂತಾಗಿದೆ. ಆದರೆ ಅನುವಾದದಲ್ಲಿ ಬಳಸಿರುವ ಪದಗಳಲ್ಲಿ ನಳನಳಿಸುವ ಜೀವಂತಿಕೆಯಿದೆ; ಲವಲವಿಕೆಯಿದೆ 'ಚಿಕ್ಕಂದಿನಂದು', 'ಯೌವ್ವನದಲಿಂದು', 'ಮುಪ್ಪಿನಲಿ ಮುಂದೆ' ಎಂಬೀ ಪದ ಪ್ರಯೋಗಗಳನ್ನು ಸೂಕ್ತವಾಗಿ ಅಳವಡಿಸಿಕೊಂಡು ಭಾಷೆಯನ್ನು ಸಾರ್ಥಕ ರೂಪದಲ್ಲಿ ಬಳಸಿಕೊಂಡಿದ್ದಾರೆ. ಇಂತಹ ಕಡೆಗಳಲ್ಲಿ ಅನುವಾದ ಸಹಜತೆಯನ್ನು ಕಾಯ್ದುಕೊಂಡಿದೆ.

## ವೀರಗಲ್ಲು

Sir walter scott ನ 'Coranach' ಶ್ರೀಯವರಲ್ಲಿ 'ವೀರಗಲ್ಲು' ಆಗಿದೆ. ಮೂಲದಲ್ಲಿರುವಂತೆ ಇಲ್ಲಿಯೂ 8 ಸಾಲುಗಳುಳ್ಳ 3 ಪದ್ಯಗಳಿವೆ. ಇದೊಮ್ಮು ವಿರಹಗೀತೆ

1ನೆಯ ಪದ್ಯ:

'He is gone on the mountain' ಎಂಬ ಮೊದಲ ಸಾಲು 'ಕಾಡಿನೊಳು ನೀನಿಲ್ಲ' ಎಂದು ಅನುವಾದವಾಗಿದೆ, ಮೂಲದ ಪೂರ್ಣಕ್ರಿಯಾ ರೂಪ ಇಲ್ಲಿಲ್ಲ. ಎಲ್ಲಿ ತನ್ನಿನಿಯ ತನ್ನನ್ನು ತೊರೆದು ಬಹುದೂರ ಸಾಗಿರುವನೆಂಬ ಅವ್ಯಕ್ತ

ಸಂಕಟ ಅಥವಾ ನೋವು ಕಾಡಿರುವ ಬಗೆ, ಭಾವದ ಉತ್ಕಟತೆ ಅನುವಾದದಲ್ಲಿಲ್ಲ. He is lost to the forest- ಬೀಡಿನೊಳಗಿಲ್ಲ ಎಂಬಲ್ಲಿ ಭಾವವಿದ್ದರೂ ಮೂಲದ ಭಾವತೀವ್ರತೆ ಮಾಯವಾಗಿದೆ. ಉಳಿದ ಸಾಲುಗಳಲ್ಲಿನ ಅನುವಾದ ಮೂಲಕ್ಕೆ ಸಮೀಪವಾಗಿದೆ.

2ನೆಯ ಪದ್ಯ:

ಮೊದಲ 4 ಪಾದಗಳಲ್ಲಿನ ರೈತನ ಕಾರ್ಯಸಫಲತೆ, ಶೂರನ ಶೌರ್ಯೋನ್ನತಿಗಳ ವರ್ಣನೆಯಲ್ಲಿ ಬಂಧವಿದ್ದರೆ ಅನುವಾದದಲ್ಲಿ ಇದು ಇಲ್ಲವಾಗಿದೆ. ಈ ಪದ್ಯದಲ್ಲಿ ಮೂಲದ ಭಾವ ಸಂಪೂರ್ಣವಾಗಿ ಕಣ್ಮರೆಯಾಗಿದೆ.

3ನೆಯ ಪದ್ಯ:

Dew on the mountain- ಹಗಲ್ಗೆದಿರ ಮಂಜು, bubble on the fountain- ಮುಗಿಲ ಕುಡಿ ಮಿಂಚು ಎಂದನುವಾದವಾಗಿರುವುದರಲ್ಲಿ ಸೂಕ್ತತೆ ಕಂಡುಬರುತ್ತದೆ. ಅಗಲಿಕೆ ಶಾಶ್ವತವಾಯಿತೇ ಎಂಬ ಭಾವವುಳ್ಳ 'and for ever' ಎಂಬುದು ಅನುವಾದದಲ್ಲಿ ಕಾಣೆಯಾಗಿದೆ. 'ಬೇಟೆಯಲಿ ಬರಸಿಡಿಲು, ಆಟದಲಿ ನವಿಲು' ಎಂಬಲ್ಲಿ ಪ್ರಾಸಪ್ರೀತಿಗೆ ವೀರನ ಸಾಹಸಾತಿಶಯದ ಮೂಲಭಾವ ಬಲಿಯಾಗಿದೆ.

ರಣಾಗ್ರಣಿಯಾಗಿದ್ದ ಶೂರನೋರ್ವನ ನೆನಪು ಇಲ್ಲಿ ಧ್ವನಿತವಾಗಿದೆ. ಆದರೆ ಇದು ಅನುವಾದದಲ್ಲಿ ಮೊಳಗೇ ಇಲ್ಲ. ಶೂರತ್ವದ ವರ್ಣನೆ ಮೂಲದಲ್ಲಿದ್ದರೆ ಶೂರನ ವರ್ಣನೆ ಅನುವಾದದಲ್ಲಿದೆ. ಅನುಕರಣೆ ಮಾಡಲು ಹೋಗಿ ಅನುವಾದದಲ್ಲಿ ಔಚಿತ್ಯಕ್ಕೆ ಪೆಟ್ಟು ಬಿದ್ದಿದೆ. ಇದು ಪಂಚಮಾತ್ರಾಲಯದಲ್ಲಿದೆ.

"..ಅದು ನಿರ್ದಿಷ್ಟ ಇಂಗ್ಲಿಷ್ ಸಮಾಜದ ಪದ್ಯ ಎನ್ನುವ ಅರ್ಥದಲ್ಲಿ ಕನ್ನಡಕ್ಕೆ ಭಾಷಾಂತರಗೊಂಡಿಲ್ಲ ಅದನ್ನು ಭಾರತದ ಯೋಧನನ್ನು ಕುರಿತು ಒಂದು ಪದ್ಯವಾಗಿ ಓದಬಹುದು"[17] ಎಂಬ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ.

**ಕನಕಾಂಗಿ**

ಕೋಲ್ರಿಜ್ ಕವಿಯ 'Love' ಎಂಬ ಕವನದ ಅನುವಾದ 'ಕನಕಾಂಗಿ' ಮೂಲದ ಪ್ರೇಮದ ಬಗೆಯೆ ಒಂದು ರೀತಿಯಾಗಿದೆ. ಪ್ರೇಮಸಾಧನೆಯ ವಿನ್ಯಾಸ ನೂತನ ರೀತಿಯದು. ಬೇರೊಂದು ಪ್ರೇಮದ ಕರುಣ ಕಥೆಯನ್ನೊರೆದು ತಾನು ಒಲಿದ ಹೆಣ್ಣಿನ ಪ್ರೇಮವನ್ನು ಗಳಿಸುತ್ತಾನೆ ಪ್ರೇಮಿ.

'Ministers of love' ಎಂಬುದು ಕಾಮರಾಯರಿಗೆಲ್ಲ ಕುಲಪುರೋಹಿತರಾಗಿ ಎಂದು ಅನುವಾದಿಸಿರುವುದು ಸರಿಯೆನಿಸದು. 'ಕಾಮ'ದ ಬದಲಿಗೆ 'ಪ್ರೇಮ'ವೇ ಬಂದಿದ್ದರೆ ಅರ್ಥಚ್ಯುತಿಯಾಗದೇ ಇನ್ನು ಚೆನ್ನಾಗಿರುತಿತ್ತು. All thoughts all passion -ಭಾವಗಳು ರಾಗಗಳು ಎಂದಾಗಿರುವುದರಲ್ಲಿ ಮೂಲದ ಭಾವ ಮೈದಳೆದು ನಿಂತಿರುವುದನ್ನು ಕಂಡಾಗ ತಲೆದೂಗಬೇಕೆನಿಸುತ್ತದೆ.

---

[17]ಇಂಗ್ಲಿಷ್ ಗೀತಗಳು ಸಾಂಸ್ಕೃತಿಕ ಮುಖಾಮುಖಿ ಪುಟ 80

'She wept with pity and delight she blushed with love and virgin shome ಎಂಬುದಕ್ಕೆ 'ಇರುವ ಸೊಗಸು ಮೇರೆ ಮೀರುವ ಕರುಣ ಹರ್ಷ ಪ್ರೇಮಗಳೊಡನೆ ಹೋರಿದಳು ಹೊಸ ಹೆಣ್ಣು ಲಜ್ಜೆಯಿಂದ' ಎಂಬ ನುಡಿಗಳಲ್ಲಿ ಸರಿಯಾಗಿ ಬಂದಿಲ್ಲವೆನಿಸುತ್ತದೆ. 'ಮಲ್ಲಿಗೆಯ ಬಿರಿಮುಗುಳ ಮೇಲೆ ಬರುವೆಲರಂತೆ' ಎಂಬಲ್ಲಿ ರೂಪಾಂತರವಾಗಿರುವುದನ್ನು ಗಮನಿಸಬಹುದು. ಇದೇ ಸಂದರ್ಭದಲ್ಲಿ 'ಭಾರತೀಯ ಪರಿಸರಕ್ಕೆ ಅನುಗುಣವಾಗಿ ಇಂಗ್ಲಿಷ್ ಗೀತಗಳನ್ನು ರೂಪಾಂತರಿಸುವ ಪ್ರಯತ್ನ ಇಲ್ಲಿದೆ' ಎನ್ನಬಹುದು.

## ಮುದಿಯ ರಾಮಗೌಡ

'Lady Anne Lindsay' ವಿರಚಿಸಿದ 'Auld Robin Gray' ಕವನದ ಅನುವಾದ 'ಮುದಿಯ ರಾಮಗೌಡ'. 4 ಸಾಲುಗಳುಳ್ಳ 9 ಪದ್ಯಗಳನ್ನು ಉಭಯ ಕವನಗಳಲ್ಲಿ ಕಾಣಬಹುದು. Robin Gray ಇಲ್ಲಿ ರಾಮಗೌಡನಾಗಿದ್ದಾನೆ.

ತಾನೊಲಿದಿದ್ದ ಜೀವಿಯನ್ನು ಮರೆತು ಮುದಿಯ ರಾಬಿನ್‌ನನ್ನು ಚೆನ್ನಿ ಮದುವೆಯಾಗಬೇಕಾಗಿ ಬಂದ ದುರಂತಕ್ಕೆ ಕಾರಣವ ಸನ್ನಿವೇಶವನ್ನು ಮೂಲದಲ್ಲಿರುವಂತೆ ಅನುವಾದದಲ್ಲಿ ಶ್ರೀಯವರು ತಂದಿದ್ದಾರೆ. ಇಲ್ಲಿ ಅಚ್ಚಗನ್ನಡತನ ನಮ್ಮ ಎದೆಯನ್ನು ಸೆಳೆಯದೆ ಇರದು. ಚೆನ್ನಿಯ ಮನಸ್ಸು ಕಡಲಲಿ ನಿಂತುಹೋದಂತೆ ಓದುಗರ ಮನಸ್ಸು ಅನುವಾದದಲ್ಲಿ ಸೆರೆಯಾಗಿದೆ. ಈ ಸನ್ನಿವೇಶದಲ್ಲಿ ವರ್ಣನೆಯಲ್ಲಿ ಪದಶಃ ಅಂದರೆ urgit- ಗದರು didna speak-ಆಡಬಲ್ಲಳು, try ಕೊರಗು ಎಂಬಂತೆ ಅನುವಾದವಾಗಿರುವುದು ಗಮನಾರ್ಹ.

ಹಿಂದೊಮ್ಮೆ ಒಲಿದ ಹೃದಯ ಮತ್ತೆ ಅದೇ ಪ್ರೇಮವ ಬಯಸುವೊಡೆ ಏನೆಲ್ಲ ದ್ವಂದ್ವ, ಆತಂಕ, ದುಗುಡ, ಮತ್ತೆ ಆರೆಕ್ಷಣಕ್ಕೆ ಎದ್ದು ನಿಂತ ಹಿಂದಿನ ಒಲವು ಎಲ್ಲವೂ ಮೂಲದಲ್ಲಿ ವರ್ಣಿತವಾಗಿರುವಂತೆ ಶ್ರೀಯವರು ರೂಪಾಂತರದಲ್ಲಿ ತಂದಿದ್ದಾರೆ.

ಭಾರತೀಯ ದಾಂಪತ್ಯ ಜೀವನದ ಪಾವಿತ್ರ್ಯತೆಯನ್ನು ಶ್ರೀಯವರು ಧ್ವನಿ ಪೂರ್ಣವಾಗಿಸಿದ್ದಾರೆ. ವಿಪ್ರಲಂಭ ಶೃಂಗಾರವು ಹಲವೆಡೆಗಳಲ್ಲಿ ವಿಷಾದದ ಜೊತೆಗೂಡಿ ಸೂಚ್ಯವಾಗಿದೆ. ಇದು 3-4 ಮಾತ್ರೆಗಳ ಮಿಶ್ರಲಯದಲ್ಲಿದೆ.

## ನನ್ನ ಮೇರಿ

'William Cowper ನ 'To mary' ಕವನವು ಕನ್ನಡದಲ್ಲಿ 'ನನ್ನ ಮೇರಿ' ಎಂಬುದಾಗಿ ಭಾಷಾಂತರವಾಗಿದೆ. ಮೂಲದಲ್ಲಿರುವಂತೆ 3 ಸಾಲುಗಳುಳ್ಳ 14 ಪದ್ಯಗಳು ಎಲ್ಲೂ ಇವೆ.

'The twentieth year- ವರುಷವಿಪ್ಪತ್ತು, Overcast - ಮುಸುಕಿ, Housewife - ಗರತಿ ಎಂದು ಶಬ್ದಶಃ ಅನುವಾದವಾಗಿರುವುದನ್ನು ಗಮನಿಸಬಹುದು. 'part' ಎಂಬುದಕ್ಕೆ 'ಮನೆಬದುಕ' ಎಂದನುವಾದಿಸಿ ಜೀವ ತುಂಬಿರುವುದನ್ನು ಕಾಣಬಹುದ್ಪ್. ಆದರೆ 'sun' ಎಂಬುದು 'ಮೂಡ' ಎಂದಷ್ಟೇ ಆಗಿರುವುದು ಉಚಿತವಲ್ಲವೆನಿಸುತ್ತದೆ. What sight

worth ಗೆ 'ಕಣ್ಣಿಗದೇನು' ಸರಿಯಾಗಿ ಹೊಂದುತಿಲ್ಲ. 2 ನೆಯ ಪದ್ಯ ಮೂಲಕ್ಕೆ ಸಮೀಪವಾಗಿ ಅನುವಾದವಾಗಿಲ್ಲ. ಈ ಪದ್ಯದ ಮೊದಲ 2 ಸಾಲುಗಳನ್ನು

ದುರ್ಬಲವಾಗಿಹುದು ಮನವು
ದಿನದಿನಕ್ಕೆ ಕುಗ್ಗಿಹುದು ಬಲವು

ಎಂದು ಮೂಲಕ್ಕೆ ಅನುಸಾರಿಯಾಗಿ ಅನುವಾದಮಾಡಬಹುದಾಗಿತ್ತು. ಇದೇ ಪದ್ಯದ ಕೊನೆಯ ಸಾಲಿನ 'ನನ್ನ ಮೇರಿ'ಯು 'ನಿನ್ನ ಮೇರಿ'ಯಾಗಬೇಕೆಂದು ಶ್ರೀಯವರೇ ಒಮ್ಮೆ ತೀನಂಶ್ರೀಅವರಿಗೆ ತಿಳಿಸಿದ್ದರೆಂದು ಅವರೇ ಈ ಕವನ ಸಂಕಲನದ ಪ್ರಸ್ತಾವನೆಯಲ್ಲಿ ಒಂದೆಡೆ ಉಲ್ಲೇಖಿಸಿದ್ದಾರೆ. ಆದರೆ ಇದು ನನ್ನ ಪ್ರಕಾರ 'ನನ್ನ ಮೇರಿ' ಎಂದುಳಿದಿರುವುದೇ ಸರಿಯೆನಿಸುತ್ತದೆ.

ಇನ್ನು 7 ನೆಯ ಪದ್ಯದಲ್ಲಿ ಅನುವಾದ ಕಾರರು ಮೂಲದ ಅರ್ಥ ಭಾವಗಳನ್ನು ಇಲ್ಲಿ ಸ್ವೀಕರಿಸಿಲ್ಲ. ಇದನ್ನು ಹೀಗೆ ಅನುವಾದಿಸಬಹುದಿತ್ತು.

"ಮಿರಿವ ಗುಂಗುರಿನ ಹೊಳವ ಕೆನ್ನೆಯ ಸೊಬಗು
ನನ್ನ ಕಣ್ಣಿಗಿನ್ನು ಅದೇ ಅಂದ, ಉಳಿದ
ಮೂಡಣ ಬೆಳ್ಳಿಯ ಥಳಕು ಮಂದ"

8 ನೆಯ ಪದ್ಯದ 'ಸಿರಿದಲೆ' ಗೆ ಮೂಲದಲ್ಲಿ ಆಧಾರವಿಲ್ಲ ಈ ಪದ್ಯದ 2 ಪಾದಗಳು ಮೂಲಕ್ಕಿಂತ ಭಿನ್ನವಾಗಿವೆ, ಇವುಗಳನ್ನು

ಇಂತೆಂದೂ ಕಾಣೆನು ನಾನು ಈ ನೋಟಕ್ಕೆ ಬೆಲೆಕಟ್ಟಬಹುದೇನು?

ಎಂದು ಸರಳವಾಗಿಯೇ ಭಾಷಾಂತರಿಸಬಹುದಿತ್ತು. 14ನೆಯ ಪದ್ಯದಲ್ಲಿನ 'ಮಡಗೆ' ಕನ್ನಡ ಭಾಷೆಯ ಗ್ರಾಮ್ಯ ಸೊಗಡನ್ನು ಗರ್ಭೀಕರಿಸಿಕೊಂಡಿದೆ. ಇಷ್ಟನ್ನುಳಿದರೆ ಉಳಿದೆಲ್ಲೆಡೆಯಲ್ಲ ಅನುವಾದ ಬಹುಮಟ್ಟಿಗೆ ಯಶಸ್ವಿಯಾಗಿದೆ.

ಈ ಕವನದಲ್ಲಿಯೂ ವಿಪ್ರಲಂಭ ಶೃಂಗಾರವು ಬಹಳ ಸೂಚ್ಯವಾಗಿ ವಿರಹವೇದನೆಯೊಂದಿಗೆ ಬಂದಿದೆ. ಸಂಸಾರ ಸುಖದ ಅಭಿಲಾಷೆ ಧ್ವನಿತವಾಗಿದೆ. ಪ್ರತಿ ಪದ್ಯದಲ್ಲಿ ಬಂದಿರುವ ಅಂತ್ಯಪ್ರಾಸ ಕವನದ ನಡೆಗೆ ಉತ್ಸಾಹ ತುಂಬಿದೆ. 3–4 ಮಾತ್ರೆಗಳ ಮಿಶ್ರಲಯವನ್ನಿಲ್ಲಿ ಕಾಣ ಬಹುದು.

**ಬೇಡ ಬಿಡು ನಾವಲೆವುದಿನ್ನು**

George Gardin Byron ನ 'So, we`ll Go no more A Roving' ಕವನದ ಅನುವಾದವಿದು. 4 ಸಾಲುಗಳುಳ್ಳ 3 ಪದ್ಯಗಳು ಎರಡು ಕವನಗಳಲ್ಲಿ ಕಾಣಬಹುದು.

1ನೆಯ ಪದ್ಯ:

'Moon`-ಎಂಬುದಕ್ಕೆ 'ಚಂದ್ರ' ಎನ್ನಬಹುದಾಗಿದ್ದರೂ 'ತಿಂಗಳು' ಎಂಬ ಅಚ್ಚಗನ್ನಡ ಪದ ಬಳಕೆಯಾಗಿದೆ. 'ತಿಂಗಳು ಬೆಳಗುತಿಹುದಲ್ಲ' ಎಂಬ ಸಾಲಿನಲ್ಲಿ ಇನ್ನು ಬಹುಕಾಲ ಮಿಲನಮಹೋತ್ಸವಕ್ಕೆ ಎಡೆ ಹುಡುಕುತ ಅಲೆಯುವುದರ

ಬಗೆಗಿನ ನಿರಾಕರಣೆಯು ಧ್ವನಿತವಾಗಿದೆ. ಉಳಿದ ಸಾಲುಗಳು ಯುಕ್ತವಾಗಿ ಅನುವಾದಗೊಂಡಿದೆ. 

2 ನೆಯ ಪದ್ಯ:

'outwears'- ಇದು 'ಸವೆಯುವುದು' ಎಂದಾಗುವ ಬದಲಿಗೆ, ಕಳಚುವುದು ಎಂದಾಗಬೇಕಿತ್ತು. 2 ನೆಯ ಸಾಲು ಮೂಲದ ಭಾವವನ್ನೇ ಗ್ರಹಿಸಿಲ್ಲ ಮನವು ಮಿಲನದಾಸೆಯ ಉಸಿರಾಡ ತೆರೆದಿದೆ ಎಂಬರ್ಥದ ಸಾಲು ಇಲ್ಲಿ the soul wears out the breath ಎಂಬುದಕ್ಕೆ 'ತನ್ನೆದೆಯ ತೇಯುವುದು ಜೀವ' ಎಂದು ಅನುವಾದಗೊಂಡು ಸಪ್ಪೆಯಾಗಿದೆ. 3–4ನೆಯ ಸಾಲುಗಳು ಸಂಪೂರ್ಣವಾಗಿ ನೀರಸವಾಗಿವೆ.

3ನೆಯ ಪದ್ಯ:

ಮೊದಲೆರಡು ಸಾಲುಗಳು ಸಪ್ಪೆಯಾಗಿದ್ದು, ಮೂಲದ ಭಾವವನ್ನೇ ಸ್ವೀಕರಿಸಿಲ್ಲ.

ಇರುಳು ಉದಿಸಿರುವುದು ಒಲವನ್ನನುಭವಿಸಲು
ಬೆಳಗು ಬೇಗ ಮರಳುವುದು



ಎಂದು ಈ 2 ಸಾಲುಗಳನ್ನು ಭಾಷಾಂತರಿಸಬಹುದಿತ್ತು 'ಕಲ್ಲೆದೆಯೆ' ಎಂಬುದಕ್ಕೆ ಮೂಲದಲ್ಲಿ ಆಧಾರವೇ ಇಲ್ಲ.

ಸಂಭೋಗ ಶೃಂಗಾರ ವಾಚ್ಯವಾಗಿದೆ ಇಲ್ಲಿ. ಪ್ರೇಮಿಯೋರ್ವ ಪ್ರಿಯತಮೆಯೊಬ್ಬಳನ್ನು ಒಲವನ್ನು ಧಾರೆಯೆರೆದು ಮನದಣಿಸುವಂತೆ ವಿನೀತವಾಗಿ ಬೇಡುವಂತಿದೆ. ಇದು ಪಂಚಮಾತ್ರಾಲಯದಲ್ಲಿದೆ.

**ವಸಂತಕಾಲಕೊಲುಮೆ**

'Lord Byron ನ 'Could love –for ever' ಕವಿತೆಯ ಅನುವಾದವಿದು. 'ಪ್ರೇಮ ಶಾಶ್ವತವೇ' ಎಂಬರ್ಥದ ಶೀರ್ಷಿಕೆ ಅನುವಾದದಲ್ಲಿ ಇಲ್ಲ. ಮೂಲದ 16 ಸಾಲುಗಳು ಶ್ರೀಯವರಲ್ಲಿ 12 ಸಾಲುಗಳಾಗಿವೆ. ಉಳಿದ (ಅನುವಾದದಲ್ಲಿನ) 12 ಸಾಲುಗಳು ಮೂಲದಲ್ಲಿ ಆಧಾರವಿಲ್ಲ.

ಶೀರ್ಷಿಕೆಯಿಂದ ಹಿಡಿದು, ಕವನದ ಕೊನೆಯವರೆಗೂ ಭಾವ, ಅರ್ಥಗಳು ತುಂಡಾಗಿವೆ. ಎಲ್ಲ ಸಾಲುಗಳಲ್ಲೂ ಒಂದಲ್ಲ ಒಂದು ಅಸ್ಪಷ್ಟತೆ, ಅನೌಚಿತ್ಯ ಕಾಣಿಸುತ್ತದೆ. ಇಡೀ ಕವನ ಅನುವಾದದ ಯಾವ ತೆರಕ್ಕೂ ಎಟುಕದೆ ಜಾಳಾಗಿದೆ. ಮೂಲಕವನದಲ್ಲಿನ 4,7,9,10 ನೆಯ ಸಾಲುಗಳು ಇಡಿಯಾಗಿ ಮಾಯವಾಗಿ ಉಳಿದಸಾಲುಗಳಲ್ಲಿ ಬಹುಮಟ್ಟಿಗೆ ಭಾವ ಧ್ವನಿಗಳು ಪಲ್ಲಟವಾಗಿ ರಸದ ಏಕತಾನತೆಗೂ ಭಂಗ ಬಂದಿದೆ. ಈ ಕವನವನ್ನು ಹೀಗೆ ಭಾಷಾಂತರಿದಲು ಸಾಧ್ಯವಿದೆ.

ಪ್ರೇಮವೆಂಬುದು ಶಾಶ್ವತವೇ
ಕಾಲನ ವಶವಾಗದಂತೆ
ಹರಿವ ಹೊಳೆಯಂದದಿ
ನಿಸ್ವಾರ್ಥ ಭಾವವಿದ್ದಲ್ಲಿ.

ಪರಮನಿಧಿಯೊಂದು ಸರಪಳಿಯ ತೆಕ್ಕೆಯಲ್ಲಿರುವಂತೆ
ಅಷ್ಟು ಇಷ್ಟೆನ್ನದೆ
ಇದನೊಂದನುಳಿದು

ಬೇರೊಂದು ಹರ್ಷವ ಬಯಸದಿದ್ದರೆ

ನಿಟ್ಟುಸಿರು ಬಿಡದೆ
ಇಚ್ಛೆಯ ಮುಚ್ಚಿಡದೆ
ಹಾರಲು ಅನುವು ನೀಡಲು
ಪ್ರೇಮ ಗರಿಬಿಚ್ಚುವುದು ಮೇಲೇರಲು

ಹೀಗಾದ ದೆಸೆಯಿಂದ
ಪ್ರೇಮಕಾಲವೊಂದು ಮೊಳೆಯುವುದು
ಆ ಕಾಲ ವಸಂತಕಾಲವೊಂದೇ ಆಗಿರುವುದು.

## ಪ್ರೇಮ ರಹಸ್ಯ

ಷೆಲ್ಲಿಯ 'Love's philosophy' ಎಂಬುದರ ಅನುವಾದ ಈ ಕವನ. ಮೂಲದ ಶೀರ್ಷಿಕೆಯಲ್ಲಿ 'ರಹಸ್ಯ'ವಿಲ್ಲ; 'ಸಿದ್ಧಾಂತ', 'ತತ್ತ್ವ' ಎಂಬರ್ಥವಿದೆ. 8 ಸಾಲುಗಳನ್ನೊಳಗೊಂಡ 2 ಪದ್ಯಗಳನ್ನು ಎರಡೂ ಕವನಗಳಲ್ಲಿಯೂ ಕಾಣಬಹುದು.

1ನೆಯ ಪದ್ಯ:

'mix' ಎಂಬುದಕ್ಕೆ 'ಬೆಂದು' ಉಚಿತ ಪ್ರಯೋಗವಲ್ಲ. 'ಬೆರೆತವವು ಎಂದಿಗೂ' ಎಂದನುವಾದವಾಗಬೇಕಿತ್ತು. 'ಮೀರದೆಯೆ' ಪದಕ್ಕೆ ಮೂಲದಲ್ಲಿ ಆಧಾರವಿಲ್ಲ. 8 ನೆಯ ಸಾಲು 2 ಬಾರಿ ಆವೃತ್ತಿಗೊಂಡಿದ್ದರೂ ಮೂಲದ ಅರ್ಥ ಭಾವಗಳನ್ನೇ ಹೊಂದಿಲ್ಲ 'ನಾನೇಕೆ ನಿನ್ನನಗಲಿರಲಿ' ಎಂದು why not I with thine ಎಂಬುದಕ್ಕೆ ಅನುವಾದ ಮಾಡಬಹುದಿತ್ತು.

2ನೆಯ ಪದ್ಯ

2ನೆಯ ಸಾಲಿನಲ್ಲಿ 'Kiss' ಗೆ 'ಮುಟ್ಟುವುದು' ಸರಿಯಾದ ಭಾಷಾಂತರವಲ್ಲ. ಇದು 'ಮುತ್ತಿಡುವುದು' ಅಥವಾ 'ಚುಂಬಿಸುವುದು' ಎಂದಾಗಬೇಕಿತ್ತು.

ಬೆಟ್ಟ ಬೆಳದಿಂಗಳು, ಹರಿವ ನದಿ ಗಾಳಿ, ಹೂವು, ಮುಗಿಲು, ಭೂಮಿ ಈ ಎಲ್ಲದರಲ್ಲೂ ಅಡಕವಾಗಿರುವ ಪ್ರೇಮತತ್ತ್ವ ಇಲ್ಲಿ ಧ್ವನಿತವಾಗಿದೆ. ವಿಪ್ರಲಂಭ ಶೃಂಗಾರ ರಸದ ಏಕತಾನತೆಗೆ ಕೊಂಚವೂ ಭಾದೆಯೊದಗಿಲ್ಲ. ಇಡೀ ಕವನ ಮೂಲಕ್ಕೆ ವಿಧೇಯವಾಗಿದೆ. ಕವನವು ಪಂಚಮಾತ್ರಾಲದಲ್ಲಿದೆ.

## ಮೆಲುನೋಟಕೆ ಮರೆಯಲಾರಳು

'Hartley coleridge' ಕವಿಯ 'She is not fair to outward view' ಕವನದ ಅನುವಾದ ಕವಿತೆಯಿದು ಎರಡು ಕವನಗಳಲ್ಲಿಯೂ 6 ಸಲಗಳುಳ್ಳ 2 ಪದ್ಯಗಳಿವೆ. maiden-ಹೆಣ್ಣು, loveliness- ಚೆಲುವನ್ನು, Awell of love - ಒಲುಮೆ ತುಳುಕುವ, coy - ನಾಚಿ, reply- ಮುನಿಸು ಎಂಬುದಾಗಿ ಸೂಕ್ತ ಅನುವಾದವಾಗಿರುವುದನ್ನು ಗಮನಿಸಬಹುದು.

ಮೂಲಕ್ಕೆ ಎಲ್ಲ ಸಾಲುಗಳು ವಿಧೇಯವಾಗಿವೆ. ಪ್ರೇಮಿಯ ಮಿಡುಕಾಟಗಳನ್ನು ಪ್ರೇಮೋನ್ಮಾದಗಳನ್ನು ಮೂಲದಂತೆಯೆ ಬಿಂಬಿಸುತ್ತದೆ. ಕವನದಲಿ 3–4 ಮಾತ್ರೆಗಳ ಮಿಶ್ರಲಯವಿದೆ.

## ಸುಂದರಿ ಕಮಲೆ

'Robert Burns ನ 'Bonnie lesley' ಯ ಅನುವಾದವಿದು 4 ಸಾಲುಗಳುಳ್ಳ 6 ಪದ್ಯಗಳು ಎರಡು ಕವನಗಳಲ್ಲಿಯೂ ಇವೆ.

1ನೆಯ ಪದ್ಯ:

'As she gaed o'er the border' ಎಂಬಲ್ಲಿನ ವಿಸ್ಮಯ ಮಿಶ್ರಿತ ಪ್ರೇಮಭಾವ ಅನುವಾದದಲ್ಲಿ ಕಾಣೆಯಾಗಿದೆ. ಉಳಿದ ಸಾಲುಗಳು ಮೂಲಕ್ಕೆ ಸಮೀಪವಾಗಿ ಅನುವಾದವಾಗಿವೆ.

2 ನೆಯ ಪದ್ಯ

ಮೊದಲ ಸಾಲಿನ ಭಾವ 2ನೆಯ ಸಾಲಿನ 'ಒಲಿಯುವುದೇ' ಪದದಿಂದ ಮೂಲದ ಸೊಬಗನ್ನು ಕಳೆದುಕೊಂಡಿದೆ. 'ಒಲಿಯುವುದು' ಎಂದು ಇದು ಮಾರ್ಪಾಟಾಗಬೇಕಿತ್ತು. ಮೂಲದ ನಿಶ್ಚಯತೆ, ನಿಖರತೆಗಳು ಇಲ್ಲಿ ಇಲ್ಲವಾಗಿವೆ. 'nature' 'ಬಿದಿ'ಯಾಗಿ ವಿಶೇಷವಾಗಿದೆ.

ನಂತರದ 4 ಪದ್ಯಗಳಲ್ಲಿ ಅನುವಾದ ಮೂಲಕ್ಕೆ ಸಮೀಪವಾಗಿ ನಡೆದಿದೆ. ಕೆಲವೆಡೆ ಭಾವಕ್ಕೆ ಕೊರತೆಯಾಗಿ ಪದ್ಯದ ಸೊಗಸು ಕುಂದಿದೆ. ಸೌಂದರ್ಯರಸಾಸ್ವಾದನೆಯ ಜೊತೆಜೊತೆಯಾಗಿ ಪದ್ಯದ ಸೊಬಗು ಮನಸೆಳೆಯುತ್ತದೆ. ಸಂದರಿಯಾದ ಪ್ರೇಯಸಿಯ ಸನಿಹವ ಬಯಸುವ ತರುಣ ಹೃದಯದ ಹಪಹಪಿಸುವಿಕೆ, ದಾಸ್ಯಭಾವ ಧ್ವನಿಪೂರ್ಣವಾಗಿ ಹೊಮ್ಮಿದೆ. ಕವನವು ಚತುರ್ಮಾತ್ರಾಲಯದಲ್ಲಿದೆ.

## ಬಿಟ್ಟ ಹೆಣ್ಣು

'Robert Burns ನ 'Bonnie Doon' ಕವನದ ಅನುವಾದವಿದು. ಮೂಲದಲ್ಲಿರುವಂತೆ 4 ಸಾಲುಗಳನ್ನೊಳಗೊಂಡ 5 ಪದ್ಯಗಳು ಇಲ್ಲಿಯೂ ಇವೆ. Flowery banks ತೊರೆಯ ಕರೆಗಳ, chant- ಕೆಲವಿರೊ ಎಂಬಲ್ಲಿ ಅನುವಾದ ಸಮರ್ಪಕವಾಗಿರದೆ ಅಸಂಬಂದ್ಧವಾಗಿದೆ. ಇಲ್ಲಿನ 'ಕೆಲವಿರೊ' ಬದಲಿಗೆ 'ಉಲಿವಿರೊ' ಎಂದೂ 'ಬಿರಿಸುವೆ' ಬದಲಿಗೆ 'ಬಿರಿಯುವೆ' ಎಂದೂ ಅನುವಾದವಾಗಿದ್ದರೆ ಸಮರ್ಪಕವಾಗಿರುತ್ತಿತ್ತು. ಇಡೀ ಪದ್ಯದಲ್ಲಿ ಒಲವಿನಿಂದ ವಂಚಿತವಾದ ಹೃದಯವೊಂದರ ವಿರಹಭಾವನೆ ಧ್ವನಿತವಾಗಿದೆ. ಪ್ರೇಮಿಯ ಎದೆಯಂತರಾಳದ ಉರಿಗೆ ಪ್ರಕೃತಿಯು ಆಜ್ಯನೀಡಿ ಮತ್ತಷ್ಟು ವಿರಹದುರಿಯನ್ನು ಹೆಚ್ಚು ಮಾಡಿದೆ. ಈ ಭಾವ ಮೂಲದಲ್ಲಿರುವಂತೆ ಉಲಿಯೂ ಪ್ರಕಟವಾಗಿದೆ. ಆದರೆ ಪ್ರಕಟವಾದ ಭಾವದಲ್ಲಿ ತೀವ್ರತೆಯಿಲ್ಲವಷ್ಟೆ. 3–4 ಮಾತ್ರೆಗಳ ಮಿಶ್ರಲಯವಿದೆ.

## ಪದುಮ

'Walter Savage Landor' ನ 'Rose Aylmer' ಕವನದ ಅನುವಾದ 'ಪದುಮ'. ಮೂಲದಲ್ಲಿರುವಂತೆ ಇಲ್ಲಿಯೂ 8 ಸಾಲುಗಳಿವೆ 'ಅರಸಿನ ಕುಲವೊ' ಈ 8 ಸಾಲುಗಳಲ್ಲಿನ ಅನುವಾದ ಅಚ್ಚುಕಟ್ಟಾಗಿದ್ದು, ಸ್ವರಚನೆಯಿರಬಹುದೆನ್ನುವ ಭ್ರಮೆ ಹುಟ್ಟಿಸುತ್ತದೆ. "ತಮ್ಮ ಪತ್ನಿಯನ್ನು ಕಳೆದು ಕೊಂಡ ತರುಣದಲ್ಲಿ ಈ ಕವನದ ಅನುವಾದವು ರಚಿತವಾದದ್ದು"[18] ಎನ್ನುವುದು ಅನೇಕ ಜನರಿಗೆ ತಿಳಿದಿಲ್ಲ. ಒಲಿದ ಹೃದಯವನ್ನು ನೆನೆಯುವ ಆ ನೆನಪಿನಲ್ಲಿ ಬಿಸುಸುಯ್ಯುವ ಕ್ರಿಯೆಗಳಿಗೂ ಇರುಳಿಗೂ ಇರುವ ಅವಿನಾಭಾವ ಅನುವಾದದಲ್ಲಿ ಕಣ್ಮರೆಯಾಗಿದೆ. ಮೂಲದ ಕಲ್ಪನೆಗಳು ಇಲ್ಲಿ ಸರಳ, ಸುಂದರವಾಗಿವೆ. ಇದು "ಕವಿಯಿಂದ ಕವಿಗೆ ಆದ ಅನುವಾದ"[19] ಇದು ಚತುರ್ಮಾತ್ರಾಲಯದಲ್ಲಿದೆ.

## ಅರೆಯಾವುದಿಲ್ಲ?

'Robert Browninig ನ Wanting is what ಎಂಬುದರ ಅನುವಾದ ಕವಿತೆಯಿದು. ಶ್ರೀರ್ಷಿಕೆಯಲ್ಲಿ ಕೌತುಕವಿದ್ದರೆ ಅನುವಾದದಲ್ಲಿ ಆಶ್ಚರ್ಯ ಸೂಚಕ ಭಾವವಿದೆ. ಮೂಲಕವನಕ್ಕೂ ಅನುವಾದ ಕವನಕ್ಕೂ ಪಾದರಚನೆಯಲ್ಲಿ ವ್ಯತ್ಯಾಸವಿದೆ. 'ಅರಿಕೆಯನ್ನು ಮಿನುಗುವ', ಹೊಸಕಳೆ ಈ ಪದಗಳಿಗೆ ಸೇರಿಸ ಬಹುದಾಗಿತ್ತು. ಚೆಲುವೆಯ ಆಗಮನ ಜಡವಾಗಿದ್ದ ಪ್ರಕೃತಿಯನ್ನು ಚೈತನ್ಯಗೊಳಿಸುತ್ತದೆ. ಕೊನೆಯಲ್ಲಿ ಪ್ರೇಮದ ಔನ್ನತ್ಯವನ್ನು ಸಾರಿ ಪ್ರೇಮಿಯ 'ಅತೃಪ್ತಿ'ಗೆ ಪ್ರೇಮದ ಕೊರತೆ ಕಾರಣ ಎಂಬ ಉತ್ತರ ಶೀರ್ಷಿಕೆ ನೀಡುತ್ತದೆ. Summer redundant - ಜ್ವಲಿಸುವ ವಸಂತ Bluness abundant - ತಿಳಿ ನೀಲಿ ಗಗನ, blank - ಪಾಳು, picture of frame- ಚಿತ್ರಪಟ ಎಂದು ಶಬ್ದಶಃ ಅನುವಾದವಾಗಿದ್ದು ಪದ್ಯದ ಸೊಗಸಿಗೆ ಪುಟಕೊಟ್ಟಿದೆ. ಕವನದಲ್ಲಿ ಪಂಚಮಾತ್ರಾಲಯವಿದೆ.

## ನನ್ನ ಪ್ರೇಮದ ಹುಡುಗಿ

ಬರ್ನ್ಸ್ ನ 'My love is like a Red Rose' ಎಂಬ ಕವಿತೆಯ ಅನುವಾದವಿದು ಮೂಲದಲ್ಲಿರುವಂತೆ ಇಲ್ಲಿಯೂ 4 ಸಾಲುಗಳುಳ್ಳ 4 ಪದ್ಯಗಳಿವೆ.

1ನೆಯ ಪದ್ಯ:

'Love' ಎಂಬ ಶಬ್ದಕ್ಕೆ ಕನ್ನಡದಲ್ಲಿ 'ಪ್ರೇಮದ ಹುಡುಗಿ' ಎಂದಿದ್ದಾರೆ 'ಒಲವೆ', 'ಒಲವು' ಎಂದಿದ್ದರೂ ಚೆನ್ನಾಗಿರುತ್ತಿತ್ತು. ಆದರೆ 'ಹುಡುಗಿ' ಎನ್ನುವ ಪದದಲ್ಲಿ ಮೂಲದಲ್ಲಿಲ್ಲದ ಆತ್ಮೀಯತೆ ಧ್ವನಿತವಾಗಿದೆ. 'ತಾವರೆ' ಪದವು ಪ್ರೇಮದ ವಿಶಾಲತೆಯನ್ನು ವಿರಳತೆಯ ಭಾವವನ್ನು ಧ್ವನಿಸುತ್ತದೆ. ಉಳಿದ ಸಾಲುಗಳಲ್ಲಿ ಯುಕ್ತವಾಗಿ ಅನುವಾದವಾಗಿದೆ.

2ನೆಯ ಪದ್ಯ:

---

[18] ಲೋಚನ– ಶ್ರೀ ವಿಶೇಷಾಂಕ, ಸಂ 2 ಸಂಚಿಕೆ 2 ಪುಟ 151

[19] ರಹಮತ್ ತರೀಕೆರೆ : ಇಂಗ್ಲಿಷ್ ಗೀತಗಳು ಸಾಂಸ್ಕೃತಿಕ ಮುಖಾಮುಖಿ ಪುಟ

'As fair art thou' ಎಂಬುದು 'ಬೆಳೆಬೆಳೆಯುತೆಷ್ಟೆಷ್ಟು ಬಿನ್ನಾಣ' ಎಂದು ರೂಪಾಂತರ ಹೊಂದಿದೆ. 'My bonnie lass' ಎನ್ನುವಲ್ಲಿನ ಆತ್ಮೀಯತೆ 'ಎಲೆ ಚೆಲುವೆ' ಎಂಬುದರಲ್ಲಿ ಇಲ್ಲವೆನಿಸುತ್ತದೆ 'My dear' ನನ್ನೊಲವೆ ಎಂದು ಪ್ರಯೋಗವಾಗಿದ್ದರೆ ಚೆನ್ನಾಗಿರುತ್ತಿತ್ತು.

ಮೂರು ಮತ್ತು ನಾಲ್ಕನೆಯ ಪದ್ಯಗಳಲ್ಲಿ ಅನುವಾದ ಅತ್ಯಂತ ಸಮರ್ಪಕವಾಗಿರುವುದನ್ನು ಕಾಣಬಹುದು. ಆದರೆ 4ನೆಯ ಪದ್ಯದಲ್ಲಿನ My only love ಪ್ರೇಮದೊಂದೇ ಹೆಣ್ಣೆ ಎಂದಾಗಿರುವುದು ಔಚಿತ್ಯವೆನಿಸುವುದಿಲ್ಲ. ಪ್ರೇಮದ ಔನ್ನತ್ಯವನ್ನು ಬಿಂಬಿಸುವ ಸಾಲುಗಳು ಕವನದಲ್ಲಿ ಮೋಹಕವಾಗಿವೆ. ಕೊನೆಯ ಸಾಲಿನಲ್ಲಿ ವಿರಹವೂ ಕೊಂಚ ಇಣುಕಿ ಮಾಯವಾಗಿದೆ. ಪಂಚಮಾತ್ರಾಲಯವಿದೆ.

### ನಿನ್ನೊಳೆನಗೊಲವಿಲ್ಲ

'Caroline Norilan ನ "I do not love thee" ಕವನದ ಅನುವಾದವಿದು 4 ಸಾಲುಗಳುಳ್ಳ 5 ಪದ್ಯಗಳನ್ನು ಉಭಯ ಕವನಗಳಲ್ಲಿ ಕಾಣಬಹುದು. I do not love thee ನಿನ್ನೊಳೆನಗೊಲವಿಲ್ಲ, I do not love thee ನನೊಲಿದರಿರಬಾರದೆ, Art gone ಕಣ್ಣಿಲ್ಲವಾಗಿ, lingering ಮುಳಿಯುವುದು. scarcely trust - ನೆಚ್ಚರೇ ಎಂದು ಅನುವಾದವಾಗಿರುವುದು ಬಹಳ ಸೂಕ್ತವಾಗಿದೆ. 'ಕಟ್ಟಕ್ಕರಿನ' ಪದದಲ್ಲಿ 'ಅಟ್ಕರು' ಎಂಬ ಅಚ್ಚಗನ್ನಡ ದೇಸಿ ನುಡಿ ಒಳಹೊಕ್ಕು ಸೊಬಗ ಸೂಸಿದೆ. 'ನುಡಿಗಣ್ಣು' ಭಾಷಾಶಾಸ್ತ್ರದ 'ಉತ್ಪಾದಕತೆ'ಗೆ ಅತ್ಯುತ್ತಮ ಉದಾಹರಣೆ ಇದು 'ನುಡಿಗಣ್ಣುಗಳು' ಎಂದಾಗಬೇಕಿತ್ತು 4 ನೆಯ ಪದ್ಯದ ಕೊನೆಯ 2 ಸಾಲುಗಳು ಸರಿಯಾಗಿ ಅನುವಾದಗೊಂಡಿಲ್ಲ. ಆ ಸಾಲುಗಳನ್ನು ಹೀಗೂ ಅನುವಾದಿಸಬಹುದು.

ಮುಂದೆ ನಿಲುವುವು ನಡುದಿರುಳ ಹೊತ್ತು
ವಿಕ್ಕಾವ ಕಣ್ಗಳು ಕಾಣದಂತೆ ಮರೆಮಾಡಿ

5 ನೆಯ ಪದ್ಯದ 'ಮಾಜ' ಪದವನ್ನು ಕಂಡಾಕ್ಷಣ ಇಂಥದೊಂದು ಪದ ಕನ್ನಡದಲ್ಲಿದೆಯೇ ಎಂದು ಎನಿಸಿತು. ಇದು ಅವರ ಶಾಬ್ದಿಕ ಸಂಪತ್ತಿಗೆ ಸಾಕ್ಷಿಯಾಗಿದೆ ಎನ್ನಬಹುದು. ಉಳಿದ ಸಾಲುಗಳಲ್ಲಿ ಅನುವಾದ ಮೂಲವನ್ನು ವಿಧೇಯವಾಗಿ ಅನುಸರಿಸಿದೆ. ಇಲ್ಲ ಇಲ್ಲ ಎನ್ನುತ್ತಲೇ, ಒಲವು ಆಳವಾಗಿ ಬೇರೂರಿರುವುದು ಇಲ್ಲಿ ಧ್ವನಿತವಾಗಿದೆ.

### ಒಂದು ಮುತ್ತು

'Robert Burns' ವಿರಚಿತ 'Ae fond kiss' ಕವನದ ಅನುವಾದ ಒಂದು ಮುತ್ತು ಮೂಲ ಕವನದಲ್ಲಿ 8 ಸಾಲುಗಳುಳ್ಳ 2 ಪದ್ಯಗಳು, 7 ಸಾಲಿನ ಒಂದು ಪದ್ಯವಿದ್ದರೆ, ಶ್ರೀಯವರ ಕವಿತೆಯಲ್ಲಿ ಇವು 4 ಸಾಲುಗಳ 6 ಪದ್ಯಗಳಾಗಿ ಒಡೆದು ನಿಂತಿದೆ.

'A fond kiss' 'ಒಂದು ಮುತ್ತು' ಆಗಿ ಅನುವಾದವಾಗಿರುವುದನ್ನು ಬಿಟ್ಟರೆ ಕವನದ ಯಾವ ಸಾಲಿಗೂ

ಯಾವೊಂದು ಪದಕ್ಕೂ ಮೂಲದಲ್ಲಿ ಆಧಾರವಿಲ್ಲ. ಮೂಲದ ಪದ್ಯದ 2ನೆಯ ಪಂಕ್ತಿಯ 'ಹೋರೆನು' ಪದ ಅಂತ್ಯಪ್ರಾಸವನ್ನು ಕಾಯುಕೊಳ್ಳಲು ಬಳಸಲ್ಪಟ್ಟಿದೆಯೇ ವಿನಃ ಅರ್ಥಾನುಸಾರಿಯಾಗಿ ಬಂದಿಲ್ಲ. ಭಾವಾನುವಾದವಾಗಲಿ, ರೂಪಾಂತರವಾಗಲಿ ಇಲ್ಲಿ ನಡೆದಿಲ್ಲ ಶ್ರೀಯವರು ವಿರಚಿಸಿದ ಸ್ವಂತ ರಚನೆ ಎನ್ನಬಹುದೇ ಹೊರತು ಅನುವಾದ ಕವನ ಎನ್ನಲು ಇಲ್ಲಿ ಅವಕಾಶವಿಲ್ಲ.

ಮೂಲಕವನದಲ್ಲಿರುವ ಪ್ರೇಮದ ಶಾಶ್ವತತೆ, ಬಂಧುರತೆ ಪಾವಿತ್ರ್ಯತೆಗಳು ಇಲ್ಲಿ ಧ್ವನಿತವಾಗಿರುವುದಿರಲಿ ವಾಚ್ಯವೂ ಆಗಿಲ್ಲ. ಪ್ರಿಯ ಪ್ರಿಯತಮೆಯರ ಒಲಿದ ಹೃದಯಗಳು ಮತ್ತೆ ಬರಿಯಾಗಿ ಹೆಣೆದು ಬದುಕು ಕೂಡಿಕೊಳ್ಳುವ ಒತ್ತಾಸೆಯನ್ನು ಬೆಸೆಯುವಲ್ಲಿ 'ಒಂದು ಮುತ್ತು' ಆಧಾರವಾಗಿರುವುದು ಇಲ್ಲಿ ಧ್ವನಿತವಾಗಿದೆ. 3–4 ಮಾತ್ರೆಗಳ ಮಿಶ್ರಲಯವಿದೆ.

### ಪ್ರೇಮದ ಸಂಕಟ

ಷೆಲ್ಲಿಯ 'The fight of love' ಕವನದ ಅನುವಾದವಿದು. 8 ಸಾಲುಗಳ 4 ಪದ್ಯಗಳು ಎರಡು ಕವನಗಳಲ್ಲಿ ಇವೆ. ಮೊದಲ ಪದ್ಯದ 'ಸೊಡಲು' 'ಸೊಡರು' ಎಂದಾಗಬೇಕಿತ್ತು. 'ನಂದಿ ಬೆಳಕು' ಮೂಲದಲ್ಲಿಲ್ಲದ ಚಿತ್ರಕ ಶಕ್ತಿಯನ್ನು ಹೊಂದಿದೆ 7 ಮತ್ತು 8ನೆಯ ಸಾಲುಗಳು ಅರ್ಥವ್ಯತ್ಯಾಸಕ್ಕೆ ಕಾರಣವಾಗಿವೆ.

ಇವುಗಳನ್ನು  ತುಟಿಯ ಮೇಲೊಗೆದ ಮಾತುಗಳು
ಒಲವ ನುಡಿಗಳೆಲ್ಲವ ಮರೆಯಿಸಿಹವು

ಎಂದು ಅನುವಾದ ಮಾಡಬಹುದು. 2 ನೆಯ ಪದ್ಯದಲ್ಲಿ ಎಲ್ಲ ಸಾಲುಗಳು ಮೂಲಕ್ಕೆ ವಿಧೇಯವಾಗಿ ಅನುವಾದವಾಗಿದ್ದರೆ, 'ಅಳುವ ತೆರೆಗಳವೊಲು' ಎಂಬುದು ಮೂಲದಲ್ಲಿಲ್ಲದ ಚಿತ್ರಕ ಶಕ್ತಿಯನ್ನು ಹೊಂದಿದೆ. 3ನಯ ಪದ್ಯದ ಎಲ್ಲ ಪದಗಳು ಭಾವಗಳು ಮೂಲವನ್ನು ಅನುಸರಿಸಿ ಕೆಲೆತು ಬೆರೆತು ಸೊಗಸಾಗಿ ಅನುವಾದಗೊಂಡಿವೆ. ಇಲ್ಲಿ ಅನುವಾದ ಯಶಸ್ವಿಯಾಗಿದೆ 4ನೆಯ ಪದ್ಯದಲ್ಲಿಯೂ ಸೂಕ್ತವಾದ ಅನುವಾದ ನಡೆದಿದೆ 'ಎಳನೇಸರು', 'ಕೊಳೆತುದಿರುದಿರುವ' 'ಹೊಳೆವ ಮತಿ' ಪದಗಳು ಮೂಲದ ಭಾವವನ್ನು ಆತ್ಮೀಕರಿಸಿಕೊಂಡಿವೆ.

ಒಲಿದ ಜೀವ ದೂರಾದುದರಿಂದೊದಗಿದ ಎದೆಭಾರ, ಬತ್ತಹೃದಯದ ಒಲವ ಬಯಕೆಗಳು ಇಲ್ಲಿ ಧ್ವನಿಪೂರ್ಣವಾಗಿವೆ. ಅನುರಕ್ತಳಾದವಳನ್ನು ಕೂಡುವಾಸೆ ವಿಪ್ರಲಂಭ ಶೃಂಗಾರರಸದಲ್ಲಿ ಸೂಚ್ಯವಾಗಿ ಪ್ರವಹಿಸಿದೆ. ಪ್ರಾಸವಂತೂ ಭಾವಗತಿಗೆ ತೊಡರಾಗದೆ ಪಕ್ಕಕ್ಕೆವಾಲಿದೆ. ಪಂಚಮಾತ್ರಾಲಯದಲ್ಲಿದೆ.

### ದೇಶ ಭಕ್ತಿ ಗೀತೆಗಳು

ದೇಶಭಕ್ತಿ ದೈವಭಕ್ತಿಗಳು ಮನುಷ್ಯ ಜನ್ಮವನ್ನೇ ಪಾವನಗೊಳಿಸುವಂತಹವು. ದೇಶಭಕ್ತಿಯನ್ನೊಳಗೊಂಡಿರುದ ಸಾಹಿತ್ಯವೇ ಈ ಪ್ರಪಂಚದಲ್ಲಿ ಇಲ್ಲವೆನ್ನಬಹುದು. ಕವಿರಾಜಮಾರ್ಗದ ಕಾಲದಿಂದಲೂ ದೇಶಭಕ್ತಿ ಮಿಳಿತವಾದ ಕವಿತೆಗಳು ಕನ್ನಡದಲ್ಲಿ ಬಂದಿವೆ. ಕನ್ನಡ ಸಾಹಿತ್ಯದ (ಆಧುನಿಕ) ಆಚಾರ್ಯ ಕೃತಿಯೆನಿಸಿದ ಇಂಗ್ಲಿಷ್ ಗೀತಗಳಲ್ಲೂ ಅನೇಕ ದೇಶಭಕ್ತಿ

ಗೀತೆಗಳಿವೆ. ಇದೊಂದು ಅನುವಾದ ಕೃತಿಯಾದ ಕಾರಣ ಇಂಗ್ಲಿಷ್ ಕವಿಗಳ ದೇಶಭಕ್ತಿಯನ್ನು ಒಳಗೊಂಡ ಗೀತೆಗಳನ್ನು ನಾವಿಲ್ಲಿ ಕಾಣಬಹುದು.

**ಆಳೌ ಬ್ರಿಟಾನಿಯ**

'Jemes Thomson' ನ Rule Britannia' ಕವಿತೆಯ ಅನುವಾದವಿದು. ಮೂಲದಂತೆಯೇ ಇಲ್ಲಿಯೂ ಮೊದಲು ಮತ್ತು ಕೊನೆಯಲ್ಲಿ 6 ಸಾಲುಗಳ ಒಂದೊಂದು ಪದ್ಯಗಳು ನಡುವೆ 4 ಸಾಲುಗಳ 4 ಪದ್ಯಗಳು ಇವೆ ಬ್ರಿಟನ್ ಬಗ್ಗೆ Thomson ನ ಕವಿತೆಯ ಅನುವಾದ ಇದಾಗಿರುವುದರಿಂದ ಶ್ರೀಯವರ ರಾಷ್ಟ್ರ ಪ್ರೇಮವನ್ನೂ ತಾಯ್ನಾಡ ಅಭಿಮಾನವನ್ನೂ ಇಲ್ಲಿ ನಿರೀಕ್ಷಿಸುವಂತಿಲ್ಲ.

1 ನೆಯ ಪದ್ಯ:

ಮೊದಲ ಸಾಲಿನ 'Heaven's command' 'ದೈವಾಜ್ಞೆ' ಯಾಗಿರುವುದು ಅವರ 'ಹಿತಮಿತಮೃದುವಚನ'ಕ್ಕೆ ಸಾಕ್ಷಿಯಾಗಿವೆ. ಉಳಿದ ಸಾಲುಗಳಲ್ಲಿ ಸೂಕ್ತವಾದ ಪದಗಳ ಬಳಕೆಯಿಂದ ಅನುವಾದ ಸೊಗಸಾಗಿದೆ. ಕೊನೆಯ ಸಾಲಿನಲ್ಲಿ ಮೂಲದ ವಾತ್ಸಲ್ಯಭಾವವೂ ಸೂಕ್ಷ್ಮವಾಗಿ ಹೊಮ್ಮಿದೆ.

2 ನೆಯ ಪದ್ಯ:

ಮೊದಲ ಸಾಲು ಮೂಲಕ್ಕೆ ಸಮೀಪವಾಗಿದೆ. 2 ನೆಯಸಾಲಿನ 'tyrants fall' ಎಂಬುದು 'ಕೃಶವಾಗಿ' ಎಂದು ಸೂಕ್ತವಾಗಿ ಅನುವಾದವಾಗಿದೆ. 3 ನೆಯ ಸಾಲಿನ 'ಕುರುಬಿ' ಗೆ ಮೂಲದಲಿ ಆಧಾರವಿಲ್ಲವಾದರೂ ಅರ್ಥಾನುಸಾರಿಯಾಗಿ ಎಡೆ ಪಡೆದಿದೆ. 4ನೆಯ ಸಾಲಿನಲ್ಲಿ ಮೂಲದಲ್ಲಿಲ್ಲದ ಜನ್ಮಭೂಮಿಯ ಬಗೆಗಿನ ಅಭಿಮಾನ, ಹೆಮ್ಮೆ ಅನುವಾದದಲ್ಲಿ ಬಲವಾಗಿದೆ.

3 ನೆಯ ಪದ್ಯ:

ಮೊದಲೆರಡು ಸಾಲುಗಳು ಮೂಲವನ್ನು ಅನುಸರಿಸಿವೆ. 'As the loud blast' ಎಂಬುದಕ್ಕೆ 'ಕೀರಿ ಗಗನವ ಸೀಳಿ' ಎಂದಾಗಿ ಮೂಲದಲ್ಲಿ ತೀವ್ರವಾಗಿರದ ರೋಷಾವೇಶವನ್ನು ಧ್ವನಿಸುತ್ತದೆ 4 ನೆಯ ಸಾಲಿನ 'ನಿನ್ನಡವಿತೇಗು' ಎಂಬುದು ಅರ್ಥವಿಲ್ಲದ ಅಸಂಬದ್ಧ ಪ್ರಯೋಗವಾಗಿದೆ. 'ಸೇವಿಸುತ ನಿನ್ನಡಿಯು ಬೇರೂರಿಕೊಳ್ಳುವುದು' ಎಂದಾಗಿದ್ದರೆ ಚೆನ್ನಾಗಿರುತ್ತಿತ್ತು.

4ನೆಯ ಪದ್ಯ:

4 ಸಾಲುಗಳು ಸಂಪೂರ್ಣವಾಗಿ ಮೂಲಕ್ಕೆ ನಿಷ್ಠವಾಗಿವೆ. 3 ನೆಯ ಸಾಲಿನ 'ಸಿಂಹದಂತುರಿದೆದ್ದು ತೆಗೆದೊದರಿ' ಎಂಬುದು ಮೂಲದಲ್ಲಿಲ್ಲದ ಪೌರುಷವನ್ನು ಯುದ್ಧೋತ್ಸಾಹವನ್ನು ಧ್ವನಿಸುತ್ತದೆ.

5 ನೆಯ ಪದ್ಯ:

ಬ್ರಿಟನಿನ್ನ ಭೂ ಸಂಪತ್ತು , ಸಾಗರೋತ್ಪನ್ನಗಳ ವಿಪುಲತೆ, ಆರ್ಥಿಕ ಸುಸ್ಥಿತಿಗಳ 4 ಸಾಲುಗಳಲ್ಲಿ ಮೂಲಕ್ಕೆ ದೂರಗಾಮಿಯಾಗದಂತೆ ಸತ್ವಪೂರ್ಣವಾಗಿ ಅನುವಾದವಾಗಿರುವುದನ್ನು ಕಾಣಬಹುದು.

6ನೆಯ ಪದ್ಯ:

ಸಾಹಿತ್ಯದ ಶ್ರೀಮಂತಿಕೆಯನ್ನು ಜಗದ ಕಣ್ಮನಸೆಳೆವ ರೂಪ ಆಕರ್ಷಣೆಯನ್ನು ಮೂಲದಂತೆ ಇಲ್ಲಿಯೂ ಮೂಡಿನಿಂತಿರುವುದನ್ನು ಮನದಣಿಯೆ ತಿಳಿಯಬಹುದು.

ಇಲ್ಲಿ ದೇಶವೊಂದು ಕಟ್ಟಲ್ಪಟ್ಟು, ಸ್ಥಿರವಾಗಿ ನಿಂತು ಬೆಳೆದು ತನ್ನ ಕೀರ್ತಿ ಪಸರಿಸುತ್ತಿರುವ ಪರಿಯನ್ನು ವರ್ಣಿಸಲಾಗಿದೆ. ಮೂಲದಂತೆಯೇ ಇಲ್ಲಿಯೂ ವರ್ಣನೆಯಲ್ಲಿ ಉತ್ಸಾಹದ ಗತಿಯಿದೆ. ಅನುವಾದವು 'ವಿಧೇಯತೆ'ಯ ಗುಣವನ್ನು ಇಲ್ಲಿ ಅಳವಡಿಸಿಕೊಂಡಿದೆ. ಕವನ ಪಂಚಮಾತ್ರಾಲಯದಲ್ಲಿದೆ.

## ಬ್ಲೆನ್‌ಹಿಂ ಕದನ

ರಾಬರ್ಟ್ ಸದೆ ಯ 'After blenheim' ಕವನದ ಅನುವಾದವಿದು ಶೀರ್ಷಿಕೆಯು 'ಬ್ಲೆನ್ ಹಿಂ ಕದನದ ತರುವಾಯ' ಎಂದಿದ್ದರೆ ಮೂಲಕ್ಕೆ ಇನ್ನು ಹತ್ತಿರವಾಗಿರುತ್ತಿತ್ತು. ವಸ್ತು ಬ್ಲೆನ್ ಹಿಂ ಕದನ್ನವೇ ಆಗಿರುವುದರಿಂದಲೋ ಏನೋ ಅದೇ ಹೆಸರನ್ನೇ ಕವನಕ್ಕೆ ಇಟ್ಟಿರುವಂತೆ ತೋರುತ್ತದೆ. ಮೂಲದಂತೆಯೇ ಇಲ್ಲೂ 6 ಸಾಲುಗಳ 11 ಪದ್ಯಗಳನ್ನು ಕಾಣಬಹುದು.

ಮೊದಲ 3 ಪದ್ಯಗಳು ಮುಂದಿನ ಪದ್ಯಗಳಿಗೆ ಪೀಠಿಕಾ ರೂಪದಂತಿವೆ. ರಸಪೂರ್ಣವಾದ ಯಾವುದೋ ಕಥೆಯೊಂದನೊರೆವ ಸನ್ನಿವೇಶದ ಕೌತುಕತೆ ಮೂಲ ಕವನದಲ್ಲಿರುವಂತೆಯೇ ಇಲ್ಲಿಯೂ ಎದೆ ಪದಶಃ ಅನುವಾದ 3 ಪದ್ಯಗಳಲ್ಲಿ ಕಂಡುಬರುತ್ತದೆ.

ಬ್ಲೆನ್ ಹಿಂ ಕವನದ ಧಾರುಣತೆಯನ್ನು ಸೂಚ್ಯವಾಗಿ 4 ನೆಯ ಪದ್ಯದಲ್ಲಿ ಹೇಳುವಾಗ ಮೂಲಕವನದ ಹೆಗಲ ಮೇಲೆ ಕೈಹಾಕಿಯೇ ಸಾಗಿದ್ದಾರೆ ಶ್ರೀ.

ಬಾಲ್ಯದ ಸಹಜವಾದ ಕುತೂಹಲದಿಂದ ಬ್ಲೆಂನ್ ಹಿಂ ಕದನದ ಕಥೆಯನ್ನು ಹೇಳುವಂತೆ ಮೊಮ್ಮಕ್ಕಳು ಕೇಳುತ್ತಿರುವುದನ್ನು ಗಮನಿಸಿದರೆ ಮುದ್ದು ಸೂಸುತ್ತದೆ ಈ ಸನ್ನಿವೇಶದಲ್ಲಿಯೂ! ಅಷ್ಟು ಮುದ್ದಾಗಿದೆ ಅನುವಾದ 'ಏತಕೆ ಕಾದಾಡಿದರೊ ಅದ ಹೇಳು ಎಂಬಲ್ಲಿ ಯುದ್ಧಕ್ಕೆ ಕಾರಣವನ್ನು ತಿಳಿಯುವ ಆತುರ ಕಾತರಗಳು 5 ನೆಯ ಪದ್ಯದಲ್ಲಿ ಸೂಚ್ಯವಾಗಿದೆ.

ನಂತರದ ಎಲ್ಲ ಪದ್ಯಗಳಲ್ಲು ಯುದ್ಧದ ಭೀಕರತೆ, ಘೋರತೆ, ನಿಷ್ಫಲತೆ, ಯುದ್ಧದಿಂದ ಶಾಂತಿಸ್ಥಾಪನೆ ಅಸಾಧ್ಯವೆಂಬ ಭಾವಗಳು ಅಜ್ಜ ಮೊಮ್ಮಕ್ಕಳ ಮಾತಿನಲ್ಲಿ ಬಹಳ ಸೂಕ್ಷ್ಮವಾಗಿ ಮೂಲವನ್ನು ಮೀರಿ ಸೊಗಸಾಗಿವೆ.

ಅನುವಾದ ಅಚ್ಚುಕಟ್ಟಾಗಿದ್ದು ಎಲ್ಲಿಯೂ ಮೂಲದಿಂದ ದೂರ ಸರಿದಿಲ್ಲ ಉಚಿತ ಪದಗಳ ಬಳಕೆಯಿದೆ, ಅಮಾನವೀಯತೆ ಯುದ್ಧದ ಒಡಲಾಗಿರುವುದು ಧ್ವನಿಪೂರ್ಣವಾಗಿ ಬಂದಿದೆ. ವೀರರಸ ಉತ್ಸಾಹಭರಿತವಾಗಿ ಪ್ರಕಟವಾಗಿಲ್ಲವಷ್ಟೆ ಕೊಂಚ ಕಥನಗುಣವನ್ನು ಕಾಣಬಹುದು. ಮೂಲ ಕವನ ನೀರಸವಾಗಿದೆ; ಅನುವಾದ ಸತ್ತ್ವ ಪೂರ್ಣವಾಗಿದೆ.

### ಕಾಳಗದ ಪದ

'Sir Walter Sctt' ನ ಕವಿತೆ 'Gatherin song of Donald the Black' ಶ್ರೀಯವರಲ್ಲಿ 'ಕಾಳಗದ ಪದ'ವಾಗಿದೆ. ಎರಡೂ ಕವನಗಳಲ್ಲಿಯೂ 8 ಸಾಲುಗಳ 5 ಪದ್ಯಗಳಿವೆ.

1ನೆಯ ಪದ್ಯ:

ಕಾಳಗದ ಸಂದರ್ಭ ಇದೆಂಬ ಕಲ್ಪನೆ ಮೊದಲಿಗೆ ಮೂಡದೆ ಅದಕ್ಕೆ ಬದಲಾಗಿ ಯಾವುದೋ ಉತ್ಸವದ ಉತ್ಸಾಹದ ಸನ್ನಿವೇಶವೇನೋ ಎಂಬ ಭ್ರಮೆ ತಾತ್ಕಾಲಿಕವಾಗಿಯಾದರೂ ಮೂಡುತ್ತದೆ. ಮೂಲದ 4 ಸಾಲುಗಳು ಮೂಲಕ್ಕೆ ಸಮೀಪವಾಗಿವೆ. ನಂತರದ 2 ಸಾಲುಗಳು ಮೂಲದ ಭಾವಕ್ಕನುಗುಣವಾಗಿದ್ದರೆ. ' Come in your war-array, gentles and commons' ಮೂಲದ ಈ 7 8 ನೆಯ ಸಾಲುಗಳು ಅನುವಾದದಲ್ಲಿ ಸಂಪೂರ್ಣವಾಗಿ ಮಾಯವಾಗಿವೆ.

2ನೆಯ ಪದ್ಯ:

ಮೊದಲ 5 ಸಾಲುಗಳಲ್ಲಿ ಮೂಲದ ಅರ್ಥ, ಭಾವ, ಉನ್ಮಾದ, ಉದ್ವೇಗಗಳು ಇಡಿಕಿರಿದಿವೆ. 6 ನೆಯ ಸಾಲು ಅನುವಾದದಲ್ಲಿ ಇಲ್ಲವೇ ಎಲ್ಲ 'ಹೋರಾಡುವ ಏಕಮೇವ ಇಚ್ಛೆಧರಿಸಿ' ಎಂಬ ಅರ್ಥಕೊಡುವ ಮಹತ್ತ್ವಪೂರ್ಣ ಸಾಲು ಇಲ್ಲದಿರುವುದು ಈ ಪದ್ಯಕ್ಕೆ ಕುಂದೆನಿಸುತ್ತದೆ. ಬದಲಿಗೆ 'ಮೈಜೋಡ ತೊಡಿರೊ' ಎಂದಷ್ಟೇ ಆಗಿ ಅನುವಾದ ಸಪ್ಪೆಯಾಗಿದೆ. 7 ಮತ್ತು 8 ನೆಯ ಸಾಲುಗಳು ಮೂಲವನ್ನು ಅನುಸರಿಸಿವೆ.

3ನೆಯ ಪದ್ಯ:

ಮೂಲದ ಮೊದಲ 2 ಪಂಕ್ತಿಗಳಲ್ಲಿ ಪ್ರಾಣಿಗಳನ್ನೆಲ್ಲ ಒಂದೇ ಒಂದು 'ಮಂದೆ'ಯಲ್ಲಿ ಸೇರಿಸಿದ ಶ್ರೀಯವರು ಇಲ್ಲಿ ಕೊಂಚ ತಾಳ್ಮೆವಹಿಸಬಹುದಿತ್ತು, 4 ನೆಯ ಸಾಲಿನ 'ಹೆಣ್ಣು' ಎಂಬಲ್ಲಿ ಅಂತ್ಯ ಪ್ರಾಸವನ್ನು ಕಾಯಲು 'ಹೊಸ ಉತ್ತಮಣ್ಣು' ಎಂದು ಸೇರಿಸಿದ್ದಾರೆ ಉಳಿದ ಸಾಲುಗಳು ಮೂಲಕ್ಕೆ ಸರಿಯಾಗಿ ಅನುವಾದ ಗೊಂಡಿವೆ, ಆದರೆ ಬಹು ಮುಖ್ಯ ಭಾವವನ್ನು ವ್ಯಕ್ತಪಡಿಸುವ come with your figliring gear' ಮಾಯವಾಗಿದೆ ಇಲ್ಲಿ.

4 ನೆಯ ಪದ್ಯ:

ಮೊದಲ 6 ಸಾಲುಗಳು ಶಬ್ದಶಃ ಭಾಷಾಂತರವಾಗಿವೆ. 7,8ನೆಯ 'Chief, vassal, page and groom, Tenant and master' ಈ ಸಾಲುಗಳು ' ಗೌಡ, ಕುಳ; ಆಳು, ದಣಿ; ನಾಡದಳ ಬನ್ನಿ' ಎಂದು ಕನ್ನಡೀ ಕರಣವಾಗಿರುವುದನ್ನು ಕಾಣಬಹುದು.

5ನೆಯ ಪದ್ಯ:

ಮೊದಲ 2 ಸಾಲುಗಳಲ್ಲಿ ಸೈನ್ಯ ನೆರೆದ ಬಗೆಗಿನ ಆಶ್ಚರ್ಯಭಾವವಿದ್ದರೆ ಅನುವಾದದಲ್ಲಿ ಇದು ಸಪ್ಪೆಯಾಗಿದೆ. Wide waves the eagle plume, Blended with heather' ಈ 3 ಮತ್ತು 4 ನೆಯ ಸಾಲುಗಳು 'ಚೆಂದದಲಿ ಹೂವು ಗರಿ, ಸಿಕ್ಕಿ ತಲೆ ಮೆರೆದು' ಎಂದು ಸತ್ತ್ವಹೀನವಾಗಿವೆ. 'ಸಾಗರದ ಗಾಳಿಗೆ ವಿಸ್ತಾರದಲೆಗಳೇಳುವಂತೆ ಹದ್ದಿನ ಗರಿಗಳು ಸೇರಿರುವಂತೆ' ಎಂದು ಸೈನ್ಯದ ಅಪಾರತೆಯನ್ನು ಸರಳವಾಗಿ ಭಾಷಾಂತರಿಸಿಬಹುದಿತ್ತು. ನಂತರದ 4 ಸಾಲುಗಳಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಯುದ್ಧ ಸನ್ನದ್ಧವಾಗುವ ಕರೆ ಶ್ರೀಯವರಲ್ಲಿ ಬಹಳ ನಿರ್ಭಾವುಕವಾಗಿ ಜಾಳುಜಾಳಾಗಿದೆ.

ವೀರರಸ ಶ್ರೀಯವರಲ್ಲಿ ಸಮರ್ಪಕವಾಗಿ ಮಾಡಿಲ್ಲ. ಯುದ್ಧ ಸನ್ನದ್ಧರಾದ ಬಗೆ ಮೂಲದಲ್ಲಿದ್ದರೆ ಶ್ರೀಯವರು ಯುದ್ಧಕ್ಕೆ ಸೈನಿಕರನ್ನು ಆಹ್ವಾನಿಸುವಂತೆ ಅನುವಾದಿಸಿದ್ದಾರೆ. 'ಅನುಕರಣೆ' ಎನ್ನೋಣವೆಂದರೆ ಅದೂ ಯಥಾವತ್ತಾಗಿ ನಡೆದಿಲ್ಲ. ಪ್ರಜೆಗಳಿಗೆ ಅಥವಾ ಸೈನಿಕರಿಗೆ ಮನೆ, ಮನೆತನ, ವೈಯಕ್ತಿಕ ಜೀವನಗಳಿಗಿಂತ ನಾಡು ಶ್ರೇಷ್ಠ ಎಂಬುದು ಧ್ವನಿಪೂರ್ಣವಾಗಿದೆ. ವಿಭಿನ್ನಲಯವಿದೆ.

## ಇಂಗ್ಲೆಂಡ್ ನಾವಿಕರು

'Thomas Campbell' ನ 'Ye Mariners of England' ಕವನದ ಅನುವಾದವಿದು. ಎರಡೂ ಕವನಗಳಲ್ಲಿಯೂ 10 ಸಾಲುಗಳ 4 ಪದ್ಯಗಳಿವೆ.

1ನೆಯ ಪದ್ಯ:

'ಇಂಗ್ಲೆಂಡ್ ನಾವಿಕರಿರಾ ಕಾಯುವಿರಿ' ಎಂಬ ಸಾಲಿನಲ್ಲಿ ಮೂಲದಲ್ಲಿಲ್ಲದ ಸಂಬೋಧನೆ ವಿಶೇಷಣಗಳ ನಡುವಿನ ಸಂಬಂಧ ಕಾಣೆಯಾಗಿದೆ. 2 ನೆಯ ಸಾಲಿನ 'That' ಎಂಬುದರಿಂದ ಸೂಚಿತವಾಗಿರುವ ಸಂಬಂಧ ಇಲ್ಲಿ ಇಲ್ಲವಾಗಿದೆ. ಉಳಿದ ಸಾಲುಗಳಲ್ಲಿಯೂ ಅನುವಾದ ಸಪ್ಪೆಯಾಗಿದೆ.

2 ನೆಯ ಪದ್ಯ:

'The spirits of your fathers, shall start form every wave' ಈ ಸಾಲುಗಳು 'ನಮ್ಮ ಪಿತೃಗಳು ಧೀರರು ತೆರೆತೆರೆಗೆ, ಹೊಮ್ಮುವರು ಹುರಿಗೊಳಿಸಲು' ಎಂದಾಗಿದೆ. ಆದರೆ ಈ ಸಾಲುಗಳು 'ನಿಮ್ಮ ಸ್ಫೂರ್ತಿಯ ಜನ್ಮದಾತರು ಹೊಮ್ಮುವ ತೆರೆತೆರೆಗೆ' ಎಂದನುವಾದ ಮಾಡಿರಬೇಕಿತ್ತು. ನಂತರದ ಸಾಲುಗಳಲ್ಲಿ ಅನುವಾದ ಮೂಲಕ್ಕೆ ಸಮೀಪವಾಗಿಯೆ ಸಾಗಿದೆ. 'ಬೊಬ್ಬಿರಿದು ಹಬ್ಬಿರಲು' ಎಂಬುದು ಅತ್ಯಂತ ಉಚಿತಪ್ರಯೋಗವಾಗಿದೆ.

3ನೆಯ ಪದ್ಯ:

ಇಲ್ಲಿಯ ಎಲ್ಲ ಸಾಲುಗಲು ಅರ್ಥಬದ್ಧವಾಗಿ ಭಾವಪೂರ್ಣವಾಗಿ ಮೂಲ ಕ್ಕೆ ಸಮೀಪವಾಗಿ ಅನುವಾದಗೊಂಡಿವೆ.

4ನೆಯ ಪದ್ಯ:

ಎಲ್ಲ ಸಾಲುಗಳು ಮೂಲವನ್ನು ಅನುಸರಿಸಿವೆ. ಬಹುಮಟ್ಟಿಗೆ ಶಬ್ದಶಃ ಅನುವಾದವನ್ನು ಕಾಣಬಹುದು. 'ನಿಶಿಯ ಕಾರೊಡ್ಡು,' 'ಘೋರಕದನದ ಬೊಬ್ಬೆ' ಈ ಪ್ರಯೋಗಗಳಲ್ಲಿನ ಚಿತ್ರಶಕ್ತಿ ಮೂಲವನ್ನು ಮೀರಿಸಿವೆ.

ಆವೇಶಭರಿತವಾದ ಸಾಲುಗಲು ಮೂಲಕ್ಕೆ ಅನುಸಾರಿಯಾಗಿವೆ. ಇಂಗ್ಲೆಂಡಿನ ಪ್ರಾಕೃತಿಕ ಸೌಂದರ್ಯ, ದೇಶ ರಕ್ಷಣೆಯ ಎಚ್ಚರಿಕೆಯ ಜೊತೆಜೊತೆಗೆ ಹಗೆಯೊಡನೆ ಮೈಯಲ್ಲಿ ಕಣ್ಣಾಗಿ ಹೋರಾಡುವ ಸೂಚನೆ ಸೂಚ್ಯವಾಗಿದೆ. ಅಚ್ಚು ಕಟ್ಟಾದ ಅನುವಾದವೆನ್ನಲಡ್ಡಿಯಿಲ್ಲ. ಅನುವಾದ 'ವಿಧೇಯತೆ'ಯ ತತ್ತ್ವವನ್ನು ಪಲಿಸಿದೆ.

### ವೀರಜನ್ಮ

'Robert Browning ನ 'Epilogue to 'Asolando' ಕವನ ಶ್ರೀಯವರಲ್ಲಿ 'ವೀರಜನ್ಮ'ವಾಗಿದೆ. 'Asolando' ಎಂಬಾತನ ಅಂತ್ಯ' ಎಂಬುದು ಪದ್ಯದ ಶೀರ್ಷಿಕೆಗಿರುವ ಅರ್ಥ, ಆದರೆ ಶ್ರೀಯವರು 'ವೀರಜನ್ಮ' ಎಂದಿರುವುದು ಉಚಿತವೆನಿಸದು. ಈ ಕವನಕ್ಕೆ 'ವೀರಮರಣ' ಎಂದು ಅನುವಾದ ಮಾಡಬಹುದಿತ್ತು. ಮೂಲದಂತೆಯೇ ಇಲ್ಲಿಯೂ 4 ಸಾಲಿನ 4 ಪದ್ಯಗಳಿವೆ.

1ನೆಯ ಪದ್ಯ:

ಮೊದಲ ಸಾಲು ಸೂಕ್ತವಾಗಿ ಅನುವಾದವಾಗಿದೆ. 2ನೆಯ ಸಾಲಿನ 'fancies' ಗೆ ಅತ್ಯಂತ ಸೂಕ್ತವಾಗಿ 'ನೆನಹು' ಎಂದು ಅನುವಾದಿಸಿದ್ದಾರೆ. ಮೊದಲ 2 ಸಾಲುಗಳಲ್ಲಿ ಕೌತುಕಭಾವವಿದ್ದರೆ, ಶ್ರೀಯವರಲ್ಲಿ ಅದು ಮಾಯವಾಗಿದೆ, ಬದಲಿಗೆ ಪ್ರಶ್ನಾರ್ಥಕವಾಗಿದೆ. ನಂತರದ ಸಾಲುಗಳಲ್ಲಿ ಸಂಪೂರ್ಣವಾಗಿ ಅನುವಾದ ಎಡವಿದೆ. ಈ 2 ಸಾಲುಗಳು 'ಯಾರು ಅಪಾರವಾಗಿ ಪ್ರೀತಿಸಿದರೊ ಅವರು, ನಿನ್ನ ಬಂಧಿಸಿದ ನಿನ್ನ ಸದೆಬಡಿದ ರೀತಿಗೆ ಮರುಗಿದರು' ಎಂದು ಅನುವಾದ ಮಾಡಿದ್ದರೆ ಸೊಗಸುತ್ತಿತ್ತು.

2ನೆಯ ಪದ್ಯ :

'Oh to love so, be so loved, yet so mistaken !, what had I on earth to do' ಎಂಬ ಸಾಲುಗಳು ಅನುವಾದದಲ್ಲಿ ಅಸಂಬದ್ಧವಾಗಿವೆ. 'ನಾನು ಬದುಕಿದ್ದಾಗ ಯಾರೆನಗೆ ಒಲಿದರೊ ನಾನಾರಿಗೆ ಒಲಿದೆನೊ, ಆ ಒಲವು ಇನ್ನೂ ಬತ್ತಿಲ್ಲ' ಎಂದು ಈ ಎರಡು ಸಾಲುಗಳನ್ನು ಅನುವಾದಿಸಬಹುದಿತ್ತು. 3ನೆಯ ಸಾಲಿನಲ್ಲಿ ಮೂಲದ ಭಾವ ಕೊಂಚವೂ ಎಡೆಪಡೆದಿಲ್ಲ. 4ನೆಯ ಸಾಲು ಸಹ ಮೂಲಕ್ಕೆ ದೂರವಾಗಿದೆ. ಒಟ್ಟಾರೆ ಈ 4 ಸಾಲುಗಳಲ್ಲಿ, 'ನಾನು ಬದುಕಿದ್ದಾಗ ಸೋಮಾರಿತನ, ಅಮಾನುಷ ಅತಿರೇಕ ಭಾವದ, ಗುರುಯಿಲ್ಲದವರು, ಅಸಹಾಯಕರು, ಅಯೋಗ್ಯರೊಂದಿಗೆ ವ್ಯವಹರಿಸಿದವನಲ್ಲ. ಆದರಿಂದಲೇ ನನ್ನನೊಲಿದವರ, ನಾನೊಲಿದವರ ಒಲವು ಬತ್ತದೆ ಜೀವಂತವಾಗಿದೆ' ಎಂಬರ್ಥವಿದೆ. ಆದರೆ ಶ್ರೀಯವರಲ್ಲಿ ಈ ಭಾವಗಳು ಬರದೇ, ಭಾವವೂ ನಿಂತು, ಸೋತು, ಸೊರಗಿದೆ.

3ನೆಯ ಪದ್ಯ :

4 ಸಾಲುಗಳು ಮೂಲಕ್ಕೆ ಅತ್ಯಂತ ಸಮರ್ಪಕವಾಗಿ ಅನುವಾದಗೊಂಡಿವೆ. 'ಎದೆಯ ಕೊಟ್ಟು ನುಗ್ಗಿದವನು' ಎಂಬುದಂತೂ ತಕ್ಷಣ ನಮ್ಮನ್ನು ಕಲ್ಪನಾಲೋಕಕ್ಕೆ ಕರೆದೊಯ್ಯುತ್ತದೆ. ಉಳಿದಂತೆ ಮೂಲದ ಭಾವವು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

4ನೆಯ ಪದ್ಯ :

'ಹೋರು', 'ಮೀರು' ಎಂಬ ಉದ್ಗಾರಗಳು ಮೂಲವನ್ನು ಮೀರಿ ಚಿತ್ರಕ ಶಕ್ತಿಯನ್ನೊಳಗೊಂಡಿವೆ. ಇನ್ನುಳಿದಂತೆ ಎಲ್ಲ ಸಾಲುಗಳು ಮೂಲಕ್ಕೆ ಅತ್ಯಂತ ನಿಷ್ಠವಾಗಿವೆ.

ವೀರರಸ ಪ್ರಧಾನವಾದ ಕವನ ಮನಮುಟ್ಟುವಂತಿದೆ. 'ಅನುಕರಣೆ'ಗೆ ಉತ್ತಮ ಉದಾಹರಣೆಯಾಗಿದೆ. ಉತ್ಸಾಹವೂ ಅಲ್ಲಲ್ಲಿ ಎಡೆಪಡೆದಿದೆ. ಧೃತಿ, ರೋಮಾಂಚನಗಳಿಂದ ಕವನದ ಸೌಂದರ್ಯ ಹೆಚ್ಚಿದೆ. ತ್ರಿಮಾತ್ರಲಯವಿದೆ.

**ಬಂದರು ದಾಟುವುದು**

'Alfred, Lord Tennyson ನ 'Crossing the Bar' ಕವನದ ಅನುವಾದವಾಗಿದೆ. ಮೂಲದಂತೆ 4 ಸಾಲುಗಳ 4 ಪದ್ಯಗಳೂ ಇಲ್ಲಿಯೂ ಇವೆ.

1ನೆಯ ಪದ್ಯ:

'Sunset and evening star' ಎಂಬುದು 'ಹೊತ್ತಿಳಿವು, ಸಂಜೆಬೆಳ್ಳಿ' ಎಂದಾಗಿದೆ. 'ಸಂಜೆಬೆಳ್ಳಿ' ಮೂಲವನ್ನು ಮೀರಿ ನವಿರಾದ ಭಾವ ಹುಟ್ಟಿಸುತ್ತದೆ. 2ನೆಯ ಸಾಲು ಮೂಲದಲ್ಲಿಲ್ಲದ ಆಶ್ಚರ್ಯಭಾವವನ್ನು ಹೊಮ್ಮಿಸಿದೆ. 3 ಮತ್ತು 4ನೆಯ ಸಾಲುಗಳು ಮೂಲಕ್ಕೆ ಸಮೀಪವಾಗಿವೆ.

2ನೆಯ ಪದ್ಯ:

'ಮೊರೆಯದೆಯೆ, ಸೊರೆಯದೆಯೆ' ಎಂಬುದು ಮೂಲಕ್ಕಿಂತಲೂ ಸುಂದರವಾಗಿ ಕಡಲ ಸೌಂದರ್ಯವನ್ನು ಬಿಂಬಿಸುತ್ತದೆ. 2ನೆಯ ಸಾಲಿನ 'ತುಂಬುದೆರೆಯುಬ್ಬು' ಅದ್ಭುತ ಚಿತ್ರಶಕ್ತಿಯನ್ನು ಹೊಂದಿದೆ. 3 ಮತ್ತು 4ನೆಯ ಸಾಲುಗಳು ಮೂಲಕ್ಕೆ ನಿಷ್ಠವಾಗಿವೆ.

3ನೆಯ ಪದ್ಯ :

ಮೊದಲ ಸಾಲಿನ 'Twilight' ಎಂಬುದು 'ಕಣ್ಮುಬ್ಬು' ಎಂದಾಗಿದೆ. ಈ ಪದ ಭಾಷಾಶಾಸ್ತ್ರದ 'ಉತ್ಪಾಕತೆ'ಯ ಅಂಶಕ್ಕೆ ಉದಾಹರಣೆಯಾಗಿದೆ. ಮೊದಲೆರಡು ಸಾಲುಗಳು ಕುತೂಹಲ, ಭಾವವನ್ನು ಮೂಡಿಸಿ ಮೂಲಕ್ಕೆ ಹತ್ತಿರವಾಗಿವೆ. 3ನೆಯ ಸಾಲಿನ 'ಕೊರಗಾಟ' ಆಡುನುಡಿಯ ಸೊಗಡನ್ನು ಧರಿಸಿದೆ. 4ನೆಯ ಸಾಲು ಮೂಲಕ್ಕೆ ಸಮೀಪವಾಗಿದೆ.

4ನೆಯ ಪದ್ಯ :

ಎಲ್ಲ ಸಾಲುಗಳು ಮೂಲವನ್ನು ಬಹುಮಟ್ಟಿಗೆ ಅನುಸರಿಸಿ ಅನುವಾದಗೊಂಡಿದೆ. 'Pilot' ಎಂಬುದು 'ತಾರಕ' ಎಂದು ಕನ್ನಡೀಕರಣಗೊಂಡಿದೆ. ಮೂಲದಲ್ಲಿರುವ ಜೀವಿಸುವ ಭರವಸೆಯು ಇಲ್ಲಿ ಎಡೆಪಡೆದಿದೆ.

ಕವನದುದ್ದಕ್ಕೂ ಕೌತುಕಭಾವ ನವಿರಾಗಿ ವ್ಯಕ್ತವಾಗಿದೆ. ವೀರನೊಬ್ಬನನ್ನು ಯುದ್ಧಕ್ಕೆ ಕಳುಹಿಸುವ ಸಂದರ್ಭದಲ್ಲಿ ಬರಬೇಕಾದ ವೀರರಸ ಔಚಿತ್ಯಪೂರ್ಣವಾಗಿ ಬಂದಿದೆ. ವಿಷಾದ ಭಾವವೂ ಅಲ್ಲಲ್ಲಿ ಇಡಿಕಿದಿದೆ. ಗುರಿ ತಲುಪುವ ಭರವಸೆಯನ್ನೊಳಗೊಂಡ ಧ್ವನಿ ಸೊಗಸಾಗಿ ಹೊಮ್ಮಿದೆ.

**ಹೇಳದಿರು ಹೋರಾಡಿ ಫಲವಿಲ್ಲವೆಂದು**

Arthur Hugh clough ಬರೆದ 'To' ಕವನದ ಅನುವಾದವಿದು, ಮೂಲದಲ್ಲಿ 16 ಸಾಲುಗಳ ಈ ಕವನ ಶ್ರೀಯವರಲ್ಲಿ 4 ಸಾಲುಗಳ 4 ಪದ್ಯಗಳಾಗಿದೆ.

1ನೆಯ ಪದ್ಯ :

ಮೊದಲೆರಡು ಸಾಲುಗಳು ಸಮರ್ಪಕವಾಗಿ ಅನುವಾದಗೊಂಡಿದೆ. 3ನೆಯ ಸಾಲಿನ 'Faints not' ಎಂಬುದಕ್ಕೆ 'ಶಕ್ತಿಗುಂದಲಾರದ' ಎಂದು ಅನುವಾದ ಮಾಡಬಹುದಾಗಿದ್ದರೂ ಶ್ರೀಯವರು 'ಗೆಲ್ಲುವುದು ಕಾಣೆ' ಎಂದಿರುವುದರಲ್ಲಿ ಮೂಲವನ್ನು ಮೀರಿದ ಸೊಗಸು ವ್ಯಕ್ತವಾಗಿದೆ. 4ನೆಯ ಸಾಲು ಮೂಲವನ್ನು ಅನುಸರಿಸಿದೆ.

2ನೆಯ ಪದ್ಯ :

ಮೊದಲ ಸಾಲಿನ 'Dupes' ಎಂಬುದಕ್ಕೆ 'ನೆಚ್ಚಿ ಕೆಡುವೊಡೆ' ಎಂದಾಗಿರುವುದು, 'Fears may be liars' ಎಂಬುದು 'ಸೆಡಿದಳುಕು ಕೆಡದೆ'? ಎಂದಾಗಿರುವುದು ಶ್ರೀಯವರ ಶಬ್ದಸಂಪತ್ತಿಗೆ ಸಾಕ್ಷಿ. ಮೂಲದ ಆಶ್ಚರ್ಯಭಾವ ಇಲ್ಲಿ ಮಾಯವಾಗಿದೆ. 2ನೆಯ ಸಾಲು ಮೂಲವನ್ನು ಮೀರಿದ ಭಾವಸೌಂದರ್ಯವಿದೆ. 3 ಮತ್ತು 4ನೆಯ ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ.

3ನೆಯ ಪದ್ಯ :

'Tired waves' 'ತೆರೆ ಬಳಲಿ' ಎಂದಾಗಿರುವುದು ಯುಕ್ತಾನುವಾದವಾಗಿದೆ. 'ಹೊಯ್ದು ಹೊಯ್ದು' ಎಂದು 2 ಬಾರಿ ಬಂದಿರುವುದು ಧ್ವನಿಪೂರ್ಣವಾಗಿದೆ. 'Inch to gain' ' ಎಂಬುದಕ್ಕೆ 'ಬೆರಳುನೆಲವನು' ಎಂದು ಅನುವಾದಿಸಿರುವುದು ಶ್ರೀಯವ ಭಾಷಾಪಾಂಡಿತ್ಯದ ಆಳವನ್ನು ತಿಳಿಸುತ್ತದೆ. ಇದು ಭಾಷಾಶಾಸ್ತ್ರದ 'ಉತ್ಪಾದಕತೆ'ಗೆ ಉತ್ತಮ ಉದಾಹರಣೆ. ನಂತರದ ಸಾಲುಗಳಲ್ಲಿ ಹೋರಾಡುವ ಉತ್ಸಾಹಭಾವವು ಮೂಲವನ್ನು ಹಿಂದಿಕ್ಕಿ ಸೊಬಗ ಸೂಸಿದೆ.

4ನೆಯ ಪದ್ಯ :

'ಬೆಳಗಾಗ', 'ಬರುವಂದುಕ' ಪದಗಳಲ್ಲಿ ಆಡುಮಾತಿನ ಸೌಂದರ್ಯ ಇಣುಕಿದೆ. ಉಳಿದ ಎಲ್ಲ ಸಾಲುಗಳು ಮೂಲಕ್ಕನುಸಾರಿಯಾಗಿವೆ.

ಆದಿಪ್ರಾಸ ಅಂತ್ಯಪ್ರಾಸಗಳಿಂದ ಕವನದ ಅಂದ ಇನ್ನೂ ಹೆಚ್ಚಿದೆ. 2ನೆಯ ಪದ್ಯದ ಒಂದು ಮತ್ತು 2ನೆಯ ಸಾಲಗಳಲ್ಲಿ, 3ನೆಯ ಪದ್ಯದ 4 ಸಾಲುಗಳಲ್ಲಿ ಅನುಪ್ರಾಸ ಬಂದಿರುವುದು ಗಮನಾರ್ಹ. ವೀರರಸ ಉತ್ಸಾಹದೊಡಗೂಡಿ ವ್ಯಕ್ತವಾಗಿದೆ. ಕರ್ತವ್ಯಪರನಾಗಿ ಹೋರಾಡಿದರೆ ಫಲವುಂಟು ಎಂಬ ಧ್ವನಿ ಕವನದ ಕೊನೆಯಲ್ಲಿ ವ್ಯಕ್ತವಾಗಿದೆ. ಕೊನೆಯ 2 ಸಾಲುಗಳಲ್ಲಿ ಶ್ಲೇಷೆಯಿದ್ದು ಕವನ ಭಾವಪರಿಪೂರ್ಣತೆಯನ್ನು ಪಡೆದಿದೆ. ಈ ಕವನವನ್ನು ಕುರಿತು 'ಅದನ್ನು ವಸಾಹತುಶಾಹಿಯ ವಿರುದ್ಧದ ಪದ್ಯವನ್ನಾಗಿಯೂ ಓದಬಹುದು'.

**ನಮ್ಮುಗೆಯ ನಾಡು**

'Lady Carolina Nairne' ಯ 'The land of the Leal' ಕವನದ ಅನುವಾದ 'ನಮ್ಮುಗೆಯ ನಾಡು'. 4 ಸಾಲುಗಳ 6 ಪದ್ಯಗಳನ್ನು ಎರಡು ಕವನಗಳಲ್ಲಿಯೂ ಕಾಣಬಹುದು.

1ನೆಯ ಪದ್ಯ :

4 ಸಾಲುಗಳು ದೇಶಸೇವಕನೋರ್ವನ (ಸೈನಿಕರ) ತನುಮನಪೂರ್ವಕವಾಗಿ ತಾಯ್ನಾಡನ್ನು ಕಟ್ಟಲು, ರಕ್ಷಿಸಲು ಸಿದ್ಧನಾದುದರ ಬಗೆಯನ್ನು ಧ್ವನಿಸುತ್ತವೆ. ಮೂಲದಲ್ಲಿಲ್ಲದ ಭಾವೋನ್ನತಿಯಿದೆ. ಎಲ್ಲಕ್ಕೂ ಮಿಗಿಲಾಗಿ 'ಅಮ್ಮ' ಎಂದು ಕೊನೆಗೆ ಬಂದಿರುವುದು ಹೃದ್ಯವಾಗಿದೆ.

2ನೆಯ ಪದ್ಯ :

3ನೆಯ ಸಾಲು 'ಬಾಲು ಬಲ್ಸೊಗಸಮ್ಮ' ಎಂದು ಭಾವಾನುವಾಗಿರುವುದನ್ನು ಬಿಟ್ಟರೆ ಉಳಿದ ಸಾಲುಗಳು ಮೂಲಕ್ಕನುಸಾರಿಯಾಗಿವೆ.

3ನೆಯ ಪದ್ಯ :

ಮೊದಲೆರಡು ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ. 3ನೆಯ ಸಾಲಿನ 'I will welcome you' ಎಂಬುದಕ್ಕೆ 'ನಿನ್ನನು ಸ್ವಾಗತಿಸುವೆನು' ಎಂದಾಗುವ ಬದಲಿಗೆ, 'ನಿನ್ನನೆದಿರ್ಗೊಳುವೆನಮ್ಮ' ಎಂದಾಗಿ ಮೂಲದಲ್ಲಿಲ್ಲದ ಭಾವ ತೀವ್ರತೆಯನ್ನೊಳಗೊಂಡಿದೆ. 4ನೆಯ ಸಾಲು 'ನೆಮ್ಮುಗೆಯ ನಾಡ ಬಳಿಗೆ' ಎಂದು ಅನುವಾದವಾಗಬೇಕಾಗಿತ್ತು.

4ನೆಯ ಪದ್ಯ :

4 ಸಾಲುಗಳು ಸೂಕ್ತವಾಗಿ ಅನುವಾದಗೊಂಡಿದೆ. ಈ ಕವನದಲ್ಲಿ ಬಂದಿರುವ ಹೆಣ್ಣು 'ಸ್ವಾತಂತ್ರ್ಯದೇವಿ'

ಎಂಬುದನ್ನು ಈ ಪದ್ಯ ಪ್ರಕಟಿಸುತ್ತದೆ. ಇದಕ್ಕಿಂತ ಮಿಗಿಲಾಗಿ ಅನುವಾದ ಮಾಡಲು ಸಾಧ್ಯವಿಲ್ಲ ಎಂಬಂತಿದೆ ಅನುವಾದ.

5ನೆಯ ಪದ್ಯ :

'ನೋವನುಳಿ' ಎಂಬುದಂತೂ ಶೋಕರಸಪೂರ್ಣವಾಗಿದೆ. 2ನೆಯ ಸಾಲು ನೋವಿನ ದಿನ ಕಳೆದು ಸಂತಸ ಎದುರಾಗುವ ಭರವಸೆಯನ್ನು ಧ್ವನಿಸುತ್ತದೆ. 3ನೆಯ ಸಾಲು ಮೂಲದ ಭಾವವನ್ನೆ ಗ್ರಹಿಸಿಲ್ಲ. 'Angels wait on me' ಎಂಬುದು 'ದೇವರಕೊ ಕರೆವನಮ್ಮ' ಎಂದಾಗಿ ಸಪ್ಪೆಯಾಗಿದೆ. ದೇಶತೆಗಳ ರಕ್ಷ ಶಿರದೊಳಿಹುದು ಎಂದು ಭಾಷಾಂತರಿಸಬಹುದಿತ್ತು. 4ನೆಯ ಸಾಲು ಮೂಲದಂತೆಯೆ ಇದೆ.

6ನೆಯ ಪದ್ಯ :

ಮೊದಲ ಸಾಲು ವಾತ್ಸಲ್ಯಭಾವವನ್ನು ಸ್ಫುರಿಸಿ ಸಮರ್ಪಕವಾಗಿ ಅನುವಾದವಾಗಿದೆ. 2ನೆಯ ಸಾಲು 'ಬದುಕಿನ ನಶ್ವರತೆ'ಯನ್ನು ಧ್ವನಿಪೂರ್ಣವಾಗಿ ಹೊಮ್ಮಿಸಿ ಯಶಸ್ವಿಯಾಗಿದೆ. 3ನೆಯ ಸಾಲಿನಲ್ಲಿ 2ನೆಯ ಸಾಲಿನಲ್ಲಿದ್ದ ವೈರಾಗ್ಯಭಾವ ಮಾಯವಾಗಿ 'ಹೊಸ ನಾಡೊಂದನ್ನು ಕಟ್ಟಿ, ಬಾಳುವ ಭರವಸೆ'ಯನ್ನು ಧ್ವನಿಸುತ್ತದೆ. 4ನೆಯ ಸಾಲು ಸೂಕ್ತವಾಗಿ ಅನುವಾದವಾಗಿದೆ.

ವೈರಿಯ ದೆಸೆಯಿಂದ ಕಳೆದುಕೊಂಡ ತಾಯ್ನಾಡ ಸಾನ್ನಿಧ್ಯವನ್ನು ಮತ್ತೆ ಪಡೆಯುವ, ಹಿಂದಿನ ಚರಿತ್ರೆಯನ್ನು ಮತ್ತೆ ಕಣ್ಣೆದುರಿಗೆ ಕಟ್ಟುವ ಬಯಕೆ, ಆಶಾವಾದಿತನಗಳು ಇಲ್ಲಿ ಧ್ವನಿಪೂರ್ಣವಾಗಿವೆ. ಸಾಧಿಸುವ ಛಲ ಆಲಂಬನ ವಿಭಾವವಾಗಿ ವೀರರಸ ಆರ್ಭಟವಿಲ್ಲದೆ ಹರಿದಿದೆ. ಇದಕ್ಕಿಂತ ಮಿಗಿಲಾಗಿ ಅನುವಾದ ಮಾಡಲು ಸಾಧ್ಯವಿಲ್ಲ ಎಂಬಂತಿದೆ. ಪ್ರತಿ ಪದ್ಯದ 4ನೆಯ ಸಾಲುಗಳಲ್ಲಿ ಮೊದಲ ಮೂರು ಸಾಲುಗಳಲ್ಲಿದ್ದ ಅಂತ್ಯಪ್ರಾಸ ಕಾಣೆಯಾಗಿದೆ. ಹಾಗಾಗಿಯೂ ಅದರಲ್ಲಿ ಒಂದು ಭಾವಸೌಂದರ್ಯವಿದೆ. ಮೂಲಕ್ಕೆ 'ವಿಧೇಯತೆ' ತೋರುವ ಅನುವಾದದ ಬಗೆ ಇದಾಗಿದೆ. ಪಂಚಮಾತ್ರಾಲಯವಿದೆ.

**ರಾಯಲ್ ಜಾರ್ಜ್ ಮುಳುಗಿಹೋದದ್ದು**

William Cowper ನ 'Loss of the Royal George' ಕವಿತೆಯ ಅನುವಾದ ಈ ಕವನ, 4 ಸಾಲುಗಳ 9 ಪದ್ಯಗಳು ಎರಡು ಕಡೆಯಲ್ಲೂ ಇವೆ.

1ನೆಯ ಪದ್ಯ:

'Toll for the brave' ಕನ್ನಡದಲ್ಲಿ 'ಅಳಿದರೇ ಹಾ ಧೀರರು' ಎಂದಷ್ಟೆ ಕಾಣಿಸಿಕೊಂಡಿದೆ. ಉಳಿದ ಸಾಲುಗಳು ಮೂಲದಂತೆಯೇ ಇದೆ.

2ನೆಯ ಪದ್ಯ :

2 ಸಾಲುಗಳು ಮೂಲವನ್ನು ಅನುಸರಿಸಿವೆ. 3ನೆಯ ಸಾಲಿನ Vessel heel ಎಂಬುದು 'ಒಂದು ಮಗ್ಗಲು'

ಎಂದಾಗಿರುವುದು ಸೂಕ್ತವಾಗಿಯೇ ಇದೆ. 'Laid her on her side' ಎಂಬ ಶಬ್ಧಚಿತ್ರವು ಅನುವಾದದಲ್ಲಿ ಊನವಾಗದೇ 'ಒರಗಿಸಿದ್ದರು ಹಡಗನು' ಎಂದು ಬಂದಿರುವುದು ಸ್ತುತ್ಯರ್ಹ ಪ್ರಯೋಗವಾಗಿದೆ.

3ನೆಯ ಪದ್ಯ :

Land breeze ನ್ನು 'ನೆಲಗಾಳಿ' ಯನ್ನಾಗಿಸಿದ್ದಾರೆ, 'Shrouds' ಗೆ 'ಕುಲುಕಿತು' ಸೂಕ್ತ ಪ್ರಯೋಗವಾಗಿಲ್ಲ. ಇದನ್ನು 'ಹೊದ್ದಿತು' ಎಂದು ಅನುವಾದಮಾಡಬಹುದಾಗಿತ್ತು. ಉಳಿದ ಸಾಲುಗಳಲ್ಲಿ ಸಮರ್ಪಕವಾಗಿ ಅನುವಾದವಾಗಿದೆ.

4ನೆಯ ಪದ್ಯ :

'Sea fight' ಎಂಬುದು 'ಹೋರಾಟ' ಎಂದಷ್ಟೇ ಆಗಿದೆ. 'ಅವನ ಕಡಲ ಹೋರಾಟ ಕಡೆಯಾಯಿತು' ಎಂದಿದ್ದರೆ ಚೆನ್ನಾಗಿರುತ್ತಿತ್ತು. 'Brave kempenfelt is gone' ಎಂಬುದು 'ಹೋದ ಕೆಂಪೆನಫೆಲ್ಟನು' ಎಂದು ಮಾತ್ರ ಅನುವಾದಗೊಂಡಿದೆ. 'Work of glory' ಎಂಬುದಕ್ಕೆ 'ಸಾಹಸ' ಎಂದಷ್ಟೇ ಹೇಳುವುದು ಉಚಿತವಲ್ಲ ಎಂದೆನಿಸುತ್ತದೆ.

5ನೆಯ ಪದ್ಯ :

ಮೊದಲ ಸಾಲು 'ಕಾಲದೊಳಗದು ಆಗಲಿಲ್ಲ' ಎಂದು ಅನುದವಾಗಿದೆ. 'ಕಾಳಗದೊಳಗದು ಆಗಲಿಲ್ಲ' ಎಂದಿರಬೇಕಿತ್ತು. ಬಹುಶಃ ಇದು ಮುದ್ರಾರಾಕ್ಷಸನ ಕೈವಾಡವಿರಬಹುದು. ವೀರನಿಗೆ ಒದಗಿರುವ ದುರ್ಮರಣದ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುವ ಪಂಕ್ತಿಗಳಲ್ಲಿ ಬರುವ 'Tempest', 'Shock', 'Fatal leak' ಈ ಶಬ್ಧಗಳಿಗೆ 'ಗಾಳಿ', 'ಒದರು', 'ಒಡಕು' ಎಂಬ ಶಬ್ಧಗಳು ಪರ್ಯಾಯವಾಗಿ ಕಾಣಿಸಿಕೊಂಡಿರುವುದರಿಂದ, ಅನುವಾದದ ಆ ಭಾಗ ದುರ್ಬಲವಾಯಿತೇನೋ ಎನಿಸುತ್ತದೆ.

6ನೆಯ ಪದ್ಯ :

ಮೇಲಕೆತ್ತಿರ ಹಡಗನು  
ಒಂದೊಮ್ಮೆ ನಡುಗಿಸಿದ ಹಗೆಯನು  
ಮರಳಿ ಸಲಿಸಿರಿ ನಿಮ್ಮ  
ಇಂಗ್ಗೆಂಡ್ ಕಂಬನಿ ಕಡವನು

ಎಂದು ಅನುವಾದ ಮಾಡಬಹುದಾಗಿತ್ತು. ಆದರೆ ಮೂಲಕ್ಕಿಂತ ಸಾಲುಗಳು ಅನುವಾದದಲ್ಲಿ (ಶ್ರೀ) ಭಿನ್ನವಾಗಿದ್ದು ಅರ್ಥಸಂಧಿಗ್ಧತೆ, ಭಾವಗೊಂದಲವನ್ನುಂಟುಮಾಡುತ್ತದೆ.

ಮತ್ತೊಮ್ಮೆ ಮುನ್ನಿನ ಹಡಗನು ನೋಡಲಿಕ್ಕಾಗದ ಅನಿವಾರ್ಯತೆ ಕವನದ ಏಳು, ಎಂಟು ಮತ್ತು ಒಂಬತ್ತನೆಯ ಪದ್ಯಗಳಲ್ಲಿ ಮನೋಜ್ಞವಾಗಿ ಬಿಂಬಿತವಾಗಿದೆ. ಅಂತ್ಯಪ್ರಾಸಕ್ಕೆ ಪಕ್ಕಾಗದಿದ್ದರೆ ಇನ್ನಷ್ಟು ಭಾವುಕವಾಗುತ್ತಿತ್ತು ಈ ಕವಿತೆ.

**ಇಂಗ್ಲೆಂಡ್**

W.E. Henley ನ 'Pro rege nosetro' ಕವನದ ಅನುವಾದವಿದು. 9 ಸಾಲುಗಳ 5 ಪದ್ಯಗಳು ಎರಡೂ

ಕವನಗಳಲ್ಲಿಯೂ ಕಾಣಬಹುದು. ತಾಯ್ನಾಡಿಗೆ ನನ್ನ ಕಾಣಿಕೆ ಏನು ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುವ ರೀತಿ ಈ ಕವನದಲ್ಲಿದೆ.

1ನೆಯ ಪದ್ಯ:

ಮೊದಲನೆಯ ಪದ್ಯದ 'ಬೇಳಿ' ಎಂಬುದು ಉಚಿತ ಪ್ರಯೋಗವಲ್ಲ. ಉಳಿದಂತೆ ಅನುವಾದ ಎಡವಿಲ್ಲ. ಅಂತ್ಯಪ್ರಾಸ ತರಲು ಬಳಸಿರುವ ಪದಗಳು ಕವನದ ಸೌಂದರ್ಯಕ್ಕೆ ಕರಿಚುಕ್ಕೆಯಾಗಿವೆ.

2ನೆಯ ಪದ್ಯ :

ಅನುವಾದ ಸಮರ್ಪಕವಾಗಿದೆ. 'ಎಲ್ಲಿ ನಲಿವನು ಕಂಡು ಎಂಬುದು 'When shall here joice again' ಎಂಬುದರ ಸರಿಯಾದ ಭಾಷಾಂತರವಲ್ಲ. 'ಇಲ್ಲೆಲ್ಲಿ ನಲಿವ ಕಾಣುವುಕು' ಎಂದು ಈ ಸಾಲು ಭಾಷಾಂತರವಾಗಿದ್ದರೆ ಚೆನ್ನಾಗಿರುತ್ತಿತ್ತು. ಉಳಿದ ಸಾಲುಗಳು ಮೂಲಕ್ಕನುಸಾರಿಯಾಗಿವೆ.

3ನೆಯ ಪದ್ಯ :

English earth and sky ಎಂಬುದಕ್ಕೆ 'ನಿನ್ನ ಹೊಲ ಮನೆ ಚೆಂದ' ಎಂದಿರುವುದು ಯುಕ್ತವಾಗಿಲ್ಲ. ನಿನ್ನೊಡಲ ಮಡಿಲ ಬಾನಿನ ನಡುವೆ ಬಾಲು ಮಿಗಿಲಾನಂದ' ಎಂದಾಗಿದ್ದರೆ ಚೆನ್ನಾಗಿರುತ್ತಿತ್ತು. ಮಿಕ್ಕ ಸಾಲುಗಳು ಮೂಲಕ್ಕೆ ವಿಧೇಯವಾಗಿ ಸಾಗಿವೆ.

4ನೆಯ ಪದ್ಯ :

ಎಲ್ಲ ಸಾಲುಗಳು ಭಾವಪೂರ್ವಕವಾಗಿ ಅನುವಾದವಾಗಿದೆ. ಇಂಚಿಂಚಿನಷ್ಟು ಅನುವಾದ ಮೂಲವನ್ನು ಬಿಟ್ಟು ದೂರ ಸಾಗಿಲ್ಲ.

5ನೆಯ ಪದ್ಯ :

7ನೆಯ ಸಾಲು ಮೂಲದ ಭಾವ ಧ್ವನಿಗಳನ್ನು ಗ್ರಹಿಸದೆ ದೂರವಾಗಿದೆ. ಆದರೆ ಇನ್ನುಳಿದ ಸಾಲುಗಳು ಆ ಕೊರತೆಯನ್ನು ಮುಚ್ಚಿಬಿಡುವಂತಿದೆ ಅನುವಾದ.

ದೇಶಭಕ್ತಿ ಮಿಳಿತವಾದ ಈ ಕವನದಲ್ಲಿ ಉತ್ಸಾಹವೇ ಸ್ಥಾಯಿಭಾವವಾಗಿ ವೀರರಸ ಮೊನಚಾಗಿದೆ. ತಾಯ್ನಾಡ ಅಭಿಮಾನ, ಸೆಳೆತ, ಮಮತೆಗಳು ಧ್ವನಿಪೂರ್ಣವಾಗಿವೆ. ಮೂಲದ ಸರಳತೆ, ಮುಗ್ಧತೆಗಳು ಇಲ್ಲೂ ಎಡೆಪಡೆದಿವೆ. 'ವಿಧೇಯತೆ'ಯ ಹಾದಿಯಲಿ ಅನುವಾದ ಸಾಗಿದೆ. ನಾಡಿನ ಪರಂಪರೆಯ ಬಗ್ಗೆ ತೀವ್ರವಾದ ಭಕ್ತಿಯು ಇಲ್ಲಿ ವ್ಯಕ್ತವಾಗಿದೆ. ಪಂಚಮಾತ್ರಾಲಯವಿದೆ.

## ದೇಶಸೇವಕ

Robert Browning ನ 'The patriot' ಕವನದ ಅನುವಾದವಿದು. ಮೂಲಕವನದಲ್ಲಿರುವಂತೆ ಇಲ್ಲಿಯೂ 5 ಸಾಲುಗಳುಳ್ಳ 6 ಪದ್ಯಗಳಿವೆ.

1ನೆಯ ಪದ್ಯ:

'Myrtle' ಎಂಬುದಕ್ಕೆ 'ಸೇಸೆಗಳು' ಎಂದಿರುವುದು ಬಹಳ ಉಪಯುಕ್ತವಾಗಿದೆ. 'Heave and sway' ಎಂಬುದಕ್ಕೆ 'ಹಿಗ್ಗಿ ಮುಗ್ಗಾಗೆ' ಎಂದು ಅನುವಾದಿಸಿರುವುದು ಉಚಿತವಾಗಿಯೇ ಇದೆ. ಎಲ್ಲ ಸಾಲುಗಳಲ್ಲಿಯೂ ಕುತೂಹಲ ಭಾವ ಮೂಡಿನಿಂತಿದೆ.

2ನೆಯ ಪದ್ಯ :

'The old walls' ಎಂಬುದನ್ನು 'ಊರು' ಎಂದಿರುವುದು ಅಸಹಜವೆನಿಸುತ್ತದೆ. 'ಹಳೆಯ ಗೋಡೆಗಳು' ಎಂದು ಸರಳವಾಗಿ ಭಾಷಾಂತರಿಸಿದ್ದರೆ ಮೂಲದ ಭಾವಕ್ಕಾಗಲೀ ಅರ್ಥನಿಖರತೆಗಾಗಲಿ ಯಾವ ತೊಂದರೆಯೂ ಆಗುತ್ತಿರಲಿಲ್ಲ. ಸೂರ್ಯ 'ಸೂರಿಯ' ನಾಗಿರುವುದು ಹಿತವೆನಿಸುತ್ತದೆ. ಉತ್ಸಾಹವೂ ಮೈದಳೆದು ನಿಂತಿದೆ.

3ನೆಯ ಪದ್ಯ :

'Loving friends' 'ಒಲುಮೆಯ ಜನ' ಆಗಿರುವುದು ಭಾವವೈಶಾಲ್ಯತೆಯನ್ನು ಸೂಚಿಸುತ್ತದೆ. ಶೋಕವು ಇಣುಕಿದೆ. ಉಳಿದ ಸಾಲುಗಳಲ್ಲಿ ಸಮರ್ಪಕವಾಗಿ ಅನುವಾದ ನಡೆದಿರುವುದನ್ನು ಕಾಣಬಹುದು.

4ನೆಯ ಪದ್ಯ :

'ತುಳ್ಳಿ ತುಳಿದಾಡಿ, ಶೂಲದಡಿಯಲ್ಲಿ, ಹೆಳವರಿಣಿಕಿಪರು' ಎಂಬ ಸಾಲುಗಳಲ್ಲಿ ಮೂಲದ ಬೀಭತ್ಸರಸವೂ ಇದೆ. ಅನುವಾದ ಇಲ್ಲಿನ ಯಾವ ಸಾಲುಗಳಲ್ಲಿಯೂ ಮೂಲಕ್ಕೆ ದೂರವಾಗಿ ನಡೆದಿಲ್ಲ.

ಸ್ವದೇಶಾಭಿಮಾನಿಯೋರ್ವನ ಹತಾಶೆ, ನಿರಾಸೆ, ಅಸಮಾಧಾನಗಳು ಬ್ರಾನಿಂಗನೇ ಕನ್ನಡದಲ್ಲಿ ಬರೆದನೊ ಎಂಬಂತಿದೆ 5 ಮತ್ತು 6ನೆಯ ಪದ್ಯಗಳು. ಈ ಕವನ ಅಚ್ಚುಕಟ್ಟಾದ ಭಾಷಾಂತರ ಎನ್ನಲು ಅಡ್ಡಿಯಿಲ್ಲ. ಪಂಚಮಾತ್ರಾಲಯವಿದೆ.

## ರಾವುತರ ದಾಳಿ

Alfred Lord Tennyson ನ 'The charge of the light brigade' ಕವಿತೆಯ ಅನುವಾದ 'ರಾವುತರ ದಾಳಿ' ಅಸಮಪಾದರಚನೆಯುಳ್ಳ 6 ಪದ್ಯಗಳು ಇಲ್ಲೂ ಇವೆ.

ಮೊದಲ ಪದ್ಯದ 'Valley' ಇಲ್ಲಿ 'ಪಂಜರ' ವಾಗಿರುವುದು ಅಸಮರ್ಪಕವಾಗಿದೆ. ಕಣಿವೆಗೂ ಪಂಜರಕ್ಕೂ ಇಲಿ ವ್ಯತ್ಯಾಸವಿಲ್ಲದಂತಾಗಿದೆ. 'ಅಶ್ವಾರೋಹಿಗಳು' ಎಂದು ಭಾಷಾಂತರಿಸಬಹುದಾಗಿದ್ದರೂ 'ಕುದುರೆ' ಪದ ಅಸಂಬದ್ಧವಾಗಿ

ಪ್ರಯೋಗವಾಗಿದೆ. ಎಲ್ಲ ಪದ್ಯಗಳ ಎಲ್ಲ ಸಾಲುಗಳು ಮೂಲಕ್ಕೆ ಅತ್ಯಂತ ಸಮೀಪವಾಗಿ ಅನುವಾದವಾಗಿವೆ. ವೀರರಸವು ಇಲ್ಲಿ ಅತ್ಯುತ್ಸಾಹದಿಂದ ಧಾರೆಧಾರೆಯಾಗಿ ಹರಿದಿದೆ. ರಾವುತರ ಶೌರ್ಯ, ಸಾಹಸ, ಉನ್ನತಿಗೆ, ತ್ಯಾಗ, ಬಲಿದಾನಗಳು ಅತ್ಯಂತ ಧ್ವನಿಪೂರ್ಣವಾಗಿವೆ. ಕವನದ ಸೊಬಗಿಗೆ ಆದಿಪ್ರಾಸ ಮತ್ತು ಅಂತ್ಯಪ್ರಾಸಗಳು ಪುಟಗೊಟ್ಟಿವೆ. ಇಡೀ ಕವನದಲ್ಲಿ 'ವಿಧೇಯತೆ'ಯ ಗುಣ ಎದ್ದುಕಾಣುತ್ತದೆ. ಪಂಚಮಾತ್ರಾಲಯದಲ್ಲಿದೆ.

**ಶೋಕಗೀತೆಗಳು**

ಶೋಕವು ಪ್ರಿಯರಾದವರ ಅಥವಾ ಪ್ರಿಯವಾದುದರ ಅಗಲಿಕೆಯಿಂದಲೊ, ಕಳೆದುಕೊಳ್ಳುವುದರಿಂದಲೋ ಉದ್ದೀಪನಗೊಳ್ಳುತ್ತದೆ. ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲ ಇಡೀ ಪ್ರಪಂಚದ ಪ್ರತಿಯೊಂದು ಭಾಷೆಯ ಸಾಹಿತ್ಯ ಕೃತಿಗಳಲ್ಲಿ 'ಶೋಕ'ವೆಂಬುದು ಎಡೆಪಡೆದಿರುತ್ತದೆ. ಅಂತೆಯೇ ನಮ್ಮ ಈ 'ಇಂಗ್ಲಿಷ್ ಗೀತೆ'ಯಲ್ಲಿಯೂ ಶೋಕವನ್ನೊಳಗೊಂಡ ಗೀತೆಗಳಿವೆ.

**ದುಃಖಸೇತು**

ಈ ಕವನವು ಥಾಮಸ್ ಹುಡ್ ಕವಿಯ 'The Bridge of sights' ಕವಿತೆಯ ಅನುವಾದ. ಈ ಕವನ ಸಂಕಲನದಲ್ಲಿಯೇ ಅತ್ಯಂತ ದೀರ್ಘವಾದ ಕವನವಿದು. ಇಂತಿಷ್ಟು ಪಾದಗಳ ಇಂತಿಷ್ಟು ಪದ್ಯಗಳಿವೆ ಎಂದು ವಿಭಜಿಸಿ ಹೇಳಲು ಇಲ್ಲಿ ಅವಕಾಶವಿಲ್ಲ. ಒಟ್ಟು 106 ಸಾಲುಗಳು ಮೂಲದಲ್ಲಿದ್ದರೆ, 'ದುಃಖಸೇತು'ವಿನಲ್ಲಿ 118 ಸಾಲುಗಳಿವೆ. ಮೂಲದಲ್ಲಿಲ್ಲದ 12 ಸಾಲುಗಳನ್ನು ಶ್ರೀಯವರು ಸೇರಿಸಿದ್ದಾರೆ.

"Not of the setains of her' ಎಂಬುದನ್ನು ಅನುವಾದದಲ್ಲಿ ತಾನು ಮಾಡಿದ ಕರ್ಮ, ತನ್ನ ಬೆಂದಲಿಬೆಂದು ಸುಟ್ಟವಳು ಇವಳು' ಎಂಬುದಾಗಿದ್ದು ಸೊಗಸಾಗಿದೆ. Breath – ಜನ್ಮ, Dishonour – ಹೊಲ್ಲನಡೆ, Mutiny - ಪಾಪಗಳು, Death – ಜವರಾಯ, Eve's family – ಹೆಣ್ಣುಹುಟ್ಟು, God – ದೀನರಕ್ಷಕ' ಎಂಬುದಾಗಿ ನಮ್ಮ ಭಾಷಾ ಸಂಸ್ಕೃತಿಗಳೊಡನೆ ಸಾಮರಸ್ಯವನ್ನು ಬೆಸೆದುಕೊಂಡಿವೆ. 'Dear one' ಮತ್ತು 'Near one' ಗಳಿಗೆ 'ಅಕ್ಕರೆಯಾತ' ಮತ್ತು 'ಹತ್ತಿರದಾತ' ಪದಗಳು ಮನಮುಟ್ಟುವಂತೆ ಬಂದಿವೆ. 'Bleak wind of march' ನಮ್ಮ ಮಾರ್ಚ್ ತಿಂಗಳ ಗಾಳಿಯಾಗಿ ಯಾಂತ್ರಿಕವಾಗಿ ಭಾಷಾಂತರವಾಗದೆ ಸುಮ್ಮನೆ 'ಚಳಿಗಾಳಿ'ಯಾಗಿರುವುದು ಗಮನಾರ್ಹ. 'ಶ್ರೀ' ಯವರು ಆಯ್ದ ಪದಗಳು ಆತ್ಮೀಯತೆಯನ್ನು ತುಂಬಿಕೊಂಡಿವೆ, ನೇರವಾಗಿ ಮನಸ್ಸನ್ನು ಮುಟ್ಟುತ್ತದೆ. "ಅನಾಥೆ ಇವಳಿನ್ನೊಬ್ಬ..." ಎಂಬಲ್ಲಿ ಮೂಲದ ತಿರುಳನ್ನು ಆತ್ಮವನ್ನು ಆವಾಹಿಸಿಕೊಂಡು ನಾಡುನುಡಿಯಲ್ಲಿ ಅಭಿವ್ಯಕ್ತಿಸುವ ಪ್ರಯತ್ನ ಮಾಡಿದ್ದಾರೆ."[20]

ಈ ಭಾಗದ ಅನುವಾದದಲ್ಲಿ ಕರುಣೆ – ಶೃಂಗಾರಗಳು ಮಿಲನಗೊಂಡಿವೆ, ಶ್ರೀಯವರು ಹುಡ್ ಕವಿಯ ಕವಿತೆಯೊಳಗೆ ಪರಕಾಯ ಪ್ರವೇಶ ಮಾಡಿದ್ದಾರೋ ಅಥವಾ ಹುಡ್ ಕವಿಯೇ ಶ್ರೀಯವರ ಪರಕಾಯವನ್ನು

[20] ಬಿ.ಎಂ.ಶ್ರೀ ನೂರಾರು ನೆನಪು– ಪ್ರಬುದ್ಧ ಕರ್ನಾಟಕ ಸಂ 65 ಸಂಚಿಕೆ 4 ಪು 269

ಪ್ರವೇಶಿಸಿದ್ದಾನೋ ಎಂಬ ಭ್ರಮೆ ಮೂಡುತ್ತದೆ. ಇಲ್ಲಿ ಭಾವತೀವ್ರತೆಯು ಉಚಿತ ಪದಗಳ ಬಳಕೆಯಿಂದಾಗಿ ಯಶಸ್ವಿಯಾಗಿದೆ.

ಇಲ್ಲಂತೂ ಶ್ರೀಯವರ ಪುನಃ ಸೃಷ್ಟಿ ಕಾರ್ಯವನ್ನು ಕಾಣಬಹುದು.

"ಮುಂದೆ ಬಲ್ಲವರಾರು?..." ಈ 10 ಸಾಲುಗಳು "ಊರ ಮನೆ ಬೆಳಕುಗಳು ದೂರ ಸರಿಯುತ್ತ" ಎಂದಷ್ಟೇ ಸಂಕ್ಷೇಪಗೊಂಡಿವೆ. "ಅನುವಾದಕರ 'ಅನಾಥೆ' ಸಂಪೂರ್ಣ ಭಾರತೀಯಳಾದುದರಿಂದ ಈ ರೀತಿಯ ಅಳವಡಿಕೆ ಅಥವಾ ರೂಪಾಂತರ ತುಂಬ ಯೋಗ್ಯವಾಗಿದೆ. 'Chrisitain charity' 'ಆರ್ಯಧರ್ಮದ ಕರುಣ'ವಾಗಿ Sun 'ಉರಿಯುವವ' ಆಗಿದ್ದಾನೆ...ಕ್ರೈಸ್ತಧರ್ಮಾನುಯಾಯಿಗಳಿಗೆ ಎದೆಯ ಮೇಲೆ ಶಿಲುಬೆಯಾಕಾರದಲ್ಲಿ ಕೈಯಿಟ್ಟುಕೊಳ್ಳುವುದು ನಿವೇದನೆಯ ಒಂದು ಆಚರಣೆ. ಅದನ್ನೇ ಅನುವಾದಕರು 'ಅನಾಥೆ'ಯನ್ನು ಕೈಮುಗಿಸಿ ದೇವರ ಬಳಿ ಕಳುಹಿಸುವಂತೆ ಸೂಚಿಸಿದ್ದಾರೆ."[21]

ಮೂಲ ಕವನ ಬಹಳ ಪ್ರಾಸಬದ್ಧವಾಗಿದೆ. ಆದರೆ ಶ್ರೀಯವರು ಪ್ರಾಸದ ಕಟ್ಟನ್ನು ಬೇಕೆಂದೇ ತೊರೆದಿರುವ ಹಾಗಿದೆ. ಈ ಕವನದ ಭಾಷೆ ಸರಳವಾಗಿದ್ದು, ಲಲಿತವಾಗಿದೆ.

> ನಿರಿ ಹಿಡಿದು ನಡುವೇರಿ
> ತೊದಳು ಮಾತನು ಬೀರಿ
> ಕೊರಗ ನಗಿಸಲು ಬಲ್ಲ
> ಮಗುವಿಲ್ಲವೇನೋ?

ಈ ಸಾಲುಗಳು ಶ್ರೀಯವರ ಸ್ವತಂತ್ರ ಸೃಷ್ಟಿಯಾಗಿವೆ.

"ಹುಡ್ ಕವಿಯ 'The Bridge of sighs' ಕವನಕ್ಕೆ ಇಂ. ಸಾ. ದಲ್ಲಿ ಯಾವುದೇ ಸ್ಥಾನವಿರಲಿ ಕನ್ನಡ ಕಾವ್ಯ ಪ್ರಪಂಚದಲ್ಲೇನೋ 'ದುಃಖಸೇತು' ಉತ್ತಮ ಪದವಿಯನ್ನು ಪಡೆದಿದೆ." ಎಂದು ತೀನಂಶೀಯವರು ಅಭಿಪ್ರಾಯಿಸಿದ್ದಾರೆ "ಪದ್ಯದ ದಾಟಿ ಕರುಳನ್ನು ನುಲಿಯುತ್ತದೆ; ಎದೆಯನ್ನು ಇರಿಯುತ್ತದೆ" ಎಂದು ವೀ.ಸೀ. ಯವರು ಶ್ರೀ ಸಂಪುಟಕ್ಕೆ ಪರಿಚಯ ಬರೆಯುತ್ತ ಹೇಳಿರುವುದು ಅಕ್ಷರಶಃ ಸತ್ಯ. "ಪ್ರಾಯಶಃ ಕುಂತಿಯಂತಹ ರಾಜ ಮನೆತನದವಳನ್ನು ಬಿಟ್ಟು ಸಾಮಾನ್ಯ ಹೆಣ್ಣೊಂದು ಇಂತಹ ದುಃಖಕ್ಕೆ ಗುರಿಯಾದಾಗ ಅನುಕಂಪ ಸೂಚಿಸುವ ಬರಹ ಕನ್ನಡದಲ್ಲಿ ಇದೇ ಮೊದಲನೆಯದಿರಬಹುದು."[22] ಮೊದಲ ಪದ್ಯದ ಮೊದಲ ಅಕ್ಷರ 'ಅ' ಅನಾಗತಕ್ಕೆ ಉದಾಹರಣೆಯಾಗಿದೆ. ಪದ್ಯವು 3–4 ಮಾತ್ರೆಗಳ ಮಿಶ್ರಲಯದಲ್ಲಿದೆ.

**ಪೆಡಸುದಾರಿ**

C. Rossetti ಯ 'up-hill' ಕವಿತೆಯ ಅನುವಾದ ಈ ಕವನ. ಮೇಲು ನೋಟಕ್ಕೆ ಮೂಲದ ಶೀರ್ಷಿಕೆಯನ್ನು ಗಮನಿಸಿದರೆ, 'ಬೆಟ್ಟದ ಮೇಲೆ' ಎಂಬರ್ಥ ಹೊಳೆದು, ಶ್ರೀಯವರು ಶ್ರೀರ್ಷಿಕೆಯನ್ನೇ ಸರಿಯಾಗಿ ಅನುವಾದಿಸಿಲ್ಲ

---

[21] ಬಿ.ಎಂ.ಶ್ರೀ ನೂರಾರು ನೆನಪು– ಪ್ರಬುದ್ಧ ಕರ್ನಾಟಕ ಸಂ 65 ಸಂಚಿಕೆ 4 ಪು 274

[22] ಬಿ.ಎಂ.ಶ್ರೀ – ಎ. ಎನ್ ಮೂರ್ತಿರಾಯರು ಪುಟ 31

ಎಂದೆನಿಸುತ್ತದೆ. ಆದರೆ up-hill ಎಂಬುದಕ್ಕೆ ಇಂಗ್ಲಿಷಿನಲ್ಲಿ 'ಬಹುಶ್ರಮದಾಯಕವಾದದ್ದು' ಎಂಬರ್ಥವಿದೆ. ಈ ಅರ್ಥಕ್ಕೆ 'ದಾರಿ' ಎಂಬುದನ್ನು, ಅರ್ಥಾನುಸಾರಿಯಾಗಿ 'ಪೆಡಸುದಾರಿ' ಎಂದನುವಾದಿಸಿದ್ದಾರೆ. ಇಲ್ಲಿಯೇ ಅವರ ಬಹುಜ್ಞತೆಯ ಅರಿವಾಗುತ್ತದೆ. ಶೀರ್ಷಿಕೆಯಲ್ಲಿಯೇ ಕೌತುಕ ಭಾವವಿದೆ. 4 ಸಾಲುಗಳ 4 ಪದ್ಯಗಳು ಮೂಲದಲ್ಲಿರುವಂತೆ ಇಲ್ಲಿಯೂ ಇವೆ.

1ನೆಯ ಪದ್ಯ :

ಮೊದಲ ಸಾಲು ಮೂಲಕ್ಕನುಸಾರಿಯಾಗಿದೆ. 2ನೆಯ ಸಾಲಿನ 'yes' ಎಂಬುದಕ್ಕೆ 'ಹೌದು' ಎನ್ನಬಹುದಾಗಿದ್ದರೂ ಶ್ರೀಯವರು 'ಅಹುದು' ಎಂದು 'ನಡುಗನ್ನಡ ಕಾಲದ ಭಾಷಾಪ್ರಯೋಗವನ್ನು ತಂದಿರುವುದು ವಿಶೇಷವಾಗಿದೆ. 3 ಮತ್ತು 4ನೆಯ ಸಾಲುಗಳು ಮೂಲಕ್ಕೆ ಸಮೀಪವಾಗಿ ಅನುವಾದಗೊಂಡಿವೆ. ಆದರೆ 4ನೆಯ ಸಾಲಿನ ಕೊನೆಗಿರುವ 'My friend' ಎಂಬುದು ಇಲ್ಲಿ ಕಾಣೆಯಾಗಿದೆ. 'ಎಲ್ಲ – ಇರುಳವರೆಗೆ ಗೆಳೆಯ' ಎಂದು ಅನುವಾದಿಸಬಹುದಾಗಿತ್ತು.

2ನೆಯ ಪದ್ಯ :

ಮೊದಲ ಸಾಲು ಮೂಲಕ್ಕೆ ಸಮೀಪವಾಗಿ ಅನುವಾದಗೊಂಡಿದೆ. 2ನೆಯ ಸಾಲಿನ 'A roof for then the slow' ಎಂಬುದು ಮಾಯವಾಗಿ 'ಛತ್ರವೇನಿಹುದೆ'? ಎಂಬ ಪ್ರಶ್ನೆಗೆ ಉತ್ತರ ರೂಪಿಯಾಗಿ 'ಇಹುದು' ಎಂದಷ್ಟೇ ಇದೆ. 'ಇಹುದು' ಎಂಬ ಪ್ರಯೋಗ ಸಹಜವಾಗಿರದಿದ್ದರೂ, ಮೇಲಿನ ಪದ್ಯದಲ್ಲಿ 'ಅಹುದು' ಇರುವುದಕ್ಕೆ ಇಲ್ಲಿ 'ಇಹುದು' ಮೂಡಿರಬಹುದು, 'ಮಬ್ಬು ಕವಿಯೆ' ಎಂಬಲ್ಲಿ ಮೂಲದಲ್ಲಿಲ್ಲದ ಚಿತ್ರಕಶಕ್ತಿಯಿದೆ. 3ನೆಯ ಸಾಲು ಅರ್ಥಸಂಧಿಗ್ಧತೆಗೆ ಎಡೆಕೊಟ್ಟರೆ, 4ನೆಯ ಸಾಲಿಗೆ ಮೂಲದಲ್ಲಿ ಆಧಾರವೇ ಇಲ್ಲ. 4ನೆಯ ಸಾಲನ್ನು 'ತಂಗುವತಾಣವ ಸೇರದಿರುವಂತಿಲ್ಲ' ಎಂದು ಭಾಷಾಂತರಿಸಬಹುದಿತ್ತು. ಈ ಸಾಲಿಲ್ಲದೆ ಈ ಭಾಗ ಸಪ್ಪೆಯಾಗಿದೆ.

3ನೆಯ ಪದ್ಯ :

ಮೊದಲನೆಯ ಸಾಲು ಮೂಲಕ್ಕನುಸಾರಿಯಾಗಿದೆ. 2ನೆಯ ಸಾಲು ಪ್ರಶ್ನಾರ್ಥಕ ಚಿಹ್ನೆ ಹೊಂದಿರದಿದ್ದರು, ಪ್ರಶ್ನಾರ್ಥಕ ವಾಕ್ಯವಾಗಿದೆ; ಆಭಾಸವೆನಿಸುತ್ತದೆ. 3ನೆಯ ಸಾಲಿನ 'ಸೋಲುವುದೇ' ಬದಲಿಗೆ 'ಕರೆವುದೇ' ಎಂದು ಸರಳವಾಗಿ ಭಾಷಾಂತರಿಸಬಹುದಿತ್ತು. 4ನೆಯ ಸಾಲು ಮೂಲಕ್ಕೆ ಬಹುದೂರವಾಗಿದೆ. 'ಕೂಗಲು ಬಾಗಿಲೊಳು ಕಾಯಿಸಲಾರರು' ಎಂದು ಅನುವಾದಮಾಡಬಹುದಾಗಿದ್ದ ಸಾಲು 'ಕೂಗಿ ತೆರೆವವರೆವರೆ' ಎಂದಾಗಿದೆ ಅಂದರೆ ಒಂಟಿಪಯಣಿಗನನ್ನು ಲೆಕ್ಕಿಸವ ಅಮಾನವೀಯರಲ್ಲ ಅವರು ಎಂಬ ಧ್ವನಿ ಇಲ್ಲಿ ಮಾಯವಾಗಿದೆ.

4ನೆಯ ಪದ್ಯ :

ಮೊದಲ ಸಾಲು ಯುಕ್ತವಾಗಿ ಅನುವಾದವಾಗಿದೆ. 2ನೆಯ ಸಾಲಿನಲ್ಲಿ 'ಉಣುವೆ' ಎಂಬುದನ್ನುಳಿದು ಮೂಲದ ಭಾವವೇ ಇಲ್ಲವಾಗಿದೆ. 'ದುಃಖವಳಿದೆ' ಪದಕ್ಕೆ ಬದಲಾಗಿ 'ಪಟ್ಟಪರಿಶ್ರಮಕೆ' ಎಂದಿದ್ದರೆ ಚೆನ್ನಾಗಿರುತ್ತಿತ್ತು, 3 ಮತ್ತು

4ನೆಯ ಸಾಲುಗಳು ಮೂಲಕ್ಕೆ ವಿಧೇಯವಾಗಿದ್ದರೂ, 4ನೆಯ ಸಾಲಿನಲ್ಲಿ 'ಅಹುದು ಬಯಸಿ ಬಂದವರಿಗೆ' ಎಂದು ಅನುವಾದ ಮಾಡಿದ್ದರೆ ಸಮಂಜಸವೆನಿಸುತ್ತಿತ್ತು.

ಮೇಲುನೋಟಕೆ ಪಯಣಿಗನೊಬ್ಬನ ಅಪರಿಚಿತ ಸ್ಥಳದೆಡಗಿನ ಪ್ರಯಾಣದಂತೆ ಕಾಣುವ ಈ ಕವನದಲ್ಲಿ ಬದುಕಿನ ಹಾದಿಯಲ್ಲಿ ಸಾಧಕನೋರ್ವನ ಆತಂಕ, ದುಗುಡ, ಉದ್ವೇಗ, ಸಂಶಯ ಭಾವಗಳು ಧ್ವನಿತವಾಗಿವೆ, ಶ್ಲೇಷಾಲಂಕಾರಕ್ಕೆ ಇದು ಅತ್ಯುತ್ತಮ ಉದಾಹರಣೆ, ವಿಷಾದ ಭಾವದೊಂದಿಗೆ ಆರಂಭವಾದ ಕವನದಲ್ಲಿ ಕೊನೆಕೊನೆಗೆ ಆಶಯಭಾವ ಇಣುಕಿದೆ, ಅಂತ್ಯಪ್ರಾಸ ಕವನದ ಸೊಗಸನ್ನು ಮತ್ತಷ್ಟು ಹೆಚಿಸಿದೆ. 3–4 ಮಾತ್ರೆಗಳ ಮಿಶ್ರಲಯವಿದೆ.

ಹಳೆಯ ಪಳಕೆಯ ಮುಖಗಳು

- Charles lamb ನ 'The Ikd Familiar Faces' ಕವಿತೆಯ ಅನುವಾದ ಈ ಕವನ 3 ಸಾಲುಗಳ 7 ಪದ್ಯಗಳು ಮೂಲದಂತೆಯೇ ಇಲ್ಲೂ ಇವೆ, 3ನೆಯ ಸಾಲು ಮಾತ್ರ ಎಲ್ಲ ಪದ್ಯಗಳಲ್ಲೂ ಒಂದೇ ರೀತಿಯಿದ್ದು ಶಬ್ದಶಃ ಅನುವಾದವಾಗಿದೆ.

1ನೆಯ ಪದ್ಯ :

ಮೊದಲ ಸಾಲಿನಲ್ಲಿಯೇ ಅನುವಾದ ಎಡವಿದೆ. 'ನನ್ನೊಡನೆ ಆಡುವವರಿದ್ದರು; ನನಗೆ ಒಡನಾಡಿಗಳಿದ್ದರು' ಎಂದು ಸರಳವಾಗಿ ಭಾಷಾಂತರಿಸಬಹುದ್ದಿತ್ತು. ಈ ಸಾಲಿನಲ್ಲಿರುವ ಮರುಗುವವರು, ಮುದ್ದಿಸುವವರೂ ಮೂಲದಲ್ಲಿ ಇಲ್ಲ, 2ನೆಯ ಸಾಲಿನಲ್ಲಿ 'School days' ಎಂಬುದು 'ಅಂದಿನೋದಿನ' ಎಂದಾಗಿ, 'Days of child hood' ಎಂಬುದು 'ಸುಖದಾದಿನದಲಿ' ಎಂದಿರುವುದು ವಿಶೇಷವಾಗಿದೆ. 'ಕುಣಿಯುವವರಿದ್ದರು' ಎಂಬುದಕ್ಕೆ ಮೂಲದಲ್ಲಿ ಆಧಾರವಿಲ್ಲ.

2ನೆಯ ಪದ್ಯ :

2ನೆಯ ಇಡೀ ಸಾಲು ಮೂಲದ ಮೊದಲ ಸಾಲಿನ ಕೊನೆಗಿರುವ 'Crousing' ಎಂಬುದಕ್ಕೆ ಸಮೀಪವಾಗಿರುವುದನ್ನು ಬಿಟ್ಟರೆ ಉಳಿದೆಡೆ ಅನುವಾದ ಮುಗ್ಗರಿಸಿದೆ ಎಂದೆನಿಸುತ್ತದೆ. ಮೊದಲು ಸಾಲಿಗೆ ಮೂಲದಲ್ಲಿ ಆಧಾರವಿಲ್ಲ. ಇದೂ ರೂಪಾಂತರವೂ ಆಗಿಲ್ಲ. ಈ 2 ಸಾಲುಗಳನ್ನು ಹೀಗೆ ಭಾಷಾಂತರಿಸಬಹುದಿತ್ತು.

> ನಾನು ಸಂತಸದಿಂದಿದ್ದೆನು; ಕುಡಿದು ಮತ್ತನಾಗಿದ್ದನು
> ಪಾನ ನಿಧಾನ, ಗಮನ ನಿಧಾನ ಹೃದಯ ಬಯಸುವ ನಿಕಟರೊಡಗೂಡಿ

3ನೆಯ ಪದ್ಯ :

'ಹರಿಸಿಪಡೆದೆನು ಹೆಣ್ಣನೊಂದನು' ಎಂಬುದನ್ನು ಬಿಟ್ಟರೆ ಮುಂದಿನದು ಮೂಲದಿಂದ ಬಹುದೂರವಾಗಿದೆ. 'ಹೇಳಲರಿಯೆನು ಹಿತವನು' ಎಂಬುದಕ್ಕೆ ಬದಲಾಗಿ 'ಹೆಣ್ಗಳಲೇ ಚೆಲುವೆಯನು' ಎಂದು ಭಾಷಾಂತರಿಸಬಹುದಾಗಿತ್ತು. 2ನೆಯ ಸಾಲು ಮೂಲಕ್ಕೆ ತದ್ವಿರುದ್ಧವಾಗಿದೆ. ಮೂಲದಲ್ಲಿ ಒಲಿದವಳು ತೀರಿಹೋದಳೆಂಬ ವಿಚಾರವೇ ಇಲ್ಲ. ಈ ಸಾಲು 'ಅವಳ ಕೂಡುವ ದಾರಿಯಿಲ್ಲವಾದವು, ನಾನು ಅವಳ ನೋಡದಾದೆನು' ಎಂದು ಭಾಷಾಂತರಿಸಬಹುದಿತ್ತು.

4ನೆಯ ಪದ್ಯ :

ಮೊದಲನೆಯ ಸಾಲಿನ 'ಆತನಕ್ಕರೆಯಾಪ್ತರು'? ಎಂಬುದು ಆಭಾಸವೆನುಸುತ್ತದೆ; ಅರ್ಥಸಂದಿಗ್ಧತೆಗೂ ಎಡೆಕೊಟ್ಟಿದೆ. 'ಯಾರಿಗಿಪರೊ ಆತನಂತಾಪ್ತರು'? ಎಂದು ಸರಳವಾಗಿ ಭಾಷಾಂತರಿಸಬಹುದಾಗಿತ್ತು. 2ನೆಯ ಸಾಲಿನ ಮೊದಲ ಪದವನ್ನುಳಿದು, ಉಳಿದಾವುದೂ ಮೂಲಕ್ಕೆ ಹೊಂದುತ್ತಿಲ್ಲ. ಭಾವಾನುವಾದವೂ ಆಗಿಲ್ಲ. ಇದನ್ನು 'ಅವಿವೇಕಿಯಂದದಿ ನನ್ನ ಕೆಳೆಯನನು ಸೌಜನ್ಯವಿಲ್ಲದೆ ಕಳೆದುಕೊಂಡನು' ಎಂದು ಭಾಷಾಂತರಿಸಬಹುದಿತ್ತು.

5ನೆಯ ಪದ್ಯ :

2 ಸಾಲುಗಳು ಭಾವಾನುವಾದವೆನ್ನಲಡ್ಡಿಯಿಲ್ಲ.

6ನೆಯ ಪದ್ಯ :

4 ಸಾಲುಗಳು ಸಮರ್ಪಕವಾಗಿ ಅನುವಾದಗೊಂಡು ಭಾವತೀವ್ರತೆಯನ್ನು ಮೂಲದಂತೆಯೇ ಬಿಂಬಿಸಿವೆ.

7ನೆಯ ಪದ್ಯ :

'ಕೆಲವರೆನ್ನನು ದೂರಿ ಹಳಿದರು' ಎಂಬ ಸಾಲಿಗೆ ಮೂಲದಲ್ಲಿ ಯಾವ ಆಧಾರವೂ ಇಲ್ಲ. ಉಳಿದೆರಡು ಸಾಲುಗಳು ಮೂಲಕ್ಕೆ ಸಮೀಪವಾಗಿವೆ.

ಬಾಲ್ಯಸ್ನೇಹಿತರನ್ನು, ಸುಖದಲಿ ಒಡಗೂಡಿದವರನು, ಪ್ರಿಯತಮೆಯನು, ಕಳೆದುಕೊಂಡ ಒಬ್ಬನ ಶೋಕ ಇಲ್ಲಿ ವ್ಯಕ್ತವಾಗಿದೆ. ವಿಷಾದ, ನಿರಾಶೆ, ಶೂನ್ಯತೆ ಎಲ್ಲ ಪದ್ಯಗಳಲ್ಲೂ ಎಡೆಪಡೆದಿದೆ. ಅನಾಥಪ್ರಜ್ಞೆಯನ್ನು ಧ್ವನಿಸುತ್ತದೆ ಈ ಕವನ ಪ್ರತಿ ಪದ್ಯದ ಮೊದಲೆರಡು ಸಾಲುಗಳಲ್ಲಿ ಆದಿಪ್ರಾಸವಿದೆ. 3–4 ಮಾತ್ರೆಗಳ ಮಿಶ್ರಲಯವಿದೆ.

**ಎರಡು ಮನಸು**

ಇದು ಶ್ರೀಯವರ ಸ್ವತಂತ್ರ ಕವನ. "Two moods ಮೂಲ ಇಂಗ್ಲಿಷ್ ಕವನವನ್ನು ಬರೆದವರು ಇವರೇ. Anon ಎಂಬುದಾಗಿ ಅವರು ಇಂಗ್ಲಿಷ್ ಗೀತಗಳಲ್ಲಿ ಪ್ರಕಟಿಸಿದ್ದರೂ ಈ ಕವನವನ್ನು ಬರೆದವರು ಶ್ರೀಯವರೇ ಈ ಕವನದ ಬಿ.ಎಂ. ಶ್ರೀ ಹಸ್ತಾಕ್ಷರ ಪ್ರತಿ ದೆಹಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿರುವ ಶ್ರೀ ಬಾಲುರಾಯರ ಬಳಿ ಇದೆ. ಈ ವಿಷಯವನ್ನು (ಇಂಗಿಷ್ ಗೀತೆ 2006ರಲ್ಲಿ ಪ್ರಕಟವಾದ) ಸಂಪಾದಕ ಮಂಡಳಿಗೆ ತಿಳಿಸಿದವರು ಪ್ರೊ. ಎಂ. ವಿ. ಸೀತಾರಾಮಯ್ಯನವರು ಮತ್ತು ಡಾ. ಬಿ.ಸಿ. ರಾಮಚಂದ್ರಶರ್ಮ."6 ಮೂಲ ಇಂಗ್ಲಿಷ್ ಕವನ ಕಾರಣಾಂತರಗಳಿಂದ ಈ ಸಂಕಲನದಲ್ಲಿ ಪ್ರಕಟವಾಗಿಲ್ಲವೆಂದು ಸಂಪಾದಕರೆ ತಿಳಿಸಿದ್ದಾರೆ.

ಈ ಕವನದಲ್ಲಿರುವ 'ಕಣ್ಣಿಲ್ಲವನು, ತಿಳಿಯದವನು, ನನ್ನ ಮನೆ ಮನೆಯಾಯ್ತೆ'? ಎಂಬವು ಶ್ರೀಯವರು ಸಂಸಾರದಲ್ಲಿ ಅನುಭವಿಸಿದ ಅತ್ಯಂತ ಘೋರವಾದ ಯಾತನೆಯನ್ನು ಅಭಿವ್ಯಕ್ತಿಸುತ್ತವೆ. ಹೀಗಿದ್ದೂ ಒಂದು ಚೇತನ ದುಃಖದಲ್ಲಿ ಮುಳುಗಿ, ಅದನ್ನು ಅದುಮಿ ಮೇಲೇಳುವ ನಿರ್ಧಾರವನ್ನು ಹೇಗೆ ಕೈಗೊಂಡು ಬಾಳನ್ನು ಸಾರ್ಥಕಗೊಳಿಸಿತು

ಎಂಬುದು ನಮ್ಮ ಚಿತ್ತಕ್ಕೆ ವೇದ್ಯವಾಗದೇ ಇರದು. "ಶ್ರೀಯವರ ದುಃಖದ ಕಡಲನ್ನೆ ಒಳಗೊಂಡು, ಆತ್ಮಹತ್ಯೆಯ ಹೇಡಿಮನಸ್ಸನ್ನು ಗೆದ್ದು ನಿಂತು, ಅಥವಾ ನಿಲ್ಲಬೇಕೆಂಬ ದಿಟ್ಟಮನಸ್ಸನ್ನು, 2 ಮನಸ್ಸುಗಳ ಹೊಯ್ದಾಟವನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಿದೆ."[23] ಶೋಕರಸ ಮೇರೆಮೀರಿ ಹರಿದಿದೆ. 'ಬಾಳಬಂಡೆ' ಎಂಬಲ್ಲಿನ ಚಿತ್ರಕಶಕ್ತಿ ಮನ ಸೆಳೆಯುತ್ತದೆ. ಪಂಚಮಾತ್ರಾಲಯವಿದೆ.

## ಕವಿಶಿಷ್ಯ

Robert Southey ಬರೆದ 'The scholar' ಕವಿತೆಯ ಅನುವಾದವಿದು. ಮೂಲದಂತೆಯೇ ಇಲ್ಲಿಯೂ 6 ಸಾಲುಗಳ 4 ಪದ್ಯಗಳಿವೆ. 'sScholar' ಪದವನ್ನು ಸರಳವಾಗಿ ಪಂಡಿತ, ವಿದ್ವಾಂಸ, ಪರಿಣಿತ ಎಂದು ಅನುವಾದ ಮಾಡಬಹುದಿದತ್ತಾದರೂ ಹಾಗೆ ಮಾಡದೇ ಇರುವಲ್ಲಿ ಯಾವ ಉಚಿತತೆಯು ಕಂಡುಬರುವುದಿಲ್ಲ, 6 ಸಾಲುಗಳ 4 ಪದ್ಯಗಳು ಎರಡು ಕವನಗಳಲ್ಲಿಯೂ ಕಾಣಬಹುದು.

ಮೊದಲ ಪದ್ಯ :

ಮೊದಲ ಸಾಲಿನ 'ಸತ್ತವರ ಸಂಗ' ಎಂಬುದು ಉಚಿತ ಪ್ರಯೋಗ. 2ನೆಯ ಸಾಲು ಮೂಲಕ್ಕೆ ಹತ್ತಿರವಾಗಿದೆ. Around - ಬಳಸಿನಲಿ, Minds of old – ಹಳಮೆಯ ಮಹಾತ್ಮರನ್ನು ಎಂದಾಗಿರುವುದು ಯುಕ್ತವಾಗಿಯೇ ಇದೆ. ಮೂಲದಲ್ಲಿ ಆಧಾರವಿಲ್ಲದ 'ಪರಮಕವಿಗಳನು' ಎಂಬ ಪದ 'ಹಳಮೆಯ ಮಹಾತ್ಮರನು' ಎಂಬುದನ್ನು ಅನುಸರಿಸಿ ಬಂದಿದೆ ಎನ್ನಬಹುದು, ಜೊತೆಗೆ ಅಂತ್ಯಪ್ರಾಸವನ್ನು ಕಾಯ್ದುಕೊಳ್ಳಲು ಹೀಗೆ ಮಾಡಿದ್ದರೆನಿಸುತ್ತದೆ. ನಂತರದ 2 ಸಾಲುಗಳು ಮೂಲಕ್ಕೆ ಸಮೀಪವಾಗಿದ್ದು, ಆಡುಮಾತಿನ ಸೋಗಡನ್ನು ಮೈಗೂಡಿಸಿಕೊಂಡಿವೆ.

2ನೆಯ ಪದ್ಯ :

ಮೊದಲ ಸಾಲು ಮೂಲಕ್ಕೆ ಸಮರ್ಪಕವಾಗಿ ಅನುವಾದಗೊಂಡಿದೆ. 2ನೆಯ ಸಾಲಿನಲ್ಲಿ 'Relief' ಸಮಾಧಾನವಾಗುವ ಬದಲು 'ಶಾಂತಿ' ಯಾಗಿರುವುದು ಉಚಿತವಾಗಿಯೇ ಇದೆ. 3ನೆಯ ಸಾಲಿನ Understand and feel 'ಬಗೆದೆಣಿಸಿ' ಎಂದಾಗಿರುವುದು ಸೂಕ್ತವಾಗಿಯೇ ಇದೆ. 4ನೆಯ ಸಾಲಿನ 'ನಾನವರಿಗದ' ಕವನದ ಓಘಕ್ಕೆ ಓಟಕ್ಕೆ ಪುಟಕೊಟ್ಟಿದೆ. 5&6 ನೆಯ ಸಾಲುಗಳು ಮೂಲವನ್ನು ಸಮರ್ಪಕವಾಗಿ ಅನುಸರಿಸಿದೆ. 'ಧನ್ಯತೆ', 'ಕೃತಜ್ಞತೆ' ಪದಗಳು ಭಾವಪೂರ್ವಕವಾಗಿದೆ.

3ನೆಯ ಪದ್ಯ :

ಮೊದಲೆರಡು ಸಾಲುಗಳು ಸಮರ್ಪಕವಾಗಿ ಅನುವಾದಗೊಂಡಿವೆ. 'ಯೋಚನೆ' ಬದಲಿಗೆ 'ಚಿಂತನೆ' ಎಂಬುದು 'Thought' ಗೆ ಅನುವಾದವಾಗಿರಬೇಕಿತ್ತು. 2ನೆಯ ಸಾಲಿನ 'Long past years' ಎಂಬುದು 'ಪುರಾತನವಲಿ'

---

[23] ಇಂಗ್ಲಿಷ್ ಗೀತಗಳು– ಮುನ್ನುಡಿ ಎಂ.ಪಿ.ಸೀ ಪುಟ viii

ಎಂದಾಗಿರುವುದು ಅವರ ಸಂಕ್ಷಿಪ್ತತೆ ಕಾಯುವ ರೀತಿಗೆ ಸಾಕ್ಷಿಯಾಗಿದೆ. 3ನೆಯ ಸಾಲಿನ 'Condemn' ಎಂಬುದು 'ಸುಲಿವ' ಎಂದಾಗಿರುವುದರಲ್ಲಿ ಭಾವಸೌಂದರ್ಯವನ್ನು ಕಾಣಬಹುದು. 5ನೆಯ ಸಾಲಿನ 'ವಿನಯಭಾವದವರ' ಎಂಬುದು ಮೂಲವನ್ನು ಮೀರಿದ ಸೊಗಸನ್ನು ಹೊಂದಿದೆ. 6ನೆಯ 'ಸಾಲಿನ 'Instruction' ಎಂಬುದಕ್ಕೆ 'ಒನೆದ ಶಿಕ್ಷಣ' ಬಂದಿರುವುದು ಸೂಕ್ತವಾಗಿದೆ.

4ನೆಯ ಪದ್ಯ :

ಮೊದಲ 3 ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ. 4ನೆಯ ಸಾಲಿಗೆ ಮೂಲದಲ್ಲಿ ಆಧಾರವೇ ಇಲ್ಲ. 5ನೆಯ ಸಾಲಿನ 'ನಚಿರುವೆನಿಲ್ಲಿ' ಎಂಬುದು ಆಶಾಭಾವವನ್ನು ಧ್ವನಿಸುತ್ತದೆ. 6ನೆಯ ಸಾಲು ಮೂಲಕ್ಕೆ ಸಮೀಪವಾಗಿದೆ.

ಇಡೀ ಕವನದಲ್ಲಿ ಸಜ್ಜನರಾದ ಪಂಡಿತರ ಸಹವಾಸಕ್ಕಾಗಿ ಹಾತೊರೆಯುವ ವ್ಯಕ್ತಿಯ ತುಡಿತಗಳಿವೆ. ವಿನೀತಭಾವವೂ ಧ್ವನಿಪೂರ್ಣವಾಗಿ ಹೊಮ್ಮಿದೆ. ಸೂಕ್ಷ್ಮವಾಗಿ ಗಮನಿಸಿದರೆ 'ಕೆಲವಂ ಬಲ್ಲವರಿಂದ ಕಲ್ತು_' ಎಂಬ ಪುಲಿಗೆರೆ ಸೋಮನಾಥನ ಪದ್ಯವನ್ನು ನೆನಪಿಸುತ್ತದೆ ಈ ಕವನ. ವಿದ್ವಾಂಸರ ಸಾನ್ನಿಧ್ಯದ ಕೊರತೆಯಿಂದುಂಟಾದ ವಿಷಾದಭಾವ ಶೋಕವಾಗಿ ಸೂಚ್ಯವಾಗಿದೆ. ಪಂಚಮಾತ್ರಾಲಯವಿದೆ.

**ಅಳಿನಿ**

Anon ಕವಿಯ 'Fair Helen' ಕವನವು ಇಲ್ಲಿ 'ಅಳಿನಿ'ಯಾಗಿದೆ. 4 ಸಾಲುಗಳ 10 ಪದ್ಯಗಳು ಉಭಯಕವಿತೆಗಳಲ್ಲೂ ಇವೆ.

1ನೆಯ ಪದ್ಯ:

'ಅಯ್ಯೋ ಅತ್ತಲು, ಅತ್ತಾ ನಾ ಹೋದುದಿಲ್ಲ' ಎಂಬರ್ಥವಿರುವ ಭೂತಕಾಲದಲ್ಲಿರುವ ಮೂಲದ ಸಾಲು ಇಲ್ಲಿ ಭವಿಷ್ಯತ್ಕಾಲದಲ್ಲಿದೆ. 'ಇರುಳು ಹಗಲು ಕರೆವಳಲ್ಲ' ಇದರ ಬದಲಿಗೆ 'ಇರುಳು ಹಗಲು ಅತ್ತು ಕರೆವಳಲ್ಲ' ಎಂದಾಗಿದ್ದರೆ ಮೂಲಕ್ಕೆ ಹತ್ತಿರವಾಗಿರುತ್ತಿತ್ತು. ಎರಡು, ಮೂರು, ನಾಲ್ಕನೆಯ ಪದ್ಯಗಳು ಸಂಪೂರ್ಣವಾಗಿ ಸ್ಪಷ್ಟವಾಗಿ ಮೂಲಕವನಕ್ಕೆ ಸಮೀಪವಾಗಿ ಅನುವಾದವಾಗಿವೆ. 3ನೆಯ ಪದ್ಯದಲ್ಲಂತೂ ಬಳಸಿ ಆನಂದಾನುಭವವನುಭವಿಸಬೇಕಾದ ತೋಳು ಆತುಕೊಳುವಂತಾದುದರ ಧ್ವನಿ ವಿಷಾದ ಛಾಯೆಯಲ್ಲಿದೆ.

5ನೆಯ ಪದ್ಯ :

ಮೊದಲ ಮೂರು ಸಾಲುಗಳೂ ಸೂಕ್ತವಾಗಿ ಅನುವಾದಗಿವೆ. 4ನೆಯ ಸಾಲು ಮೂಲಕ್ಕೆ ದೂರವಾಗಿದೆ. 'ಸತ್ತವಳ ಹಗೆ ತೀರಲಿ' ಎಂಬಲ್ಲಿ ಸತ್ತವಳ ಹಗೆ ತೀರಲೆಂದು' ಎಂದಾಗಿದ್ದರೆ ಭಾವಪರಿಪೂರ್ಣವಾಗಿರುತ್ತಿತ್ತು.

6ನೆಯ ಪದ್ಯ :

'ಹೊಲಲಳವೆ'? ಎಂಬುದು ಇರುವುದೇ ಹಾಗೋ ಮುದ್ರಾರಾಕ್ಷಸನ ಅಚಾತುರ್ಯವೊ ತಿಳಿಯದು. ಅದು 'ಹೋಲಲಳವೆ'? ಎಂದಿರಬೇಕಿತ್ತು. ಉಳಿದ ಸಾಲುಗಳಲ್ಲಿ ಸಮರ್ಪಕವಾದ ಅನುವಾದವನ್ನು ಕಾಣಬಹುದು.

ಏಳು ಮತ್ತು ಎಂಟನೆಯ ಪದ್ಯಗಳಲ್ಲಿ ಶಬ್ದಶಃ ಭಾಷಾಂತರವಾಗದೇ ಭಾವಾನುವಾದವಾಗಿ ಮನಮುಟ್ಟುತ್ತದೆ.

9ನೆಯ ಪದ್ಯ :

3 ಸಾಲುಗಳಲ್ಲಿನ ಭಾವವು ಮೂಲದ ಭಾವವನ್ನೇ ಗ್ರಹಿಸಿಲ್ಲ. ಇಲ್ಲಿ ವಾಚ್ಯವಾಗಲು ಹೊರಟು ಭಾವವು ಎಡವಿದೆ. ಈ ಸಾಲುಗಳು ಹೀಗೆ ಅನುವಾದವಾಗಿದ್ದರೆ ಸೂಕ್ತವೆನಿಸುತ್ತಿತ್ತು.

ಅವಳ ನೆನಪು ಹಸಿರು ಹುಲುಸಾಗಿರಲೆಂದು ಬಯಸುವೆ
ಒಲವ ತಂಗಾಳಿಯ ಹೊದ್ದು
ಅವಳ ತೋಳಲಿ ಸೆರೆಯಾಗಲು

10ನೆಯ ಪದ್ಯ :

ಕೊನೆಯ 2 ಸಾಲುಗಳಲ್ಲಿ ಪ್ರೇಮವಂಚಿತ ಹೃದಯದ ಕರುಣಾರ್ದತೆ ಮೇರೆವರಿದಿದೆ. ಮೂಲಕ್ಕಿಂತಲೂ ಇಲ್ಲಿಯೇ ಭಾವಸೌಂದರ್ಯವನ್ನು ಕಾಣಬಹುದು.

ಪ್ರೇಮತಪ್ತ ಹೃದಯವೊಂದರ ತುಡಿತ – ಮಿಡಿತಗಳು ಧ್ವನಿಪೂರ್ಣವಾಗಿವೆ. ಪ್ರೇಯಸಿಯ ಕಳೆದುಕೊಂಡು ವಿಷಾದಿಸುತ್ತಿರುವ ತರುಣ ಹೃದಯದ ಒಲವ ವಾಂಛೆಯಲ್ಲಿ ವಿಪ್ರಲಂಭ ಶೃಂಗಾರ ರಸ ಎಡೆಪಡೆದಿದೆ. 3–4 ಮಾತ್ರೆಗಳ ಮಿಶ್ರಲಯವನ್ನಿಲ್ಲಿ ಕಾಣಬಹುದು.

## ಜೀವ

Anna tilitia barbauld ಳು ವಿರಚಿಸಿದ 'Life' ಕವನದ ಅನುವಾದವಿದು. ಮೂಲವಂತೆಯೇ ಇಲ್ಲಿಯೂ 12 ಸಾಲುಗಳಿವೆ. ಆದರೆ 'ಜೀವನ' ಎಂದಾಗಿರಬೇಕಾದ ಶೀರ್ಷಿಕೆ 'ಜೀವ'ವಾಗಿರುವುದರಲ್ಲಿ ಔಚಿತ್ಯಪ್ರಜ್ಞೆಯೇನೂ ಕಂಡುಬರುವುದಿಲ್ಲ.

ಮೊದಲ ಸಾಲು ಸಮರ್ಪಕವಾಗಿ ಅನುವಾದಗೊಂಡಿದೆ. 2ನೆಯ ಸಾಲಿನಲ್ಲಿ 'ನಿನ್ನಲಿ ನಾನು ಒಂದು ಭಾಗ' ಎಂಬರ್ಥದ ಸಾಲು ಇಲ್ಲದೆ ಮೂಲದ ಆಪ್ತತೆ ಮಾಯವಾಗಿ ಭಾವಾನುವಾದವೂ ಆಗದೆ ಭಾವಾಂತರವಾಗಿದೆ. ಮೂಲದ ನಿಶ್ಚಯಭಾವ ಇಲ್ಲಿ ಆಶ್ಚರ್ಯಸೂಚಕವಾಗಿದೆ. ನಂತರದ ಸಾಲುಗಳಲ್ಲಿ ಸೂಕ್ತವಾಗಿ ಅನುವಾದ ಕಾರ್ಯ ನಡೆದಿದೆ. 9ನೆಯ ಸಾಲಿನಲ್ಲಿ 'ಕದ್ದು ನಡೆದೆ' ಎಂದಿರಬೇಕಾದ ಅನುವಾದ 'ಕದ್ದು ನಡೆ' ಎಂದಾಗಿ ಗೊಂದಲಮಯವಾಗಿದೆ. ಉಳಿದ 3 ಸಾಲುಗಳು ಅನುವಾದ ಅಚ್ಚುಕಟ್ಟಾಗಿದೆ.

ಪ್ರಿಯ–ಪ್ರೇಯಸಿಯರು ಕಲೆತು, ಬೆರೆತು, ಬಾಳಿದ ಬದುಕಿನ ಬಗೆಗಿನ ತುಡಿತಗಳು ಇಲ್ಲಿಯ ವಸ್ತು, ಒಲಿದ ಜೀವವು ಅಗಲಿದರೆ ಬದುಕಿಗೆ ಅರ್ಥವಿಲ್ಲ ಎಂಬ ಧ್ವನಿ ಮೂಲದಲ್ಲಿರುವಂತೆ ಇಲ್ಲಿಯೂ ಸೂಚ್ಯವಾಗಿದೆ. ಜೀವನ

ಮೂರ್ಛರವಾಗಬಾರದೆನ್ನುವ ಆಶಯ ಶೋಕದೊಡಗೂಡಿ ಬಂದಿದೆ. ಅನುಕರಣೆಗೆ ಈ ಕವನ ಉತ್ತಮ ಉದಾಹರಣೆಯಾಗಿದೆ, ಪಂಚಮಾತ್ರಾಲಯವಿದೆ.

**ಕನಸು ಬೇಕು ಕನಸು**

Thomas Levell Beaddoes ಕವಿಯು ಬರೆದ 'If there were Dreams to sell' ಕವನದ ಅನುವಾದವಿದು. 'ಕನಸುಗಳು ಮಾರಾಟಕ್ಕಿಟ್ಟಿದ್ದರೆ ಎಂದಿರಬೇಕಾದ ಶೀರ್ಷಿಕೆ ಭಿನ್ನವಾಗಿದೆ. ಮೂಲದ ಶೀರ್ಷಿಕೆಯಲ್ಲಿರುವ ಕೌತುಕತೆ ಇಲ್ಲಿಲ್ಲ. ಕನಸುಗಳು ಮಾರಾಟಕ್ಕಿಟ್ಟಿದ್ದರೆ ಏನನ್ನು ಕೊಳ್ಳುವಿರಿ? ಎಂಬ ಪ್ರಶ್ನೆಗೆ ಉತ್ತರರೂಪದಂತಿದೆ ಅನುವಾದಗೊಂಡಿರುವ ಶೀರ್ಷಿಕೆ (ಸ್ವೂಚ್ಯವಾಗಿ). ಮೂಲದಲ್ಲಿ ಪಾದರಚನೆಯು ಮೊದಲ 10 ಸಾಲುಗಳು, ಆ ಮೇಲಡ 4 ಸಾಲುಗಳು, ನಂತರ ಸಾಲುಗಳು ಹೀಗಿದೆ. ಶ್ರೀಯವರಲ್ಲೂ ಪಾದರಚನೆಯು ಹೀಗೆಯೇ ಇದೆ.

1ನೆಯ ಪದ್ಯ:

'ಕೂಗುತಿರಲು' ಎಂಬುದು ಅಸಮರ್ಪಕ ಪ್ರಯೋಗವೆನಿಸುತ್ತದೆ. 'ಏನ' ಎಂಬಲ್ಲಿ ಆಡುನುಡಿಯ ಸೌಂದರ್ಯವನ್ನು ಕಾಣಬಹುದು. 3ನೆಯ ಸಾಲು ಮೂಲವನ್ನು ಬಿಟ್ಟು ದೂರವಾಗಿದೆ. 4ನೆಯ ಸಾಲು ಇಡಿಯಾಗಿ ಮೂಲವನ್ನು ಬಿಟ್ಟು ದೂರ ಸಾಗಿದೆ. ಉಳಿದ ಎಲ್ಲ ಸಾಲುಗಳಲ್ಲಿ 'ಹೂವಿನೆಸಳು' ಎಂಬುದನ್ನು ಬಿಟ್ಟರೆ ಉಳಿದೆಲ್ಲವು ಮೂಲದ ಭಾವವನ್ನು ಗ್ರಹಿಸದೇ ಸಪ್ಪೆಯಾಗಿದೆ ಅನುವಾದ. ಮೂಲದ ಜೀವಂತಿಕೆ ಇಡೀ ಪದ್ಯದಲ್ಲಿ ಬರದೆ ಅನುವಾದ ಬರಡಾಗಿದೆ.

2ನೆಯ ಪದ್ಯ :

'ಗುಡಿಲು', 'ತಂಪಲು' ಎಂಬ ಅಸಂಬದ್ಧ ಪ್ರಯೋಗಗಳನ್ನು ಹೊರತುಪಡಿಸಿದರೆ ಉಳಿದೆಡೆಗಳಲ್ಲಿ ಮೂಲಕ್ಕೆ ಸಾಮಿಪ್ಯವನ್ನು ಕಾಣಬಹುದು. ವಿಷಾದದ ಛಾಯೆಯು ಎಡೆಪಡೆದಿರುವುದನ್ನು ಗಮನಿಸಬಹುದು.

3ನೆಯ ಪದ್ಯ :

ಈ ಇಡೀ ಪದ್ಯದಲ್ಲಿ ಅನುವಾದ ಜಾಳುಜಾಳಾಗಿದೆ. 'ಬಾಳ ಅತ್ಯುಚ್ಚ ಮಕುಟದಿಂದ (ಸಾಂಸಾರಿಕ ತೃಪ್ತಿ) ಕಳೆದುಹೋದ ಮುತ್ತೊಂದು ಮತ್ತೆ ಸಿಗುವಂತಾದರೆ ಅದನ್ನು ಕೊಳ್ಳುವೆ' ಎಂಬ ಅಚಲತಾಭಾವ ಧ್ವನಿಪೂರ್ಣವಾಗಿ ಬಂದಿಲ್ಲ. ತ್ರಿಮಾತ್ರಾಲಯವಿದೆ.

**ಹೊಯ್, ಹೊಯ್, ಹೊಯ್**

Alfred Lord Tennyson ನ 'To' ಕವನದ ಅನುವಾದವಿದು. ಮೂಲದಲ್ಲಿರುವಂತೆ 4 ಸಾಲುಗಳ 4 ಪದ್ಯಗಳು ಇಲ್ಲೂ ಇವೆ. ಶ್ರೀಯವರು ಕವನದ ಪ್ರಥಮ ಪಾದವನ್ನೇ ಶೀರ್ಷಿಕೆಯನ್ನಾಗಿಸಿದ್ದಾರೆ. 'ಹೊಯ್' ಎಂಬುದು 'ಮುರಿ', 'ಬೇರ್ಪಡಿಸು', 'ಒಡೆ' ಎಂಬುದಕ್ಕೆ ಸಮಾನ ಪದವೇ ಆಗಿದ್ದು, ಕವನದ ಶೀರ್ಷಿಕೆಗೆ ಒಂದು ವಿಶೇಷತೆಯನ್ನು ತಂದುಕೊಟ್ಟಿದೆ.

ಮೊದಲ ಪದ್ಯದ ಎಲ್ಲ ಸಾಲುಗಳಲ್ಲಿ ಪದಶಃ ಅನುವಾದವನ್ನು ಕಾಣಬಹುದಾಗಿದೆ. Cold grey stones – ಬೆಳಿತ ತಣ್ಣಲ್ಗಳಲಿ ಎಂದಾಗಿರುವುದು ಅತ್ಯಂತ ಸೂಕ್ತವಾದ ಭಾಷಾಂತರ. ಮೂಲದ ಭಾವತೀವ್ರತೆಯನ್ನು ಈ ಸಾಲುಗಳು ತನ್ನದಾಗಿಸಿಕೊಂಡಿವೆ.

2ನೆಯ ಪದ್ಯ :

'ಬೆಸ್ತರಮಗ' – 'Fisher man's boy' ಗೆ ಸರಿಯಾದ ಅನುವಾದ. ಆದರೆ ಶ್ರೀಯವರು 'ತೊರೆಯರೆಳೆಯನಿಗೆ' ಎಂದನುವಾದಿಸಿ ಆತ್ಮೀಯತೆ, ಆಪ್ತತೆಯನ್ನು ತಂದಿದ್ದಾರೆ. ಉಳಿದ ಸಾಲುಗಳು ಮೂಲಕ್ಕೆ ಸೂಕ್ತವಾಗಿ ಭಾಷಾಂತರಗೊಂಡಿವೆ.

3ನೆಯ ಪದ್ಯ :

4 ಸಾಲುಗಳು ಮೂಲದ ಗಾಂಭೀರ್ಯ, ಭಾವುಕತೆಯನ್ನೊಳಗೊಂಡು ಸೊಗಸಾಗಿ ಅನುವಾದವಾಗಿವೆ.

4ನೆಯ ಪದ್ಯ :

'ಹಗಲಿಕ್ಕರಿನ' ಎಂಬುದು ಮೂಲದ 'Tender grace of a day' ಪದಗಳ ಭಾವವನ್ನು ಆತ್ಮೀಕರಿಸಿಗೊಂಡಿದೆ. 'ಮಗುಳ್ದಿನ್ನು' ಎಂಬುದು 'ಮರಳಿನ್ನು' ಎಂದು ಸರಳವಾಗಿ ಭಾಷಾಂತರವಾಗಬಹುದಿತ್ತು. ಉಳಿದಂತೆ ಅನುವಾದ ಇಲ್ಲಿ ಯುಕ್ತವಾಗಿದೆ.

ಕಳೆದುಹೋದ ಸೌಂದರ್ಯ, ಮಾರ್ದವತೆ, ಕ್ರಿಯಾಶೀಲತೆ, ಚರಾಚರಗಳ ಚಟುವಟಿಕೆಗಳೆಲ್ಲಕ್ಕೂ ಆಧಾರವಾದ ಹಗಲು ಕಳೆದುಹೋದುದರ ಬಗೆಗಿನ ಮುಗ್ಧಶೋಕಭಾವ ಸೂಚ್ಯವಾಗಿದೆ. ಯಾವುದೇ ಅವ್ಯಕ್ತವಾದ ಹೇಳಲಾಗದ, ಅನುಭವಿಸಲಾಗದ ಸ್ಥಿತಿಯೊಂದು ವಿಷಾದದ ಸಹಚಾರಿಯಾಗಿ ಬಂದಿದೆ. ಕೊನೆಯ ಸಾಲಿನಲ್ಲಿ ಇದುವರೆಗೂ ಇದ್ದ ವಿಷಾದವು ನಿರಾಶೆಯ ಹಾದಿ ತುಳಿದಿರುವುದು ಧ್ವನಿಪೂರ್ಣವಾಗಿದೆ. ಪಂಚಮಾತ್ರಾಲಯವಿದೆ.

ದುಃಖಸಮಯ :

Pery Bysshe Shelley ರಚಿಸಿದ 'A Lament' ಕವನದ ಅನುವಾದವಿದು. 'Lament' ಎಂಬುದಕ್ಕೆ 'ಪ್ರಲಾಪ' ಎಂತಲೊ 'ಶೋಕ' ಎಂತಲೊ ಅನುವಾದ ಮಾಡಬಹುದಿತ್ತು. 'ದುಃಖಸಮಯ' ಎಂದಿರುವುದು ಏಕೋ ಉಚಿತವಲ್ಲವೆನಿಸುತ್ತದೆ. ಮೂಲಕವನದಲ್ಲಿರುವಂತೆ ಇಲ್ಲಿಯೂ 5 ಸಾಲುಗಳುಳ್ಳ 2 ಪದ್ಯಗಳಿವೆ.

ಮೊದಲ ಪದ್ಯ :

ಮೊದಲ ಸಾಲೇ ಎಡವಿ ಮುಗ್ಗರಿಸಿದೆ ಎನಿಸುತ್ತದೆ. ಮೂಲದಲ್ಲಿನ ಅರ್ಥವೇ ಬೇರೆ, ಭಾವವೇ ಬೇರೆ. ಈ ಸಾಲನ್ನು ಏನು ಬದುಕೋ / ಏನು ಬಾಳೊ ಎಂದು ಅನುವಾದ ಮಾಡಬಹುದಿತ್ತು. ಮೂಲದ ವೈರಾಗ್ಯಭಾವ ಇಲ್ಲಿ ಅಷ್ಟು ಆಳವಾಗಿ ಬಂದಿಲ್ಲ. 3ನೆಯ ಸಾಲಿನಲ್ಲಿ ಅನುವಾದ ಸಪ್ಪೆಯಾಗಿದೆ. ಇದನ್ನು 'ಸಾಧನೆಯ ಶಿಖರಕೆ ಹತ್ತಲನುವಾದೆನೋ

ಅಂದು ಗತವ ಕಂಡು ನಡುಗತಲಿದ್ದೆನು' ಎಂದು ಅನುವಾದಿಸಬಹುದಿತ್ತು. 4ನೆಯ ಸಾಲು ಮೂಲದಿಂದ ದೂರ ಸರಿದಿದೆ. ಯಾವ ಕಾಲಕೊ ಮರಳಿ ಬರುವುದು ನಿನ್ನ ಮುನ್ನಿನ ಉಜ್ವಲ ಕೀರುತಿ' ಎಂದು ಈ ಸಾಲನ್ನು ಭಾಷಾಂತರಿಸಬಹುದಿತ್ತು. 5ನೆಯ ಸಾಲಿನ 'ಇನ್ನದೆಂದಿಗೂ' ಪದ ಏಕೋ ಅಸಮಂಜಸವೆನಿಸುತ್ತದೆ. 'ಇನ್ನೆಂದೆಂದಿಗೂ' ಎಂದಾಗಿದ್ದರೆ ಚೆನ್ನಾಗಿರುತ್ತಿತ್ತು.

2ನೆಯ ಪದ್ಯ :

ಮೊದಲೆರಡು ಸಾಲುಗಳಲ್ಲಿ ಭಾವಾನುವಾಗಿದೆ. 3ನೆಯ ಸಾಲಿನ 'ಬಿಳಿಯ ಮಂಜಿನೀ ಹಿಮ' ಮೂಲದಲ್ಲಿಲ್ಲದ ಚಿತ್ರಕ ಶಕ್ತಿಯನ್ನು ಪಡೆದಿದೆ. ಉಳಿದ ಸಾಲುಗಳು ಮೂಲಕ್ಕೆ ಸಮೀಪವಾಗಿವೆ.

ನೋವು, ಸಂಕಟ, ಗೊಂದಲ, ದುಗುಡ – ದುಮ್ಮಾನ, ಪ್ರೀತಿಯ ಅಗಲಿಕೆ ಎಲ್ಲ ಭಾವಗಳು ಇಡಿಕಿರಿದು ಶೋಕರಸಕ್ಕೆ ಪುಟಗೊಟ್ಟಿವೆ. ಬಾಳು ಬರಡಾದ ಸ್ಥಿತಿ ಇಲ್ಲಿ ಧ್ವನಿಪೂರ್ಣವಾಗಿದೆ. ಆದಿಪ್ರಾಸವು ಇಲ್ಲಿ ಎಡೆಪಡೆದಿದೆ. 3–4 ಮಾತ್ರೆಗಳ ಮಿಶ್ರಲಯವಿದೆ.

**ಕಳೆದ ಹಿಂದಿನ ದಿನಗಳು**

Robern Burns ನ 'Auld lang syne' ಕವಿತೆಯ ಅನುವಾದ ಈ ಕವನ. 4 ಸಾಲುಗಳುಳ್ಳ 5 ಪದ್ಯಗಳನ್ನು ಉಭಯ ಕವನಗಳಲ್ಲಿಯೂ ಕಾಣಬಹುದು.

1ನೆಯ ಪದ್ಯ:

ಮೊದಲ ಸಾಲಿನಲ್ಲಿ Acuaintance ಎಂಬುದಕ್ಕೆ 'ಅರಿತವ' ಎಂಬರ್ಥವಿದ್ದರೂ 'ಕೆಳೆಯ' ಎಂದನುವಾದಿಸಿರುವಲ್ಲಿ ಅರ್ಥೋನ್ನತಿಯನ್ನು ಕಾಣಬಹುದು. 2ನೆಯ ಸಾಲು ಮೂಲವನ್ನು ಬಿಟ್ಟು ದೂರವಾಗಿದೆ. 'And never brought to mind'? ಎಂಬುದಕ್ಕೆ ಮನಕೆ ಎಂದಿಗೂ ತಂದುಕೊಳ್ಳದೇ' ಎಂದು ಅನುವಾದಿಸಬಹುದಿತ್ತು. 3 ಮತ್ತು 4ನೆಯ ಪಾದಗಳು ಮೂಲಕ್ಕೆ ಸಮೀಪವಾಗಿವೆ.

2ನೆಯ ಪದ್ಯ :

ಮೂಲದ 2 ಮತ್ತು 3ನೆಯ ಪದ್ಯಗಳನ್ನು ಸೇರಿಸಿ ಅನುವಾದ ಮಾಡಲಾಗಿದೆ. ಮೊದಲ ಸಾಲಿನ My dear ಮಾಯವಾಗಿದೆ. ಇದನ್ನು ಅತ್ಯಂತ ಸರಳವಾಗಿ 'ನನ್ನೊಲವೆ' ಎಂದು ಅನುವಾದಿಸಬಹುದಿತ್ತು. ಉಳಿದ ಸಾಲುಗಳು ಮೂಲಕ್ಕೆ ಸಮೀಪವಾಗಿ ಅನುವಾದಗೊಂಡಿವೆ.

3ನೆಯ ಪದ್ಯ :

ಇದು ಮೂಲದ 4ನೆಯ ಪದ್ಯದ ಅನುವಾದವಾಗಿದೆ. ಮೊದಲೆರಡು ಸಾಲುಗಳು ಮೂಲಕ್ಕೆ ದೂರವಾಗಿವೆ. 'ಕಷ್ಟದ ದಿನಗಳಲಿ ನಾನು ನಿಮ್ಮೊಡನಿದ್ದೆನು' ಎಂಬ ಸಾಲು ಬಂದಿದ್ದರೆ ಚೆನ್ನಾಗಿರುತ್ತಿತ್ತು. 3 ಮತ್ತು 4ನೆಯ ಸಾಲುಗಳಿಗೆ ಮೂಲದಲ್ಲಿ ಆಧಾರವಿಲ್ಲ.

4ನೆಯ ಪದ್ಯ :

ಇದು ಮೂಲದ 5ನೆಯ ಪದ್ಯದ ಅನುವಾದವಾಗಿದೆ. ಇಲ್ಲಿ ಕಳೆದ ಆಟದ ಸಂತಸವು ವ್ಯಕ್ತವಾಗಿದೆ. 5 ಮತ್ತು 6ನೆಯ ಪದ್ಯಗಳು ಶ್ರೀಯವರ ಸ್ವತಂತ್ರ ಸೃಷ್ಠಿಯಾಗಿವೆ. ಬರಿಯ ನೆನಪಾಗಿರುವ ಹಿಂದಿನ ದಿನಗಳ ಕುರಿತ ನೋವು ಧ್ವನಿಪೂರ್ಣವಾಗಿದೆ. ಉಚಿತ ಪದಗಳ ಬಳಕೆ ಕೆಲವೆಡೆ ಎಡವಿದೆ. 2ನೆಯ ಪದ್ಯವನ್ನು ಹೊರತುಪಡಿಸಿ ಉಳಿದೆಡೆ ಆದಿಪ್ರಾಸವಿದೆ. 3–4 ಮಾತ್ರೆಗಳ ಮಿಶ್ರಲಯವಿದೆ.

## ಮನಸ್ತಾಪ

William Wordsworth ಕವಿಯ 'A Complaint' ಕವನದ ಅನುವಾದವಿದು. Complaint ಎಂಬುದಕ್ಕೆ 'ದೂರು' ಎಂಬ ವಾಚ್ಯಾರ್ಥವನ್ನು ತೊರೆದು 'ಅಸಮಾಧಾನ' ಎಂಬರ್ಥವನ್ನು ಕೊಡುವ 'ಮನಸ್ತಾಪ'ವನ್ನು ಶೀರ್ಷಿಕೆಯಾಗಿಸಿರುವುದು ಗಮನಾರ್ಹ. ಮೂಲದಲ್ಲಿರುವಂತೆ ಇಲ್ಲಿಯೂ 6 ಸಾಲುಗಳ 3 ಪದ್ಯಗಳಿವೆ.

1ನೆಯ ಪದ್ಯ :

ಮೊದಲ ಪದವಾದ 'ಹೊಸನಡತೆ ನೀನಾದೆ'ಯಲ್ಲಿ ಮೂಲದ ಭಾವ ಮತ್ತೂ ಉನ್ನತೀಕರಣಗೊಂಡಿದೆ. 2ನೆಯ ಸಾಲು ಮೂಲಕ್ಕೆ ಸಮೀಪವಾಗಿದೆ. ಮೂರು ಮತ್ತು 4ನೆಯ ಸಾಲುಗಳು ಮೂಲವನ್ನು ಬಿಟ್ಟು ದೂರವಾಗಿವೆ.ಹೋಗಲಿ, ಭಾವಾನುವಾದವೇನಾದರೂ ಆಗಿದೆಯೋ ಎಂದರೆ ಆದಕ್ಕೂ ಅವಕಾಶವಿಲ್ಲ ಈ ಸಾಲುಗಳನ್ನು

ಚಿಲುಮೆ ಹೊಮ್ಮಿತು ಮನದ ಹೊಸಿಲೊಳು
ಪ್ರವಹಿಸುವುದು ತನ್ನ ರೂಢಿಯಂತೆ

ಎಂದು ಅನುವಾದಿಸಿದ್ದರೆ ಚೆನ್ನಾಗಿರುತ್ತಿತ್ತು. 5 ಮತ್ತು 6ನೆಯ ಸಾಲುಗಳು ಮೂಲಕ್ಕೆ ಸಮೀಪವಾಗಿವೆ.

2ನೆಯ ಪದ್ಯ :

ಎಲ್ಲ ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ. 'ಕುಡಿಯಬಾರದ ಬಾವಿ, ಕಸಕವಿದ ಹೂಳು' ಈ ಸಾಲು 'ಹೂಳು ತುಂಬಿ ಅವಿತ ಹಾಳು ಬಾವಿ' ಎಂದನುವಾದವಾಗಿದ್ದರೆ ಮೂಲಕ್ಕೆ ಇನ್ನು ಸಮೀಪವಾಗಿರುತ್ತಿತ್ತು.

4ನೆಯ ಸಾಲಿನ 'ನನಗುಲಿಯದಾಗಿ' ಸೂಕ್ತವಾಗಿ ಅನುವಾದವಾಗಿಲ್ಲ. ಇದರ ಬದಲಿಗೆ 'ಮಲಗಿರಲು ಮೌನದಲಿ, ಮಬ್ಬಿನಲಿ' ಎಂದು ಅನುವಾದವಾಗಿದ್ದರೆ ಸೊಗಸಾಗಿರುತ್ತಿತ್ತು. ಉಳಿದ ಸಾಲುಗಳು ಸಮರ್ಪಕವಾಗಿ ಅನುವಾದಗೊಂಡಿವೆ.

ತನ್ನೊಲವನ್ನು ಕಳೆದುಕೊಂಡುದರ ವಿರಹ ಶೋಕರಸಪೂರ್ಣವಾಗಿ ಹರಿದಿದೆ. ಒಲವು ದೂರಾದರೂ ಒಲವಿನ ನೆನಪು ದೂರಾಗದೆಂಬುದು ಧ್ವನಿತವಾಗಿದೆ.

## ಚೋಳಕನ್ನೆಯರು

William Wordsworth ಮಹಾಕವಿಯು ವಿರಚಿಸಿದ 'The seven sisters' ಕವಿತೆಯ ಅನುವಾದ ಈ ಕವನ. 'Seven' ಎಂಬುದಕ್ಕೆ 'ಚೋಳ' ಎಂಬುದು ಹೊಂದದು. ಆದರೆ ಇದು ರೂಪಾಂತರ. Sister – ಸೋದರಿಯರು ಆಗುವ ಬದಲು 'ಚೋಳ'ನಿಗೆ ಅನುಸಾರಿಯಾಗಿ 'ಕನ್ನೆಯರು' ಎಂದಾಗಿದೆ. ಇಲ್ಲಿಯೂ ಮೂಲಕವನದಲ್ಲಿರುವಂತೆ 11 ಸಾಲುಗಳುಳ್ಳ 6 ಪದ್ಯಗಳಿವೆ.

1ನೆಯ ಪದ್ಯ :

All Childern of one mother – ಒಬ್ಬತಾಯ ಸಿರಿಮಕ್ಕಳು, Bore each other – ಹಬ್ಬಿಪಣೆದವರ, Took of them no thought – ಕೊಳ್ಳನೆಣಿಕೆಯಲಿ "ಎಂದಾಗಿರುವುದು ಶ್ರೀಯವರ ಭಾಷಾಪ್ರೌಢಿಮೆಯನ್ನು, ಶಬ್ಧಸಂಪತನ್ನು ಪೃಥಕ್ಕರಿಸುತ್ತದೆ. ಉಳಿದಂತೆ ಇಲ್ಲಿ ಅನುವಾದ ಮೂಲಕ್ಕೆ ಸಮೀಪವಾಗಿದೆ.

2ನೆಯ ಪದ್ಯ :

'ತುರುಬುವುದು' ಎಂಬಲ್ಲಿ ಎಂತಹ ಶಬ್ಧಚಿತ್ರವಡಗಿದೆ ! ಮೂಲದಲ್ಲಿಲ್ಲದ ಚಿತ್ರಕ ಶಕ್ತಿಯನ್ನು 3 ಮತ್ತು 4ನೆಯ ಸಾಲುಗಳಲ್ಲಿ ಕಾಣಬಹುದು. 'ಮೊರೆವ', 'ಮೆರೆವ', 'ಹಡಗ', 'ಕಡಲ', 'ತಡಿಯ' ಪದಗಳು ಶ್ರೀಯವರ ಕೈಯಿಂದ ಕಾಳುಚೆಲ್ಲಿದಂತೆ ಸರಾಗವಾಗಿ ಹೊಮ್ಮಿವೆ.

3ನೆಯ ಪದ್ಯ :

Closing – ಮುಸುಕು ಆಗಿರುವುದರಲ್ಲಿನ ಶಬ್ಧಸೌಂದರ್ಯವನ್ನು ಏನೆಂದು ಹೇಳಲೋ ! 'ಮಿಸುನಿಜಂಕೆ' ಪದದಲ್ಲಿ ಶಬ್ಧಗಳ ನಿರಾಭರಣ ಸೌಂದರ್ಯವನ್ನು ವರ್ಣಿಸಲಸದಳ, ನಂತರದ ಸಾಲುಗಳಲ್ಲಿ ಕಳ್ಳರಂ ಆಕ್ರಮಣದ ಪರಿಯನ್ನು ಇದಕ್ಕಿಂತಲೂ ಸೊಗಸಾಗಿ ಹೇಳಲಾಗದೊ ಏನೋ! ಮೊದಲಿನಿಂದಲೂ ಉಕ್ಕಿ ಬಂದ ಸಹೃದಯರ ಆತಂಕ ಕೊನೆಯ 2 ಸಾಲಿನಲ್ಲಿ ಸಮಾಧಾನಪಡುವಂತಿರುವ ಭಾವ ಮನತಟ್ಟಿ ಸೆರೆಯಾಗುತ್ತದೆ.

ನಾಲ್ಕು, ಐದು ಮತ್ತು ಆರನೆಯ ಪದ್ಯಗಳಲ್ಲಿ, ಅನುವಾದ ಮೂಲಕ್ಕೆ ಸಮೀಪವಾಗಿದೆ. 'ಕಾಲುಹೊಳೆ' ಪದದ ರೂಪಕಶಕ್ತಿ ಸೊಗಸಾಗಿದೆ.

ಚೋಳಕನ್ನೆಯರ ಅವಸಾನದಲ್ಲಿ ಆಳವಾದ ವಿಷಾದವು ಶೋಕರಸದೊಂದಿಗೆ ಮಿಳಿತವಾಗಿ ಸಹೃದಯರ ಮನ ಮರುಗುವಂತೆ ಮಾಡುತ್ತದೆ. ಚೋಳನ ಬಗೆಗಿನ ಅಸಮಾಧಾನವೂ, ಕನ್ನೆಯರು ತಮ್ಮ ಮಾನರಕ್ಷಣೆಗೆ ಅರಸಿದ ಹಾದಿಯ ಬಗೆಗಿನ ಪ್ರಶಂಸೆಯು ಧ್ವನಿಪೂರ್ಣವಾಗಿದೆ. ಇದರಲ್ಲಿ ಸ್ವಲ್ಪ ಕಥನ ಗುಣವನ್ನು ಕಾಣಬಹುದು. 3–4 ಮಾತ್ರೆಗಳ ಮಿಶ್ರಲಯವಿದೆ.

## ಸರ್ ಜಾನ್ ಮೂರನ್ನು ಹೂಳಿದ್ದು

C. Wolfe ನ 'Burial of sir john moore at cobunna' ಕವಿತೆಯ ಅನುವಾದ 'ಸರ್ ಜಾನ್ ಮೂರನ್ನು ಹೂಳಿದ್ದು.' ಮೂಲದಲ್ಲಿ ಸರ್ ಜಾನ್‌ಮೂರ್ ಹೂಳಿದ್ದ ಸ್ಥಳದ ಪ್ರಸ್ತಾಪವಿದ್ದರೆ, ಅನುವಾದದಲ್ಲಿ ಇಲ್ಲವಾಗಿದೆ. 4 ಸಾಲುಗಳುಳ್ಳ 8 ಪದ್ಯಗಳನ್ನು ಉಭಯಕವನಗಳಲ್ಲಿ ಕಾಣಬಹುದು.

ಒಂದು ಮತ್ತು 2ನೆಯ ಪದ್ಯಗಳಲ್ಲಿ ಮೂಲದ ಭಾವ, ಅರ್ಥಛಾಯೆಗಳು ಸಮರ್ಪಕವಾಗಿ ಅನುವಾದಗೊಂಡಿವೆ. 3ನೆಯ ಪದ್ಯದ No useless coffin enclosed his breast' ಎಂಬ ಪಂಕ್ತಿಯಲ್ಲಿ ಶವದ ಪೆಟ್ಟಿಗೆಯ ನಿರರ್ಥಕತೆ ನಮ್ಮ ಮನಸ್ಸನ್ನು ತಟ್ಟುತ್ತದೆ. ಆದರೆ 'ಒಡಲ ಪೇಳಿಗೆಯಲಿ ಒಪ್ಪಮಾಡಲು ಇಲ್ಲ, ಬಟ್ಟೆ ದುಪ್ಪಟಿಯಲಿ ಸುತ್ತಲು ಇಲ್ಲ', ಎಂದು ಅನುವಾದವಾಗಿರುವುದನ್ನು ಕಂಡಾಗ, ಮೂಲದಲ್ಲಿಲ್ಲದ ಚಿತ್ರಕ ಶಕ್ತಿಯನ್ನು ಗಮನಿಸಬಹುದು. 5ನೆಯ ಪದ್ಯದಲ್ಲಿ ಮೂಲದ ಅನುಕರಣೆಯ ಜೊತೆಗೆ ಶ್ರೀಯವರ ಸ್ವೋಪಜ್ಞತೆಯನ್ನು ಕಾಣಬಹುದು. 6ನೆಯ ಪದ್ಯದಲ್ಲಿ ಶತ್ರುಗಳ ಕೃತ್ರಿಮ ಬುದ್ಧಿಯ ಬಗೆಗಿನ ಸಾತ್ವಿಕ ಕೋಪ ಮೂಲದಲ್ಲಿರುವಂತೆಯೇ ವರ್ಣಿತವಾಗಿದೆ. ಏಳು ಮತ್ತು ಎಂಟನೆಯ ಪದ್ಯಗಳಲ್ಲಿ ಮೂಲದಲ್ಲೂ ಕಾಣಸಿಗದ ಭಾವುಕತೆ ಜೀವತಳೆದು ನಿಂತಿದೆ. ಉದಾ:– 'ಮೆಲ್ಲಗೆ, ಮರುಗುತ_'

## ನಿರಾಶೆ

ಶೆಲ್ಲಿಯ 'Stanzas written in dejection, near naples' ಕವನದ ಅನುವಾದ ನಿರಾಶೆ, ತೀ.ನಂ.ಶ್ರೀ. ಯವರು ಈ ಕವನವನ್ನು ಕುರಿತು 'ಉತ್ಕೃಷ್ಟವಾದ ಅನುವಾದ'ವೆಂದು ಇಂಗ್ಲಿಷ್ ಗೀತೆ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಮೊದಲ ಪದ್ಯದಲ್ಲಿ ಮೂಲದ 5ನೆಯ ಸಾಲು ಅನುವಾದವೇ ಆಗಿಲ್ಲ. ಉಳಿದ ಸಾಲುಗಳು ಮೂಲಕ್ಕೆ ಸಮೀಪವಾಗಿ ಅನುವಾದಗೊಂಡಿವೆ. 2ನೆಯ ಪದ್ಯದ 'The lightning of noontide occan' ನ ಅನುವಾದದಲ್ಲಿ 'Noontide'ಗೆ ಸಮಾನಾರ್ಥಕ ಪದವೇ ಇಲ್ಲ. ಹೀಗೆ ಅನುವಾದ ಅಲ್ಲಲ್ಲಿ ಸೋತು ಸೋತು ಸಾಗಿದೆ. ಮೊದಲಿದ್ದ ಉತ್ಸಾಹ ಕವನದುದ್ದಕ್ಕೂ ಹರಿಯುವಲ್ಲಿ ವಿಫಲವಾಗಿದೆಯೆನ್ನಬಹುದು. ಖಿನ್ನತೆಯ ಭಾವ ವ್ಯಕ್ತಪಡಿಸುವ ಭಾವದ ಗತಿ ಅನುವಾದದಲ್ಲಿ ನಿಧಾನವಾಗಿದೆ. ಚತುರ್ಮಾತ್ರಾಲಯವಿದೆ.

## ಕೌಟುಂಬಿಕ ಗೀತೆ:

### ಮುದ್ದಿನ ಕುರಿಮರಿ

"ಮೂವತ್ತೆರಡು ವರ್ಷಗಳ ಹಿಂದಿನ ಮಾತು. ಹೈಸ್ಕೂಲಿನಲ್ಲಿ ಓದುತ್ತಿದ್ದ ನನ್ನ ಕೈಗೆ ಒಂದು ಮಾಸಪತ್ರಿಕೆ ಸಿಕ್ಕಿತು. ಅದರ ಹಾಳೆಗಳನ್ನು ತಿರುವಿ ಹಾಕುವಾಗ, ಸಾಲುಸಾಲಾಗಿ ಅಚ್ಚಾಗಿದ್ದ ಕವನವೊಂದು ಕಣ್ಣನ್ನು ಸೆಳೆಯಿತು, ಕುತೂಹಲದಿಂದ ಓದತೊಡಗಿದೆನು.

ಓಡಿದು ಮಂಜು ಬೀಳುತ್ತಿತ್ತು, ಚುಕ್ಕಿ ಕಣ್ಣು ಮಿಟುಕುತಿತ್ತು;
'ಕುಡಿಯೊ, ಕಂದ, ಕುಡಿಯೊ' ಎಂದು ನುಡಿವ ಮಾತು ಕಿವಿಗೆ ಬಿತ್ತು;

ತಿರುಗಿ ನೋಡಲೊಬ್ಬೆಯಾಚೆ, ಒಬ್ಬಳಲ್ಲಿ ಹೆಣ್ಣುಮಗಳು
ನೊರೆಯ ಬಿಳಿಪು ಕುರಿಯ ಮರಿಯ ತಲೆಯ ತಡವುತಿದ್ದಳು;

ಚಿಕ್ಕಂದಿನ ಪಠ್ಯಪುಸ್ತಕಗಳಲ್ಲಿ ನಾವು ಓದಿ ಬಳಕೆ ಮಾಡಿಕೊಂಡಿದ್ದ ಷಟ್ಪದಿ, ಕಂದ, ವೃತ್ತ ಈ ಯಾವೊಂದು ಪದ್ಯಜಾತಿಗೂ ಸೇರದಿದ್ದರೂ ತಾಳಕ್ಕೆ ಸರಿಯಾಗಿ ಓಡುವ ಚರಣಗಳು, ಕೇಳಿದ ಕೂಡಲೆ ಅರ್ಥವಾಗುವ ಆಡಂಬರವಿಲ್ಲದ ಹೊಸಗನ್ನಡ ಮಾತುಗಳು. ಹುಡುಗರ ಅನುಭವಕ್ಕೆ ಕೂಡ ನಿಲುಕುವ ವಿಷಯಸರಣಿ – ಇದನ್ನು ಕಂಡು ನನ್ನ ಎಳೆಯ ಮನಸ್ಸು ಈ ಪದ್ಯದ ಕಡೆಗೆ ಹೆಚ್ಚಾಗಿ ಹರಿಯಿತು. ಇಂಥ ಕವನಗಳು ಇನ್ನೂ ಉಂಟೆ?..." ಎಂಬ ತೀ.ನಂ.ಶ್ರೀಕಂಠಯ್ಯನವರ ಮಾತುಗಳು ಈ ಪದ್ಯ ಆ ಕಾಲದಲ್ಲಿಯೇ ಬೀರಿದ ಪ್ರಭಾವವನ್ನು ಸೂಚಿಸುತ್ತವೆ.

"ವರ್ಡ್ಸ್‌ವರ್ತ್ ಸು. 1800ರಲ್ಲಿ ರಚಿಸಿದ 'The pet lamb' 68 ಸಾಲುಗಳ ಒಂದು ಪದ್ಯ. ಇದು ಕನ್ನಡದಲ್ಲಿ 'ಮುದ್ದಿನ ಕುರಿಮರಿ'ಯಾಗಿ ಅಷ್ಟೇ ಸಂಖ್ಯೆಯ ಸಾಲುಗಳಲ್ಲಿ ಮೂಡಿಬಂದಿದೆ ಎಂಬುದು ಕುತೂಹಲಕಾರಿಯಾದ ಅಂಶ. 'The pet lamb' ನಲ್ಲಿ ವರ್ಡ್ಸ್‌ವರ್ತ್‌ನಿಗೆ ಸ್ಫೂರ್ತಿಯ ಸೆಲೆಯಾಗಿರಬಹುದು ಎನ್ನಲಾದ Barbara lewithwaite ಎನ್ನುವ ಹುಡುಗಿಯ ಬಗ್ಗೆ ಈ ಹೇಳಿಕೆಯೂ ಇದೆ.

"Barbara lewithwaite now (1843) living at ambleside, though much changed as to beauty, was one of two most lovely sisters…[she] was not in fact the child whom I had seen and overhead as the above…" [notes in William wordsworth, the poems,vol.1, Ed: john.o. hayden , penguin books (1982) ಆ.1968] ಈ ಬರ್ಬರ ಲೆತ್‌ವೈಟ್ ಶ್ರೀಯವರ ಅನುವಾದದಲ್ಲಿ, ಎಲ್ಲೆಲ್ಲೂ ಕಂಡುಬರುವ, ಮುಗ್ಧತೆಯ ಪ್ರತೀಕವಾದ ಹೆಣ್ಣುಮಗಳಾಗಿ ಪರಿವರ್ತನೆಗೊಂಡಿದ್ದಾಳೆ. ವರ್ಡ್ಸ್‌ವರ್ತ್‌ನ ಮಟ್ಟಿಗೆ ಒಬ್ಬಳು ವ್ಯಕ್ತಿಯಾಗಿದ್ದವಳು ಇಲ್ಲಿ ಸಾಮಾನ್ಯೀಕರಣಗೊಂಡಿರುವುದು ಗಮನಾರ್ಹವಾದ ಅಂಶ. ಇದು ಒಂದು ಮುಖ್ಯ ಬದಲಾವಣೆಯಾಗಿದೆ ಎನ್ನಬಹುದು.

ಶ್ರೀಯವರು ವರ್ಡ್ಸ್‌ವರ್ತ್‌ನನ್ನು ಬಹುಮಟ್ಟಿಗೆ ಅನುಸರಿಸಿರುವರು. ಉದ್ದೇಶಪೂರ್ವಕವಾಗಿ ಬದಲಾವಣೆಗಳನ್ನು ಮಾಡಿಕೊಂಡಿರುವುದರ ಜೊತೆಗೆ ಒಂದೆರಡು ಕಡೆ ಕೆಲವು ಪದಗಳನ್ನು ಬಿಟ್ಟಿರುವುದೂ ಉಂಟು – ಕವನದ ಒಟ್ಟು ಪರಿಣಾಮಕ್ಕೆ ಭಂಗ ಬಾರದ ರೀತಿಯಲ್ಲಿ.

ಉದಾ:– 'Nor sheep nor kine were near; the lamb was all alone' ಎನ್ನುವುದು.

ಕುರಿಗಳಿಲ್ಲ ಬೇರೆ ನೆರೆಯೊಳಲ್ಲಿ ಮರಿಯದೊಂದೆ ಇತ್ತು ಎಂಬುದು ಅರ್ಥಪೂರ್ಣವಾಗಿ ಬಂದಿದೆಯಾದರೂ ಮೂಲದ Kine (=cows) ಎಂಬುದು ಬಂದಿಲ್ಲ. ಇಡೀ ಪದ್ಯದಲ್ಲಿನ ಒತ್ತು ಕುರಿಮರಿಯತ್ತಲೇ ಇರುವುದರಿಂದ ಈ "ಬಿಡುಪಿಕೆ" ಅಷ್ಟು ಪ್ರಮುಖವಾಗಿ ಪರಿಣಮಿಸುವುದಿಲ್ಲ. ಅಲ್ಲದೆ 'ದಟ್ಟವಾದ ಹುಲ್ಲು' ಎಂದು ಅನುವಾದಿಸಿರುವುದರಲ್ಲಿ ಚಿತ್ರಕ ಶಕ್ತಿ ಇದೆ. ಮೂಲದಲ್ಲಿ ಕಂಡುಬರಬಹುದಾದ ಅನಿಶ್ಚತತೆಯು ಕನ್ನಡದಲ್ಲಿ ಹೇಗೆ ಖಚಿತತೆಯಾಗಿ ಮಾರ್ಪಟ್ಟಿದೆ,

ಸಂದೇಹ ನಿವಾರಣೆಯಾಗಿ ಮುಗ್ಧಮನದಲ್ಲಿ ಆತ್ಮ ವಿಶ್ವಾಸ ಮೂಡಿಸುವುದು ಹೇಗೆ ಸಾಗಿದೆ ಎಂಬುದನ್ನು ಇಲ್ಲಿ ಗಮನಿಸಿ; Thy limbs, are they not strong? And beautiful thou art ಎಂಬುದು, ನೀನು ಬಲಿತು ಬೆಳೆಯುತಿರುವೆ; ಸೊಬಗು ಹೊಮ್ಮಿ ಹೊಳೆಯುತಿರುವೆ ಎಂದು ಚೆನ್ನಾಗಿ ಮೂಡಿಬಂದಿದೆ. The I'll yoke thee to my cart like a pony in the plough ಈ ಸಾಲು ಕನ್ನಡದಲ್ಲಿ ಆಗ ನನ್ನ ಪುಟ್ಟಬಂಡಿ ಕಟ್ಟಿಕೊಡುವೆ, ಎಳೆಯುವಂತೆ ಎಂದಾಗಿದ್ದು, ಮೂಲದಲ್ಲಿನ Like a pony in the plough ನ ಸಾಮ್ಯ ಕಾಣದಂತಾಗಿದೆ.

ಸ್ವದೇಶೀಕರಣಗೊಂಡಿರುವ ಪ್ರಸಂಗ ಗಮನಿಸಿ

If Nature to her tongue could measured numbers bring ಎಂಬುದು ಅಳತೆಮಾಡಿ ನುಡಿಯ ಹೆಣೆವ ವರವ ಕೊಡಲು ವಾಣಿ, ಈಗ ಎಂದಾಗಿದೆ. Nature ವಿದ್ಯಾಧಿದೇವತೆಯಾದ ವಾಣಿಯಾಗಿ ಪರಿವರ್ತಿತವಾಗಿದೆ; 'ಭಾರತೀ'ಕರಣಗೊಂಡಿದೆ; (Nature ಪ್ರಕೃತಿ ಎಂದರೂ ತಪ್ಪಾಗುತ್ತಿರಲಿಲ್ಲವೇನೋ!) Beech ಬಸಿರಿ ಮರವಾಗಿದೆ. ಮೂಲದ ಒಂದು ಪದಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಪದಗಳನ್ನು ಬಳಸಿ ಪರಿಣಾಮವನ್ನು ಹೇಗೆ ಹೆಚ್ಚು ಮಾಡಲಾಗಿದೆ ಎಂಬುದನ್ನು ಗಮನಿಸಬಹುದು. Thy plot of grass is soft, and green as grass can be ಎಂಬುದು

ನೆಲದ ಹುಲ್ಲು ಮೆತ್ತೆಯಲ್ಲ ! ಇದಕ್ಕೆ ಹಸುರೆ ಇಲ್ಲವಲ್ಲ ! ಮತ್ತು This grass is tender grass ಎಂಬುದು ಇಲ್ಲಿ ಗರುಕೆ ಎಳೆಯ ಗರುಕೆ ಎಂದಾಗಿದೆ. ಸಿದ್ಧಿ ಪಡೆದ ಭಾಷಾಂತರಕಾರರಿಗೆ ಮಾತ್ರ ಈ ಕಾರ್ಯ ಸಾಧ್ಯ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಇನ್ನು "ಮುದ್ದಿನ ಕುರಿಮರಿ"ಯ ಛಂದಸ್ಸಿನ ಬಗ್ಗೆ ಗಮನಿಸಬಹುದು. "ಮುದ್ದಿನ ಕುರಿಮರಿ" ತ್ರಿಮಾತ್ರಾಲಯದಲ್ಲಿಯೇ ಇದೆ. ಇವರ ಪಾದ ಸಂಯೋಜನೆಯು 'ಗೋವಿನ ಕಥೆ'ಯ ಮಟ್ಟನ್ನು ಹೋಲುತ್ತದೆ. ಗೋವಿನಕಥೆಯ ಮಟ್ಟಿನಲ್ಲಿ ಮೂರು ಪೂರ್ಣಪಾದಗಳ ಸರಣಿ ಕೊನೆಗೆ ಒಂದು ಊನಪಾದ ಬಂದು, ಬಂಧಕ್ಕೆ ಮುಕ್ತಾಯ ಸೂಚಿಸುತ್ತದೆ. ಒಟ್ಟಾರೆ ಬಂಧವು ಒಂದು ತ್ರಿಸಮ ಚೌಪದಿಯಾಗಿದೆ. "ಮುದ್ದಿನ ಕುರಿಮರಿ"ಯ ರಚನೆ ಕೂಡ ಇಂತಹುದೇ. ಇದರಲ್ಲೂ ಮೂರು ಪೂರ್ಣಪಾದಗಳ ಸರಣಿ; ಕೊನೆಗೆ ಒಂದು ಊನಪಾದ; ಒಟ್ಟಾರೆ ಬಂಧವು ಒಂದು ತ್ರಿಸಮಚೌಪದಿ. [ಎಂದರೆ ಮೂರು ಪಾದಗಳು ಸಮವಾಗಿರುವ ಒಂದು ಚೌಪದಿ] ಬಹುಮಟ್ಟಿಗೆ ಅಂತ್ಯಪ್ರಾಸವಿಲ್ಲ [ಒಂದನೆಯ ಮತ್ತು ಹದಿಮೂರನೆಯ ಚೌಪದಿಗಳಲ್ಲಿ ಮಾತ್ರ ಅಂತ್ಯಪ್ರಾಸವಿದೆ]; ಆದಿಪ್ರಾಸ ಮಾತ್ರ aa bb ಮಾದರಿಯಲ್ಲಿ ನಿಯತವಾಗಿ (ಮೂರನೆಯ ಚೌಪದಿಯೊಂದನ್ನುಳಿದು) ಬಂದಿದೆ."[24]

---

[24] ಬಿ.ಎಂ.ಶ್ರೀ ನೂರಾರು ನೆನಪು– ಪ್ರಬುದ್ಧ ಕರ್ನಾಟಕ ಸಂ 65 ಸಂಚಿಕೆ 4 ಪು 297–299

ನಿತ್ಯ ಜೀವನದ ಸಾಮಾನ್ಯ ಘಟನೆ ಇಲ್ಲಿ ವಸ್ತುವಾಗಿದೆ. "ಹಳ್ಳಿಯ ಬಾಳೆ ಸರಳತೆಯ ಪ್ರತೀಕವೆಂದಮೇಲೆ ಇಲ್ಲಿಯ ಪಾತ್ರಗಳಾದರೋ ಒಂದು ಮುಗ್ಧ ಬಾಲೆ, ಇನ್ನೊಂದು ಏನೂ ಅರಿಯದ ಕುರಿಮರಿ, ಆ ಮುಗ್ಧ ಬಾಲೆಗೆ ಕುರಿಮರಿ ಎಂದರೆ ಬರಿ ಒಂದು ಪ್ರಾಣಿಯಲ್ಲ, ಆಟದ ವಸ್ತುವಲ್ಲ, ಬೇಸರ ಕಳೆಯುವ ಸಾಧನವಲ್ಲ. ತನ್ನ ಸಂಪೂರ್ಣ ಪ್ರೇಮವನ್ನು ಧಾರೆಯೆರೆಸಿಕೊಂಡಿರುವ ಒಡನಾಡಿ ಜೀವ. ಈ ಎರಡು ಜೀವಿಗಳಿಗೆ ಹಿನ್ನೆಲೆಯಾಗಿ ನಿಂತಿರುವ ಪ್ರಕೃತಿಯಲ್ಲಿ ಆರ್ಭಟವಿಲ್ಲ. ಈ ಕವನದಲ್ಲಿ ಮೊದಲಿನಿಂದ ಕಡೆಯವರೆವಿಗೂ ನಿರ್ಮಿತವಾಗಿರುವುದು ಸಹಜ, ಸುಂದರ, ಸರಳ, ಸೌಮ್ಯ, ಸಾಮರಸ್ಯ ವಾತಾವರಣ".[25]

### ವಿಡಂಬನ (ವ್ಯಂಗ್ಯ) ಕವನ

ತಪ್ಪನ್ನೋ ಕೊರತೆಯನ್ನೋ ಎತ್ತಿ ತೋರಿಸಿ ಹಾಸ್ಯ ಮಾಡುತ್ತಾ, ತಿದ್ದುವ ವಿಡಂಬನೆಯ ರೀತಿ ವಿಶೇಷವಾದದು. ಈ ಗುಣವಿಶೇಷತೆಯನ್ನು ಒಳಗೊಂಡ ಒಂದೇ ಒಂದು ಕವನ 'ಇಂಗ್ಲಿಷ್ ಗೀತೆಗಳ'ಲ್ಲಿದೆ. ಅದು 'ಬಿಂಕದ ಸಿಂಗಾರಿ'.

### ಬಿಂಕದ ಸಿಂಗಾರಿ

Sir walter scott' ನ 'The pride of youth' ಕವಿತೆಯ ಅನುವಾದವಿದು. 4 ಸಾಲುಗಳ 4 ಪದ್ಯಗಳನ್ನು ಎರಡೂ ಕವಿತೆಗಳಲ್ಲಿ ಕಾಣಬಹುದು. 'The pride of youth' ಎಂಬುದರ ಪದಶಃ ಅರ್ಥ 'ಜಂಭದ ತಾರುಣ್ಯ', ಶ್ರೀಯವರು ಇದಕ್ಕೆ ಜೀವತುಂತಿ 'ಬಿಂಕದ ಸಿಂಗಾರಿ' ಯನ್ನಾಗಿಸಿದ್ದಾರೆ. ಸ್ತ್ರೀವಾದಿ ದೃಷ್ಟಿಕೋನವನ್ನು ಇಲ್ಲಿ ಗುರುತಿಸಬಹುದು.

1ನೆಯ ಪದ್ಯ:

'Walking so early' ಎಂಬುದನ್ನು 'ಚಿಮ್ಮುತ ನಿರಿಯನು' ಎಂದಾಗಿಸಿರುವುದು ಅವರ ಶಾಬ್ದಿಕ ಸಂಪತ್ತಿಗೆ ಸಾಕ್ಷಿಯಾಗಿದೆ. ಈ ಪದವೇ ಅವಳ ವೇಗವಾಗಿ ಬಂದಳೆಂಬುದನ್ನು ಧ್ವನಿಪೂರ್ಣವಾಗಿಸಿದೆ. ಉಳಿದ ಸಾಲುಗಳು ಮೂಲವನ್ನು ಅನುಸರಿಸಿವೆ.

2ನೆಯ ಪದ್ಯ :

'ಚೆಲುವನು ಸಿಕ್ಕಿ' ಇದಕ್ಕೆ ಮೂಲದಲ್ಲಿ ಆಧಾರವಿಲ್ಲ ಆದರೆ ಈ ಪದ್ಯ ಇದರಿಂದ ಚೆಲುವು ಸಿಕ್ಕಿದೆ. ಉಳಿದ ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ. ಮೂಲವನ್ನು ಮೀರಿದ ಉತ್ಸಾಹದ ನಡೆ ಇಲ್ಲಿದೆ. ಇದರಿಂದ ಈ ಭಾಗ ಸವಿರಾಗಿದ್ದು ಇಷ್ಟವಾಗುತ್ತದೆ. ಹಕ್ಕಿ, ಸಿಕ್ಕಿ ಎಂಬ ಪದಗಳನ್ನು ಓದುತ್ತಿದ್ದರೆ ಕೇಳಿದಂತೆಯೇ Feel ಆಗುತ್ತದೆ.

3ನೆಯ ಪದ್ಯ :

---

[25] ಶ್ರೀನಿಧಿ ಪುಟ 181

ನಾಲ್ಕು ಸಾಲುಗಳು ಮೂಲಕ್ಕೆ ನಿಷ್ಠವಾಗಿವೆ. 'ಒಸಗೆ' ಎಂಬುದು ಕನ್ನಡೀಕರಣಗೊಂಡು ಗ್ರಾಮ್ಯದ ಸೊಗಡನ್ನು ಸೂಸುತ್ತಿದೆ.

4ನೆಯ ಪದ್ಯ :

'Grave and stone' ಬದಲಿಗೆ 'ಮುಳ್ಳು' ಬಂದಿದೆ. ಉಳಿದಂತೆ Scott ಕನ್ನಡದಲ್ಲಿ ಬರೆದಿದ್ದಾನೋ ಎಂಬ ಭ್ರಮೆ ಹುಟ್ಟಿಸುವಂತಿದೆ ಈ ಅನುವಾದ. ತಾರುಣ್ಯದ ಅತಿಕೌತುಕ, ಆತುರ ಸ್ವಭಾವ, ನಡೆನುಡಿಗಳಲ್ಲಿನ ರಭಸ ಎಲ್ಲವೂ ಇಲ್ಲಿ ಬಂದಿದ್ದು, ಅದನ್ನು ತಡೆದು ಸಾವಧಾನವನ್ನು ಕಲಿಸುವ ಪರಿ ಧ್ವನಿತವಾಗಿದೆ. ಅನುವಾದವು ತನ್ನ 'ವಿಧೇಯತೆ'ಯ ಗುಣದಿಂದಾಗಿ ವಿಶೇಷವಾಗಿದೆ. ಚತುರ್ಮಾತ್ರಾಲಯವಿದೆ. ಉದಾ:- ಚಿಮ್ಮುತ, ನಿರಿಯನು, ಬನದಲಿ, ಬಂದಳು

ಈ ಕವನದಲ್ಲಿ 'ಪದ್ಮಗಣ'ಕ್ಕೂ 'ಮುಡಿ'ಗೂ ಉದಾಹರಣೆ ದೊರೆಯುತ್ತದೆ.

ಹೇಳಲೆ, <u>ಪಕ್ಕಿ</u>, ಚೆಲುವನು, <u>ಸಿಕ್ಕಿ</u>
ನನಗೆ, ಮದುವೆಯೆಂ.ದು
ಆಳಿ, ಬಿಬ್ಬಿರು, ಹೊತ್ತಂ.ದು

ಗೆರೆ ಎಳೆದ ಪದಗಳು ಪದ್ಮಗಣಗಳು. 2 ಮತ್ತು 4ನೆಯ ಪಾದಗಳಲ್ಲಿನ ಕೊನೆಯ ಅಕ್ಷರಗಳು 'ಮುಡಿ'ಗಳು.

## ಭಕ್ತಿಗೀತೆ

ಭಕ್ತಿಯು ಪ್ರೀತಿಯ ಅತ್ಯುಚ್ಚ ಹಂತ, ಒಲವು ಪರಮ ಸ್ಥಿತಿಗೇರಿದಾಗ ಅದೇ ಪೂಜೆಯಾಗುತ್ತದೆ. ತಮ್ಮ ಸಾಂಸಾರಿಕ ಜೀವನದಲ್ಲಿ ಕಳೆದುಕೊಂಡ ಪ್ರೀತಿಯ ಒರತೆಯಿಂದ ಅಗಲಿರಲಾರದ ದುಃಖತಪ್ತ ಹೃದಯವೊಂದು ಶಕ್ತಿಸ್ವರೂಪನಾದವನಿಗೆ ಭಕ್ತಿಯಿಂದ ಹಾಡಿ ಹಗುರದ ಕವನ 'ಪ್ರಾರ್ಥನೆ'.

## ಪ್ರಾರ್ಥನೆ

'John Henry Newman' ನ 'Lead kindly light' ಕವನದ ಅನುವಾದ 'ಪ್ರಾರ್ಥನೆ'ಯಾಗಿದೆ. ಶೀರ್ಷಿಕೆಯಲ್ಲಿಯೇ ಕವಿ ಸ್ವಂತಿಕೆ ಮೆರೆದಿರುವುದು ಗಮನಾರ್ಹ. ಮೂಲದಂತೆ ಮೂರು ಪದ್ಯಗಳೂ ಇಲ್ಲೂ ಇವೆ.

1ನೆಯ ಪದ್ಯ :

'ಮುನ್ನಡೆಸು ಕರುಣಾಳು ಬೆಳಕೆ' ಎಂದಿರಬೇಕಾದ ಮೊದಲ ಸಾಲು 'ಕರುಣಾಳು ಬಾ ಬೆಳಕೆ' ಎಂದಾಗಿ ಮೂಲಕ್ಕಿಂತಲೂ ಸೊಗಸನ್ನು ಚೆಲ್ಲಿವೆ. 'ಕೈಹಿಡಿದು ನಡೆಸು' ಎಂಬಲ್ಲಿ ಮೂಲದಲ್ಲಿಲ್ಲದ ವಾತ್ಸಲ್ಯಭಾವವಿದೆ. 'The night is dark' ಎಂಬುದಕ್ಕೆ 'ಇರುಳು ಕತ್ತಲು' ಎಂದಿರಬೇಕಾದ ಭಾಷಾಂತರ 'ಇರುಳು ಕತ್ತಲೆಯ ಗವಿ' ಎಂದಾಗಿ ಇರುಳಿನ ದಟ್ಟತೆಯನ್ನು 'ಗವಿ' ಎಂದಭಿವ್ಯಕ್ತಿಸಿ ಮೂಲವನ್ನು ಮೀರಿದ ಚಿತ್ರಕ ಶಕ್ತಿಯನ್ನು ಹೊಂದಿದೆ. 'ಕನಿಕರಿಸಿ' ಎಂಬಲ್ಲಿ ತನ್ನನ್ನು ಮುನ್ನಡೆಸುವ ಶಕ್ತಿಗೆ ವಿನೀತವಾಗಿರುವ ಭಾವವನ್ನು (ಮೂಲದಲ್ಲಿಲ್ಲದ) ವ್ಯಂಜಿಸುತ್ತದೆ. 'ಬಲುದೂರ ನೋಟ'

ಎಂದಾಗಿರುವುದು ಹೆಚ್ಚು ಧ್ವನಿಪೂರ್ಣವಾಗಿದೆ. ಮೊದಲ ಪದ್ಯದಲ್ಲಿ 'ಸನ್ಮಾರ್ಗದಲ್ಲಿ ನಡೆಸಲೇಬೇಕು' ಎಂಬ ಸಾತ್ವಿಕ ಹಠವಿರುವುದು ಗಮನಾರ್ಹ, ಮೂಲವನ್ನು ಮೀರಿದ ಹೃದ್ಯತೆ ಇಲ್ಲಿದೆ.

2ನೆಯ ಪದ್ಯ :

ಮೊದಲೆರಡು ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ. ಮೂರು ಮತ್ತು ನಾಲ್ಕನೆಯ ಸಾಲುಗಳು 'ಅಚಲತೆ'ಗೆ ಸಾಕ್ಷಿಯಾಗಿವೆ. 5 ಮತ್ತು 6ನೆಯ ಸಾಲುಗಳಲ್ಲಿ 'ಕೊಬ್ಬಿದೆನು' ಎಂಬುದನ್ನು ಬಿಟ್ಟರೆ ಉಳಿದೆಲ್ಲವೂ ಮೂಲಕ್ಕೆ ಸಮೀಪವಾಗಿವೆ. 'ಕೊಬ್ಬಿದೆನು' ಪದ ತನ್ನಲ್ಲಿ ಅದುವರೆಗೂ ಇದ್ದ 'ಅಹಂ' ನ್ನು ವ್ಯಕ್ತಪಡಿಸುತ್ತಲೇ 'ಮುಂದೆ ಹಾಗಿರನು' ಎಂಬ ಧ್ವನಿಯನ್ನು ಒಳಗೊಂಡಿದೆ. ದೇವರಲ್ಲಿ ಸಾಮಾನ್ಯನೋರ್ವ 'ನಾವು ಮಾಡಿದ ತಪ್ಪನ್ನೆಲ್ಲ ನಿನ್ನ ಮಡಿಲಿಗೆ ಹಾಕಿಕೊಂಡು ಕಾಪಾಡು' ಎಂದು ಬೇಡುವಂತೆ ಶರಣಾಗುವ ದಾಸ್ಯ ಭಾವ ಇಲ್ಲಿ ಮನೋಜ್ಞವಾಗಿದೆ.

3ನೆಯ ಪದ್ಯ :

ಸಾಲುಗಳೆಲ್ಲವೂ ಮೂಲಕ್ಕೆ ನಿಷ್ಠವಾಗಿ ಅನುವಾದಗೊಂಡಿವೆ. 6ನೆಯ ಸಾಲಿನ 'ದಿವ್ಯಮುಖ' ಮೂಲವನ್ನು ಮೀರಿ ಧ್ವನಿಪೂರ್ಣವಾಗಿದೆ. ಮೊದಲಿನಿಂದಲೂ ಇದ್ದ ಆಶಯ ಭಾವ ಇಲ್ಲಿ ಆಶಾಭಾವವಾಗಿ ಸಾರ್ಥಕ್ಯ ಪಡೆಯುವ ಹಂತದಲ್ಲಿದೆ.

ಕವನದುದ್ದಕ್ಕೂ ಇರುವ 'ಇರುಳು' ಕಷ್ಟಪರಂಪರೆಯನ್ನು ಧ್ವನಿಸುತ್ತದೆ. ಶ್ರೀಯವರು ವೈಯಕ್ತಿಕ ಬದುಕಿನಲ್ಲಿ ಅನುಭವಿಸಿದ ಹೆಂಡತಿ ಮಕ್ಕಳ ಮರಣದ ನೋವು ಕಾಡಿದ ಸಂದರ್ಭ ಈ ಕವನವನ್ನು ಅನುವಾದ ಮಾಡಲು ಶ್ರೀಯವರಿಗೆ ಪ್ರೇರಣೆಯಿತ್ತಿರಬೇಕೆನಿಸುತ್ತದೆ.

ಕವನದೊಳಗೆ ಶಾಂತರಸ ಮಿಳಿತವಾಗಿದೆ, ಉಚಿತ ಪದಗಳ ಬಳಕೆಯಿಂದ ಕವನ ಉತ್ತಮ ಅನುವಾದವೆನಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಮರ್ಥ ಸೃಜನಶೀಲ ಅನುವಾದ ಎನ್ನಬಹುದು. ಮೂಲದ ಗಂಭೀರತೆ, ಭಕ್ತಿಭಾವಗಳು ಇಲ್ಲೂ ಎವೆ. ಈ ಅನುವಾದ ಕವನದಲ್ಲಿ ಒಂದು ಮಾತನ್ನು ಕಿತ್ತು ಹಾಕಿರುವುದಿರಲಿ, ಬದಲಾಯಿಸಲೂ ಸಾಧ್ಯವಿಲ್ಲ, ಅಷ್ಟು ಧ್ವನಿಪೂರ್ಣವಾಗಿ ಇಡೀ ಕವನವೇ ಮರುಹುಟ್ಟು ಪಡೆದಿದೆ. ಅಲ್ಲದೆ ಇದು ಪಂಚಮಾತ್ರಾಲಯದಲ್ಲಿದೆ.

"ಪ್ರಾರ್ಥನೆ ಪದ್ಯವನ್ನ ಕನ್ನಡ ಸಂಸ್ಕೃತಿಯು ಅದು ಮಾಲತಃ ಪಾದ್ರಿಯೊಬ್ಬ ಬರೆದ ಗೀತೆ, ಅದು ಕ್ರಿಶ್ಚಿಯನ್ ಸಂಸ್ಕೃತಿಯಲ್ಲಿ ಅದೊಂದು ಪ್ರಾರ್ಥನೆಯ ಗೀತೆಯಾಗಿ ಅಚ್ಚಗನ್ನಡ ಗೀತೆಯಾಗಿ ಮಾರ್ಪಟ್ಟಿದೆ".

**ಕಥನ ಕವನ**

ಶೌರ್ಯ, ಪ್ರತಾಪ, ತೊಡಕು, ಕಷ್ಟ, ಹೀಗೆ ಯಾವುದೋ ಒಂದು ಘಟನೆಯನ್ನಾಧರಿಸಿದ ಕಥೆಯೊಂದು ಕವನವಾಗಿ ಹೊಮ್ಮುವುದನ್ನು ಕಾಣಬಹುದು, ಇಂತಹುದೇ ಒಂದು ಗೀತೆ ಇಂಗ್ಲಿಷ್ ಗೀತ'ಗಳಲ್ಲಿದೆ. ಅದೇ 'ಕಾರಿಹೆಗ್ಗಡೆಯ ಮಗಳು'.

Thomas Campbell ನ 'Lord ullin`s Daughter` ಕವಿತೆಯ ಅನುವಾದ 'ಕಾರಿಹೆಗ್ಗಡೆಯ ಮಗಳು'. 'Lord

ullin' ಇಲ್ಲಿ ಕಾರಿಹೆಗ್ಗಡೆಯಾಗಿದ್ದಾನೆ. ಮೂಲದಂತೆಯೇ ಇಲ್ಲಿಯೂ 4 ಸಾಲುಗಳ 14 ಪದ್ಯಗಳು ಇವೆ.

1ನೆಯ ಪದ್ಯ:

'Chieftain 'ಗೌಡ'ನಾಗಿಯೂ, thighlands Bound ಪಡುವದಿಬ್ಬವಾಗಿಯೂ ಅನುವಾದವಾಗಿದೆ. 2ನೆಯ ಸಾಲಿನ 'ಅಂಬಿಗ' ತೊರೆಯನಾಗಿರುವುದರಲ್ಲಿ ಔಚಿತ್ಯವಿಲ್ಲ. 3 ಮತ್ತು 4ನೆಯ ಸಾಲುಗಳು ಸೂಕ್ತವಾಗಿ ಅನುವಾದವಾಗಿವೆ.

2ನೆಯ ಪದ್ಯ:

ಮೊದಲ ಸಾಲು ಯುಕ್ತವಾಗಿ ಅನುವಾದವಾಗಿದೆ. 2ನೆಯ ಸಾಲಿನ 'dark' ಬದಲಿಗೆ 'ಕರುಗಿ' ಎಂದಿರುವುದು ಉಚಿತವಾಗಿಲ್ಲ. 'ಕಾಯಲ' ಪದಕ್ಕೆ ಮಾಲದಲ್ಲಿ ಆಧಾರವಿಲ್ಲ, ಉಳಿದ ಸಾಲುಗಳು ಸಮರ್ಪಕವಾಗಿ ಅನುವಾದವಾಗಿವೆ.

3ನೆಯ ಪದ್ಯ:

ಮೊದಲ ಮೂರು ಸಾಲುಗಳು ಸೂಕ್ತವಾಗಿದ್ದರೆ, ನಂತರ ಕೊನೆಯ ಸಾಲು 'ಚಿಮ್ಮಿ ಹರಿವುದು ನೆತ್ತರು' ಎಂದಿರುವುದು ಸೂಕ್ತವಾಗಿದೆ.

4ನೆಯ ಪದ್ಯ:

ಆಶ್ಚರ್ಯಭಾವದಿಂದ ಈ ಪದ್ಯ ಕೊನೆಗೊಂಡರೆ ಇಲ್ಲಿ ಪ್ರಶ್ನಾರ್ಥಕತೆ, ದ್ವಂದ್ವ ಸ್ವಭಾವ ಇವೆಲ್ಲವೂ ಸೊಗಸಾಗಿ ಮೂಡಿಬಂದಿದೆ. 'ತರುಬಿ' ಪದ ಮೂಲಕ್ಕಿಂತಲೂ ಹೆಚ್ಚಿನ ಅರ್ಥಸಂಪತ್ತಿಯನ್ನು ಪಡೆದಿದೆ.

5ನೆಯ ಪದ್ಯ:

2ನೆಯ ಸಾಲಿನ 'ಬೇಗ', ಜೀಯಾ ಪದಗಳು ಮೂಲವನ್ನು ಮೀರಿ ಭಾವೋದ್ವೇಗವನ್ನು ಅಭಿವ್ಯಕ್ತಿಸುತ್ತವೆ. ಉಳಿದ ಸಾಲುಗಳು ಸೂಕ್ತವಾಗಿ ಅನುವಾದಗೊಂಡಿವೆ.

6ನೆಯ ಪದ್ಯ:

ಮೊದಲ ಸಾಲಿನ 'bonny bird' ಎಂಬುದು ಮುದ್ದಾಗಿ ಮುದ್ದಿನರಗಿಣಿ ಎಂದಾಗಿದೆ. 2ನೆಯ ಸಾಲಿನ 'ಗಂಡಾಂತರ' ಅಥವಾ 'ಅಪಾಯದ' ಅರ್ಥಕೊಡುವ ಪದಗಳು ಸರಳವಾಗಿ 'ಗಂಡವ' ಎಂದು ರೂಪವ್ಯತ್ಯಾಸಗೊಂಡು ಬಂದಿದೆ. ಉಳಿದ ಸಾಲುಗಳು ಮೂಲಕ್ಕೆ ಸಮೀಪವಾಗಿ ಅನುವಾದವಾಗಿವೆ.

7ನೆಯ ಪದ್ಯ:

ಮೊದಲ ಸಾಲಿನ 'grew'ಗೆ 'ಕುದಿ' ಉಚಿತ ಪ್ರಯೋಗವಲ್ಲವೇನೋ 2ನೆಯ ಸಾಲು ಯುಕ್ತವಾಗಿ ಅನುವಾದವಾಗಿದೆ. ಮೂರು ಮತ್ತು ನಾಲ್ಕನೆಯ ಸಾಲುಗಳು ಸ್ವೋಪಜ್ಞತೆಗೆ ಸಾಕ್ಷಿಯಾಗಿದೆ.

8ನೆಯ ಪದ್ಯ:

ಮೊದಲ ಸಾಲಿನ 'ಕೆರಳಿ ಕೆರಳಿ' ದ್ವಿರುಕ್ತಿಯು ಮೂಲಕ್ಕಿಂತಲೂ ಸನ್ನಿವೇಶದ ದುರ್ಭರತೆಯನ್ನು ಹೊರಹಾಕುತ್ತದೆ. ಎರಡು ಮತ್ತು ಮೂರನೆಯ ಸಾಲುಗಳು ಮೂಲವನ್ನು ಬಹುಮಟ್ಟಿಗೆ ಅನುಸರಿಸಿವೆ. ನಾಲ್ಕನೆಯ ಸಾಲಿನ 'traimpling sounded'ಗೆ 'ಖಣಿಖಣಿಧ್ವನಿ' ಎಂದನುವಾದವಾಗಿರುವುದು ಕುದುರೆಗಳ ಓಟದ ಬಿರುಸನ್ನು ಮೂಲಕ್ಕಿಂತಲೂ ಸೊಗಸಾಗಿ ವ್ಯಕ್ತಪಡಿಸುತ್ತವೆ.

9ನೆಯ ಪದ್ಯ:

ಮೊದಲ ಸಾಲು ಮೂಲಕ್ಕೆ ಸಮೀಪವಾಗಿದ್ದರೆ, 2ನೆಯ ಸಾಲು 'Though tempests sround us gather' ಎಂಬುದು 'ಹೋಳಿಕೊಳಲಿ ನನ್ನ ಕಡಲು' ಎಂದಾಗಿ ಮೂಲದ ಭಾವತೀವ್ರತೆಯನ್ನು ಗ್ರಹಿಸಿಲ್ಲ. 'ಮುಳಿದ ಮುಗಿಲ ತಡೆಯಬಲ್ಲೆ, ಮುಳಿದ ತಡೆಯೆನು' ಎಂಬ ಮೂರು ಮತ್ತು ನಾಲ್ಕನೆಯ ಸಾಲುಗಳು ಭಾವಾನುವಾದವಾಗಿದ್ದು, ಹೃದಯ ಮುಟ್ಟುತ್ತದೆ.

10ನೆಯ ಪದ್ಯ:

4 ಸಾಲುಗಳಲ್ಲಿ ಭಾವಾನುವಾದವಾಗಿರುವುದನ್ನು ಕಾಣಬಹುದು. 'ಕರೆಮೊರೆ', 'ತೆರೆಮೊರೆ' ಎಂಬಿವು ಕೇಳುವುದಕ್ಕೆಂತೋ ಮನಸ್ಸಿಗೊ ಅಂತೆ ಆಹ್ಲಾದಮಯವಾಗಿದೆ.

11ನೆಯ ಪದ್ಯ:

4ಸಾಲುಗಳಲ್ಲಿನ ಯಾವೊಂದು ಪದವನ್ನು ತೆಗೆದುಹಾಕುವಂತೆಲ್ಲ, ಅಷ್ಟರ ಮಟ್ಟಿಗೆ ಇಲ್ಲಿ ಅನುವಾದ ಯಶಸ್ವಿಯಾಗಿದೆ. ಶೋಕಭಾವವೂ ಮೂಲದಂತೆಯೇ ಇಲ್ಲೂ ಭಾವಪರಿಪೂರ್ಣತೆಯನ್ನು ಪಡೆದಿದೆ.

12ನೆಯ ಪದ್ಯ:

ಮೊದಲ ಸಾಲಿನ 'ತೊಂಡು' ತಂಡು ಎಂದಾಗಿದ್ದರೆ ಅರ್ಥಸ್ಪಷ್ಟತೆಯನ್ನು ಪಡೆಯುತ್ತಿತ್ತು. 2 ಮತ್ತು 3ನೆಯ ಸಾಲುಗಳಲ್ಲಿ ಸಮರ್ಪಕವಾದ ಅನುವಾದವಾಗಿರುವುದನ್ನು ಕಾಣಬಹುದು. ಇದುವರೆಗೂ ಅವ್ಯಕ್ತವಾಗಿದ್ದ ಪ್ರಣಯ ಇಲ್ಲಿ ಇಣುಕಿ ಆಶ್ಚರ್ಯವನ್ನುಂಟು ಮಾಡುತ್ತದೆ. ನಾಲ್ಕನೆಯ ಸಾಲಿನ 'round her lover' ಎಂಬುದು 'ತಬ್ಬಿತು ನಲ್ಲನ' ಎಂದಾಗಿರುವುದು ಸೂಕ್ತವಾಗಿದೆ.

13ನೆಯ ಪದ್ಯ:

'come back, come back' ಎಂಬುದು 'ಹಿಂದುರುಗಿ ಬಾ, ಹಿಂದುರುಗಿ ಬಾ ಎಂದಾಗುವುದಕ್ಕೆ ಬದಲಾಗಿ 'ಮರಳು, ಮರಳು' ಎಂದಾಗಿರುವುದು ಯುಕ್ತವಾಗಿದೆ, 2ನೆಯ ಸಾಲಿನ 'Across this stormy water' ಎಂಬುದರಲ್ಲಿ ಎಲ್ಲದ ಮನದ ಉದ್ವೇಗ, ಹೃದಯದ ಸಂಕಟ, ಹೆತ್ತೊಡಲ ಆತಂಕ 'ಮೊರೆವ ಕಾಯಲಗಂಟಲಿಂದ' ಎಂಬಲ್ಲಿ

ಭಾವಪೂರ್ಣವಾಗಿದೆ. 3ನೆಯ ಸಾಲು ಮೂಲಕ್ಕೆ ಸಮೀಪವಾಗಿದೆ. 4ನೆಯ ಸಾಲಿನ 'my daughter' ಎಂದಗಿರುವುದು ಮುಗ್ಧತೆಯನ್ನು, ಕರುಳಿನ ಕರೆಯನ್ನು ಧ್ವನಿಪೂರ್ಣವಾಗಿಸಿದೆ.

14ನೆಯ ಪದ್ಯ:

ಇದ್ದೊಂದು ಆಶಾಕಿರಣವು ಮಾಯವಾಗಿ ಬದುಕು ಶೂನ್ಯವಾದ ಶೋಕ ನಾಲ್ಕು ಸಾಲುಗಳಲ್ಲಿಯೂ ಮನೆಮಾಡಿದೆ. ಅನುವಾದ ಎಲ್ಲಿಯೂ ಮೂಲವನ್ನು ಮೀರಿ ನಡೆದಿಲ್ಲ.

ದುರಂತ ಕಥನವೊಂದು ಶೋಕರಸಪೂರ್ಣವಾಗಿ ಹೊಮ್ಮಿದೆ. ಪ್ರೇಮದ ಅಸಫಲತೆ, ಪ್ರೇಮಿಯ ವಿಫಲತೆಗಳು ಧ್ವನಿಪೂರ್ಣವಾಗಿದೆ, ಅನುವಾದವು ಮೂಲಕ್ಕೆ ವಿಧೇಯವಾಗಿದೆ.

## ತಾತ್ವಿಕ ಕವನಗಳು

'ತತ್ವ' ಮನುಷ್ಯನಿಗೆ ಬದುಕಿನ ರೀತಿ ನೀತಿಗಳನ್ನು ಹೇಳುತ್ತದೆ. ಗುರು ಸ್ವರೂಪಿಯಾಗಿ ಮಾರ್ಗದರ್ಶನ ನೀಡಿ ಮಾನವನ ಬಾಳು ಸಾರ್ಥಕವಾಗುವಂತೆ ಮಾಡುತ್ತದೆ. ಆತ್ಮವಿಮರ್ಶೆ, ಆತ್ಮಾವಲೋಕನಗಳಿಗೆ ಅವಕಾಶ ನೀಡಿ ಮನಸ್ಸನ್ನು ಪರಿಶುಭ್ರಗೊಳಿಸುತ್ತದೆ. ಇಂತಹ ಬೋಧಪ್ರದವಾದ ತಾತ್ವಿಕ ಗೀತೆಗಳು ಇಂಗ್ಲಿಷ್ ನಲ್ಲಿವೆ.

## ಸುಖಜೀವನ

Sir Henry Wotton ನ 'Character of a Happy life' ಎಂಬುದರ ಅನುವಾದ ಈ ಕವಿತೆ. 'ಸುಖಜೀವನದ ಲಕ್ಷಣ' ಎಂದಿರಬೇಕಾದ ಶೀರ್ಷಿಕೆ 'ಸುಖಜೀವನ' ಎಂದಷ್ಟೇ ಆಗಿ Short and Sweet ಆಗಿದೆ. ಮೂಲದಂತೆಯೇ 4 ಸಾಲುಗಳ 6 ಪದ್ಯಗಳು ಇಲ್ಲಿಯೂ ಇವೆ.

1ನೆಯಪದ್ಯ:

4 ಸಾಲುಗಳು ಮೂಲವನ್ನು ಅನುಸರಿಸಿವೆ. 2ನೆಯ ಸಾಲಿನಲ್ಲಿ 'ಇನ್ನೊಬ್ಬನಿಚ್ಛೆಯಂತೆ' ಎಂದಿರಬೇಕಾಗಿತ್ತು. 4ನೆಯ ಸಾಲು 'ನಿಜದ ನಡತೆಯೆ ತನ್ನ ಕೌಶಲವೆಂದಿನಿಸಿದವನು' ಎಂದನುವಾದ ಮಾಡಬಹುದಾಗಿತ್ತು. ಹಾಗಾದರೆ ಇಲ್ಲಿ ಅರ್ಥಸಂದಿಗ್ಧತೆಗೆ ಎಡೆದೊರೆತಿದೆ.

2ನೆಯ ಪದ್ಯ :

'ತನಗೊಡೆಯರಿಗಿಲ್ಲದ ರೋಷಾವೇಶ ಹೊಂದಿರುವವನು' ಎಂದಿರಬೇಕಾದ ಮೊದಲ ಸಾಲು ಇಲ್ಲಿ ಸಪ್ಪೆಯಾಗಿದೆ. 'ರಾಗಗಳು' ಎಂಬುದು ಉಚಿತ ಪ್ರಯೋಗವಲ್ಲ. 3 ಮತ್ತು 4ನೆಯ ಸಾಲುಗಳು ಮೂಲದ ಧ್ವನಿಯನ್ನೇ ಗ್ರಹಿಸಿಲ್ಲ. 'ಧಣಿಯ ಒಲವುಪಡೆಯಲು ಸನ್ನದ್ಧತೆಯಲ್ಲದೆಯೇ ತನ್ನ ಸುತ್ತಲ ಬಾಂಧವ್ಯವನು ಕಟ್ಟಿಕೊಳದವನು' ಎಂಬರ್ಥದ ಭಾವಪೂರ್ವಕ ಸಾಲು ಅನುವಾದದಲ್ಲಿ ಇಲ್ಲ. 'ನೆರೆಯ ಮೆಚ್ಚೆಂತೆಂದು' ಎಂಬುದಕ್ಕೆ ಮೂಲದಲ್ಲಿ ಆಧಾರವೇ ಇಲ್ಲ.

3ನೆಯ ಪದ್ಯ :

4 ಸಾಲುಗಳು ಮೂಲವನ್ನು ಅನುಸರಿಸಿವೆ. 'ನಾಡಾಡಿ' ಯಲ್ಲಿ ಕನ್ನಡೀಕರಣವಾಗಿರುವುದನ್ನು ಗಮನಿಸಬಹುದು. 'ನೆರೆದುಂಡು' ಎಂಬುದು ಮೂಲದಲ್ಲಿಲ್ಲದ ಚಿತ್ರಕಶಕ್ತಿಯನ್ನು ಪಡೆದಿದೆ. 'ಬಗುಳುವರು' ಎಂಬುದು ಆಡುಮಾತಿನ ಸೌಂದರ್ಯವನ್ನು ಹೊಂದಿ ಈ ಪದ್ಯದ ಸೊಗಸನ್ನು ಹೆಚ್ಚಿಸಿದೆ.

4ನೆಯ ಪದ್ಯ :

'ಕರುಬದವನು' ಎಂಬಲ್ಲಿ ದೇಸಿಯ ಸೊಗಡು ಮೇರೆವರಿದೆದೆ. 'Deepest wound's ಎಂಬುದಕ್ಕೆ ಚುಚ್ಚುವ ಮಾತು' ಎಂದಿರುವುದು ಬಹಳ ಧ್ವನಿಪೂರ್ಣವಾಗಿದೆ. ಉಳಿದಂತೆ ಅನುವಾದ ಇಲ್ಲಿ ಸಮರ್ಪಕವಾಗಿದೆ.

5ನೆಯ ಪದ್ಯ :

ನಾಲ್ಕು ಸಾಲುಗಳು ಉತ್ತಮವಾಗಿ ಅನುವಾದಗೊಂಡಿವೆ. 'ಬಯ್ಗೂ' ಎಂಬಲ್ಲಿ ಅಚ್ಚಗನ್ನಡತನ ಎದ್ದುಕಾಣುತ್ತದೆ. ಹಾಗೆಯೇ 'ಹೊತ್ತ ಎಂಬಲ್ಲಿ ಕೂಡ ಆಡುಮಾತಿನ ಸೊಗಸು ಇಣುಕಿದೆ.

6ನೆಯ ಪದ್ಯ :

1, 2, 3ನೆಯ ಸಾಲುಗಳು ಮೂಲಕ್ಕನುಸಾರಿಯಾಗಿ ಬಂದಿದ್ದರೆ, 4ನೆಯ ಸಾಲು ಬದುಕಿನ ಪರಿಪೂರ್ಣತೆಯ ತತ್ವವನ್ನು 'And having nothing, he hath all.' ಎಂಬುದು "ಒಂದು ತನಗಿಲ್ಲದೆಯೆ, ಉಂಟು ತನಗೆಲ್ಲ !" ಎಂದು ಮನೋಜ್ಞವಾಗಿ ಅನುವಾದವಾಗಿದೆ.

ಆದರ್ಶವ್ಯಕ್ತಿಯೋರ್ವನ ಗುಣಸ್ವಭಾವಗಳು ಧ್ವನಿಪೂರ್ಣವಾಗಿ ಬಂದಿವೆ, ಶಾಂತರಸ ಲಲಿತವಾಗಿ ಗುಪ್ತವಾಹಿನಿಯಂತೆ ಹರಿದಿದೆ. ಉಚಿತ ಪದಗಳ ಬಳಕೆ ಕವನದ ಸೊಬಗನ್ನು ಹೆಚ್ಚಿಸಿದೆ. ಇಡೀ ಕವನ ಮೂಲಕ್ಕೆ ವಿಧೇಯವಾಗಿದೆ. ಕವಿತೆ ಮೂಲದಂತೆಯೇ ಭೋಧಪ್ರದವಾಗಿದೆ. ಕವನ ಪಂಚಮಾತ್ರಾಲಯದಲ್ಲಿದೆ.

**ಒಂದು ಮಾತನು ಲೋಕ ಹೊಲೆಗೆಡಿಸಿಕೊಂಡಿಹುದು**

ಶೆಲ್ಲಿಯ 'To' ಕವನದ ಅನುವಾದ ಈ ಕವಿತೆ. ಮೂಲವಾದಗೊಂಡಿವೆ. ಮೂಲದ ಭಾವವು ಕೊಂಚವು ಕದಡಿಲ್ಲವಿಲ್ಲಿ.

2ನೆಯ ಪದ್ಯ :

ಮೊದಲ 'I can give not what men call love' ಎಂಬುದು 'ಅನುರಾಗವೆಂದು ಜನರಾಡಿಕೊಳ್ಳುವುದ ಕೊಡೆನು' ಎಂದನುವಾದವಾಗಿರುವುದು ಸಮರ್ಪಕವಾಗಿಲ್ಲ. 'ಲೋಗರು ಕಾಂಬ ಅನುರಾಗವೆಂದಿಗೂ ಕೊಡೆನು' ಎಂದನುವಾದಿಸಿದ್ದರೆ ಚೆನ್ನಾಗಿರುತ್ತಿತ್ತು. 'ಆಡಿಕೊಳ್ಳುವುದು' ಎಂಬುದು ಸರಿಯಾದ ಪ್ರಯೋಗವಾಗಿಲ್ಲ. 2, 3, 4ನೆಯ ಸಾಲುಗಳು ಮೂಲದಿಂದ ದೂರವಾಗಿವೆ.

'ಅಂತಿರುವುದಕೆ ಬಾಗಲಾರೆ; ಸ್ವೀಕರಿಸಲಾರೆ
ಹೃದಯವೊಪ್ಪುವ ಪ್ರೇಮಪೂಜೆಯ
ದೈವ ನಿರಾಕರಿಸದೆಂದು'

ಎಂದು ಸರಳವಾಗಿ ಅನುವಾದಿಸಬಹುದಾಗಿತ್ತು. ಉಳಿದ ಸಾಲುಗಳಲ್ಲಿ ಭಾವಾನುವಾದವಾಗಿದ್ದು, ಸೊಗಸಾಗಿದೆ.

ಕವನದ ಕೊನೆಗೆ ಇಡೀ ಕವನದುದ್ದಕ್ಕೂ ಅವ್ಯಕ್ತವಾಗಿದ್ದ ಆ 'ಒಂದು ಮಾತು' ಸಹಾನುಭೂತಿ, ಪ್ರೇಮ, ಸ್ನೇಹ ಎಂಬಿವೇ ಎಂಬುದನ್ನು ಧ್ವನಿಪೂರ್ಣವಾಗಿದೆ. ಬದುಕಿನ ಸಾರ್ಥಕತೆ ಬಾಳುವ ಶ್ರದ್ಧೆಯಲ್ಲಿದೆ ಎಂಬ ತತ್ವವು ಅನುವಾದದಲ್ಲಿ ಚ್ಯುತಿಯಾಗದಂತೆ ಹೊಮ್ಮಿದೆ. ಮಾನವೀಯ ಮೌಲ್ಯಗಳಯ ಮಾಯವಾಗುತ್ತರುವ ಕುರಿತ ಮರುಕ ಮೂಲದಂತೆಯೇ ಇಲ್ಲಿಯೂ ಸೂಚ್ಯವಾಗಿದೆ. ಈ ಕವನವು ಪಂಚ ಮಾತ್ರಾಲಯದಲ್ಲಿದೆ.

**ಬಡವನ ಹುರಡು**

ರಾಬರ್ಟ್ ಬರ್ನ್ಸ್‌ನ 'A man's a man for a that' ಕವನದ ಅನುವಾದ 'ಬಡವನ ಹುರುಡು' ಕವಿತೆ. "ಪದವಿ, ಐಶ್ವರ್ಯಗಳ ವ್ಯತ್ಯಾಸ ಏನೇ ಇರಲಿ, ಮನುಷ್ಯ ಮನುಷ್ಯನೇ"[26] ಎಂಬರ್ಥದ ಶೀರ್ಷಿಕೆ ಕನ್ನಡದಲ್ಲಿ 'ಬಡವನ ಹುರುಡು' ಎಂದು ಸಂಕ್ಷಿಪ್ತವಾಗಿದೆ. ಮೂಲದಂತೆಯೇ ಇಲ್ಲಿಯೂ 8 ಸಾಲುಗಳ 5 ಪದ್ಯಗಳು ಇಲ್ಲೂ ಇವೆ.

1ನೆಯ ಪದ್ಯ :

'Honest' ಎಂಬುದಕ್ಕೆ 'ಮಾನ'ಕ್ಕಿಂತಲೂ ಉತ್ತಮವಾದ ಅನುವಾದ ಬೇಕಿಲ್ಲವೆನಿಸುತ್ತದೆ. 'Coward slave' ಎಂಬುದು 'ನೀಚತೊತ್ತ' ಎಂದು, 'Guinea's stamp' ಎಂಬುದು 'ವರಹಮುದ್ರೆ' ಎಂದಾಗಿರುವುದು ಮೂಲದ ಶಬ್ಧಸೌಂದರ್ಯವನ್ನು ಆತ್ಮೀಕರಿಸಿಕೊಂಡಿದೆ.

2ನೆಯ ಪದ್ಯ :

'Gie fools their silks, and knaves their wine' ಈ ಸಾಲು 'ಸೋಗಸು ಬೆಡಗು ತೆಗೆದು ಮಡಗು' ಎಂದಾಗಿರುವಲ್ಲಿ ಆಡುನುಡಿಯ ಸೊಬಗು ಮನೆಮಾಡಿರುವುದನ್ನು ಕಾಣಬಹುದು. 'Honest Man' ಎಂಬುದಕ್ಕೆ 'ಸಾಜ' ಎಂದಾಗಿರುವುದನ್ನು ಕಂಡಾಕ್ಷಣ ಈ ಪದವೆಂಬುದೊಂದು ಇದೆಯೇ ಎಂದು ಆಶ್ಚರ್ಯಪಡುವಂತಾಗುತ್ತದೆ.

3ನೆಯ ಪದ್ಯ :

'Ye see you birkie ca'd a lord' ಎಂಬ ಸಾಲು 'ಅಕ್ಕೊ ಬಸುವ, ಸೊಕ್ಕಿ ಮೆರೆವ' ಎಂದಾಗಿದೆ. ಅಂತೆಯೇ ಲಕ್ಕಮುಕ್ಕ' ಪದಗಳು ಮನಸ್ಸಿನಲ್ಲಿ ಓದಲು ಆಗದೆ ಬಾಯಿ ಬಿಟ್ಟು ಹೇಳುವಂತೆ ಆಕರ್ಷಿಸುತ್ತದೆ.

ನಾಲ್ಕು ಮತ್ತು 5ನೆಯ ಪದ್ಯಗಳ ಸತ್ಸಂಗ, ಸಜ್ಜನಿಕೆ, ವಿವೇಕ, ಚಿಂತನಾಶೀಲತೆಗಳ ಪ್ರಾಮುಖ್ಯತೆಯನ್ನು ಬಿಂಬಿಸುವ ಇಂಗ್ಲಿಷನಲ್ಲಿರುವುದಕ್ಕಿಂತ ನಾವೇನೂ ಕಡಿಮೆಯಿಲ್ಲ ಎಂದು ಭ್ರಮೆಹುಟ್ಟುವಂತೆ ಅನುವಾದಗೊಂಡಿದೆ.

---

[26] ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಲ್.ಎಸ್. ಶೇಷಗಿರಿರಾಯರು ಪುಟ 8

ಒಟ್ಟಿನಲ್ಲಿ ಮೌಲ್ಯಯುತ, ಸತ್ವಶೀಲ, ಆದರ್ಶೀಕೃತ, ವಿವೇಕಿಯಾಗಿ ಬಾಳಬೇಕೆನ್ನುವವನ ಹಂಬಲ ಧ್ವನಿಪೂರ್ಣವಾಗಿ ಅನುವಾದದಲ್ಲಿಯೂ ಹೊಮ್ಮಿದೆ. ಶಾಂತರಸವೇ ಮೈದಳೆದು ನಿಂತು ಬೋಧಪ್ರದವಾಗಿದೆ. ಅಲ್ಲಲ್ಲಿ ಅನುಪ್ರಾಸವೂ ಮೂಗುತೂರಿಸಿ ಕವನಕ್ಕೆ ಸೊಬಗನಿತ್ತಿದೆ. ಇದೊಂದು ಅಚ್ಚಗನ್ನಡದ ಚೊಕ್ಕ ಭಾಷಾಂತರ. ಅನುವಾದ 'ವಿಧೇಯತೆ'ಯ ಗುಣವನ್ನು ಹೊಂದಿದೆ.

# ಉಪಸಂಹಾರ

"ಹೊಸಗನ್ನಡ ಕಾವ್ಯ ಪ್ರವರ್ತಕರಲ್ಲಿ ಬಿ.ಎಂ.ಶ್ರೀ ಅವರದು ದೊಡ್ಡ ಹೆಸರು. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳಲ್ಲಿ ಸಾಕಷ್ಟು ಪರಿಣತಿಗಳಿಸಿದ್ದ ಶ್ರೀಯವರು ಮೊದಮೊದಲು ಕನ್ನಡದ ಬಗ್ಗೆ ಉದಾಸೀನತೆಯನ್ನೇ ತಳೆದಿದ್ದಂತೆ ತೋರುತ್ತದೆ. ಒಮ್ಮೆ  ಒಂದು ಸಂದರ್ಭದಲ್ಲಿ ಕನ್ನಡದಲ್ಲೇ ಮಾತನಾಡಬೇಕೆಂದು ಸಭಿಕರು ಒತಾಯಿಸಿದಾಗ ತಾವು ಸಭಾತ್ಯಾಗಮಾಡುವುದಾಗಿ ಬೆದರಿಕೆ ಹಾಕಿದ್ದರಂತೆ ಅಂಥ ಇಂಗ್ಲಿಷ್ ಭಾಷಾ ಮೋಹ ಹೊಂದಿದ್ದ ವ್ಯಕ್ತಿಯಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಯಾಯಿತು. ಶ್ರೀಯವರು ಕನ್ನಡದ ಪರಮ ಭಕ್ತರಾದರು, ಕನ್ನಡವೇ ಅವರ ಉಸಿರಾಯಿತು. ಇಂಗ್ಲಿಷಿನಿಂದ ಅನೇಕ ಕವಿಗಳ ಕವನಗಳನ್ನು ಕನ್ನಡಕ್ಕೆ ತಂದರು. ಅವರ ಅನುವಾದಗಳನ್ನು ಕುರಿತು ನಾವು ಅತೃಪ್ತಿ ಸೂಚಿಸಬಹುದು. ಇತರ "ಅನುವಾದಗುಳು ಮೂಲದಿಂದ ದೂರ ಸರಿದಿವೆ ಎನ್ನಿಸಬಹುದು. ಈ ಅರೆಕೊರೆಗಳನ್ನು ಶ್ರೀಯವರೂ ಬಲ್ಲರು. ಆದರೆ ಕಗ್ಗಲ್ಲು ಬಂಡೆಗಳಿಂದ ತುಂಬಿದ್ದ ಕಾಡುಹಾದಿಯನ್ನು ಇವರು ಸಮಗೊಳಿಸಿ ರಾಜಮಾರ್ಗಮಾಡಿ ಕೊಟ್ಟು  ಮುಂದಿನ ಕನ್ನಡ ಕವಿಗಳು ತಮ್ಮ ಕಾವ್ಯ ರಥವನ್ನೇರಿ ಪ್ರಯಾಣಿಸಲು ಅನುವುಮಾಡಿಕೊಟ್ಟಿದ್ದಾರೆ. ಶ್ರೀಯವರಿಂದ ಈ ಕೆಲಸ ಆಗದೇ ಹೋಗಿದ್ದಿದ್ದರೆ ಹೊಸಗನ್ನಡದ ಅರುಣೋದಯವಾಗುವುದಕ್ಕೆ  ಇನಷ್ಟು ಸಮಯ ಹಿಡಿಯುತ್ತಿತ್ತೆಂದು ತೋರುತ್ತದೆ. ಹಾಗಾಗಿ 'ಇಂಗ್ಲಿಷ್ ಗೀತಗಳು' ಕವನ ಸಂಕಲನ ಹೊಸಗನ್ನದ ಸಾಹಿತ್ಯದ ರಾಷ್ಟ್ರೀಯ ಪಥದ ಪ್ರಮುಖ ಕಿಲೋ(ಮೀಟಾರ್ ತೋರಿಸುವ) ಕಲ್ಲು. 'ಇಂಗ್ಲಿಷ್ ಗೀತಗಳು' ಇಪ್ಪತ್ತನೆಯ ಶತಮಾನದ ಗಮನಾರ್ಹ ಕೃತಿಯಷ್ಟೇ ಅಲ್ಲ ಕನ್ನಡಿಗರು ಅದನ್ನು ಸದಾಕಾಲ ನೆನಪಿನಲ್ಲಿಟ್ಟುಕೊಳ್ಳುವ ಕೃತಿಯೂ ಆಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಅರ್ಥದಲ್ಲಿ 'ಇಂಗ್ಲಿಷ್ ಗೀತಗಳು' ಕನ್ನಡ ಕಾವ್ಯ ಸಾಹಿತ್ಯದಲ್ಲಿ ವಿಶಿಷ್ಟ ಕೃತಿಯಾಗಿ ಪರಿಣಮಿಸಿದೆ"[27].

ಶ್ರೀಯವರ 'ಇಂಗ್ಲೀಷ್ ಗೀತಗಳ'ಲ್ಲಿನ  ಮೂಲ ಆಂಗ್ಲಕವಿಗಳನ್ನು ಬಿಟ್ಟು ಅನುವಾದಗೊಂಡಿರುವ ಕವಿತೆಗಳನ್ನು ಯಾರಿಗಾದರು (ಸಾಹಿತ್ಯವನ್ನು ಓದಲು ಆಗತಾನೇ ಪ್ರಾರಂಭಿಸಿದ ವ್ಯಕ್ತಿಗೆ) ನೀಡಿದರೆ, ಇಲ್ಲಿನ ಭಾವನೆಗಳಿಗೆ ಶರಣಾಗುತ್ತಾರೆ; ತಲೆದೂಗಿ ಮೂಕರಾಗುತ್ತಾರೆ. ಅಷ್ಟರ ಮಟ್ಟಿಗೆ ಶ್ರೀಯವರ ಕಾವ್ಯ ಪ್ರತಿಭೆ, ವ್ಯುತ್ಪತ್ತಿ, ಅನುಭೂತಿ ಯಶಸ್ವಿಯಾಗಿದೆ ಇಲ್ಲಿ.

ಇಂಗ್ಲಿಷ್ ಗೀತಗಳ' ನಂತರ ಕೆಲಕಾರ ಭಾವಗೀತೆ ಗತಕಾಲದ ಬಾಂಧವ್ಯವನ್ನು ಉಳಿಸಿಕೊಂಡಿತು. ಮಾಸ್ತಿ, ಡಿ.ವಿ.ಜಿ ಪೈಯವರು ಭಾವಗೀತ ಪ್ರಕಾರದಲ್ಲಿ ಕಾವ್ಯರಚನೆ ಮಾಡಿದರು. ಬೇಂದ್ರೆ, ಕುವೆಂಪು, ಕೆ.ಎಸ್.ನ ಮೊದಲಾದವರು, ಒಲವ ನಿರೂಪಣೆಗೆ ಭಾವಗೀತೆಯನ್ನೇ ಬಳಸಿದರು. 'ಕಾರಿ ಹೆಗ್ಗಡೆಯ ಮಗಳಿ'ಂದಲೇ ಆಧುನಿಕ ಕನ್ನಡ ಕಾವ್ಯದಲ್ಲಿ ಕಥನ ಕವನ ಪ್ರಾರಂಭವಾಯಿತು. ಶ್ರೀನಿವಾಸರ 'ನವರಾತ್ರಿ', 'ಗೌಡರಮಲ್ಲಿ', ಕುವೆಂಪು ಅವರ 'ಬೊಮ್ಮನಹಳ್ಳಿಯ

---

[27] ಈ ವಿಷಯವನ್ನು ಪ್ರೊ. ಎಚ್.ಎಸ್ ಹರಿಶಂಕರ್ ರವರು ಪತ್ರದ ಮುಖೇನ ತಿಳಿಸಿದ್ದರು

ಕಿಂದರಿಜೋಗಿ', ಕಡೆಂಗೋಡ್ಲು ಶಂಕರಭಟರ 'ಹೊನ್ನಿಯ ಮದುವೆ' ಮೊದಲಾದವನ್ನು ಇಲ್ಲಿ ಉದಾಹರಿಸಬಹುದು. ಈ ಶೋಕಗೀತೆಗಳಿಂದ ಪ್ರೇರಿತರಾಗಿ ಬೇಂದ್ರೆ, ವಿ.ಸೀ, ಅಡಿಗರು ಸತ್ವಯುತವಾದ ಶೋಕಗೀತೆಗಳನ್ನು ರಚಿಸಿದರು.

ವಸ್ತು, ಭಾಷೆ, ಛಂದಸ್ಸು, ಆಶಯಗಳ ದೃಷ್ಟಿಯಿಂದ ಅವರು ಮಾಡಿದ ಪ್ರಯೋಗವು ಕನ್ನಡ ಕವಿಗಳ ಹೊಸ ಪೀಳಿಗೆಯನ್ನು ಹುಟ್ಟುಹಾಕಿತು. ಈ ಸಂಗ್ರಹವು ಶ್ರೀಯವರ ಕೃತಿಯಾಗಿ, ಹೊಸ ಕವನಗಳಿಗೆ ಮಾರ್ಗದರ್ಶಕವಾಗಿ, ತರುಣರ ಮೆಚ್ಚಿಕೆಯದಾಗಿ, ಭಾವಗೀತೆಗಳ ಭಾಷಾಂತರಕೊಂದು ಕೈಪಿಡಿಯಾಗಿ ಅಕ್ಲಿಷ್ಟಪ್ರಸನ್ನ ಕಾವ್ಯಶೈಲಿಗೆ ಮಾದರಿಯಾಗಿ ನಿಲ್ಲುವುದು".

# ಆಕರಗಳು

## ಗ್ರಂಥಗಳು


| ಲೇಖಕರು | | ಗ್ರಂಥಗಳು |
|---|---|---|
| 1. | ಅನಂತನಾರಾಯಣ ಎಸ್ | ಹೊಸಗನ್ನಡ ಕವಿತೆಗಳ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ, ಡಿ.ವಿ.ಕೆ ಮೂರ್ತಿ ಮೈಸೂರು–2000 |
| 2. | ಡಾ. ಪ್ರಭುಶಂಕರ | ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ ಮೂರ್ತಿ ಮೈಸೂರು 1966 |
| 3. | ಮಾಸ್ತಿ ವೆಂಕಟೇಶ ಅಯ್ಯಂಗಾರ್(ಸಂ) | ಸಂಭಾವನೆ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು– 1941 |
| 4. | ಮೂರ್ತಿರಾಯ ಎ. ಎನ್ | ಬಿ.ಎಂ.ಶ್ರೀ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು –1975<br>ಆಚಾರ್ಯ ಬಿ.ಎಂ.ಶ್ರೀ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು. |
| 5. | ರಹಮತ್ ತರಿಕೆರೆ | ಇಂಗ್ಲಿಷ್ ಗೀತಗಳು : ಸಾಂಸ್ಕೃತಿಕ ಮುಖಾಮುಖಿ ಪ್ರಸಾರಾಂಗ –ಹಂಪಿ ಕನ್ನಡ ವಿ.ವಿ.–2007 |
| 6. | ಶಿವರುದ್ರಪ್ಪ ಜಿ.ಎಸ್. (ಸಂ) | ಶ್ರೀನಿದಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು. 1985 |
| 7. | ಶೇಷಗಿರಿರಾವ್ ಎಲ್.ಎಸ್ | ಹೊಸಗನ್ನಡ ಸಾಹಿತ್ಯ ಚರಿತ್ರೆ ಗೀತ ಬುಕ್ ಹೌಸ್ ಬೆಂಗಳೂರು –2001 |
| 8. | ಶ್ರೀಕಂಠಯ್ಯ ಬಿ.ಎಂ | ಇಂಗ್ಲಿಷ್ ಗೀತಗಳು (ಮೂಲ ಆಂಗ್ಲ ಕವನಗಳೊಂದಿಗೆ) ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ ಬೆಂಗಳೂರು –2006<br>ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕಾವ್ಯಾಲಯ ಮೈಸೂರು 1948 |


## ಸಂಚಿಕೆಗಳು


| | | |
|---|---|---|
| 9. | ಪ್ರಬುದ್ಧ ಕರ್ನಾಟಕ | ರಾಮೇ ಗೌಡ ಮತ್ತು ಪ್ರಧಾನ ಗುರುದತ್ತ (ಸಂ) ಬಿ.ಎಂ.ಶ್ರೀಯವರ ನೂರರ ನೆನಪು ಪ್ರಬುದ್ಧ ಕರ್ನಾಟಕ ಸಂಪುಟ 65 ಸಂಚಿಕೆ 4 ಮೈಸೂರು ವಿಶ್ವವಿದ್ಯಾಲಯ– 1984 |
| 10. | ಲೋಚನ | ಬಿ.ಎಂ.ಶ್ರೀ, ಸ್ಮಾರಕ ಪ್ರತಿಷ್ಠಾನ ಲೋಚನ ಶ್ರೀ ವಿಶೇಷಾಂಕ ಸಂಪುಟ 2 ಸಂಚಿಕೆ –2 –1984 |
| 11. | ಅಂತರ್ಜಾಲ | www.wikipedia.com |